13	ಸರ್ಕಾರದ ದಿನಾಂಕ: 28.08.1995ರ ಪತ್ರ ಸಂಖ್ಯೆ. ಎಫ್‌ಎಫ್‌ಡಿ 190 ಎಫ್‌ಡಬ್ಲ್ಯೂಎಲ್ 82 ಕ್ಕೆ ಅನುಸಾರವಾಗಿ ಕಂಪನಿಯು ಮೂರ್ಕಲ್ ಘಟಕದಲ್ಲಿ ಕೆಲವೊಂದು ಸ್ಥಿರ ಆಸ್ತಿಗಳ ಸ್ವಾಧೀನವನ್ನು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತಕ್ಕೆ ವಹಿಸಿಕೊಂಡಿರುತ್ತದೆ. ಮೊಬಲಗಿನ ಪಾವತಿಗಳು ಮತ್ತು ಆಸ್ತಿಗಳ ವರ್ಗಾವಣೆಯನ್ನು ಬಾಕಿ ಇರಿಸಿಕೊಂಡು ಕಂಪನಿಯು ಈ ಆಸ್ತಿಗಳ ಮೇಲೆ ಸವಕಳಿಯನ್ನು ಕಳೆಯುತ್ತಿದೆ. ಈ ಆಸ್ತಿಯ ಮೌಲ್ಯ ರೂ. 1,27,678/- ನ್ನು (ಹಿಂದಿನ ವರ್ಷ ರೂ. 1,27,678/-) ಕಂಪನಿಯ ಲೆಕ್ಕದ ಪುಸ್ತಕಗಳಲ್ಲಿ ತೋರಿಸಲಾಗುತ್ತಿದೆ. ಈ ವಿಚಾರವನ್ನು ದಿನಾಂಕ:29.06.2010ರಂದು ನಡೆದ ಕಂಪನಿಯ ನಿರ್ದೇಶಕರ ಮಂಡಳಿಯ 216ನೇ ಸಭೆಯಲ್ಲಿ ಚರ್ಚಿಸಲಾಗಿದ್ದು, ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳುವ ಸಲುವಾಗಿ ಕೆಎಫ್‌ಡಿಸಿ ಯೊಂದಿಗೆ ಪುನರ್‌ಪರಿಶೀಲನೆ ನಡೆಸಲು ಸೂಚಿಸಲಾಗಿದ್ದು, ವಿಚಾರವು ಇನ್ನೂ ಬಾಕಿ ಇರುತ್ತದೆ.
14	ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದಿಂದ ಕಂಪನಿಯು ಬೆಂಗಳೂರಿನ ಮಲ್ಲೇಶ್ವರಂನ "ವನವಿಕಾಸ" ದಲ್ಲಿ 9750 ಚದರ ಅಡಿ ವಿಸ್ತೀರ್ಣದ ಕಛೇರಿ ಸ್ಥಳವನ್ನು ಪಡೆದಿರುತ್ತದೆ. ಇದರ ಹಕ್ಕುಪತ್ರಗಳ ವರ್ಗಾವಣೆಯು ಬಾಕಿ ಇದ್ದರೂ ಕೂಡಾ, ಇದರ ಮೇಲೆ ಹಣಕಾಸಿನ ವರ್ಷ 1990-91ರಿಂದ ಸವಕಳಿಯನ್ನು ಕಳೆಯಲಾಗುತ್ತಿದೆ. ಮೇಲೆ ಉಲ್ಲೇಖಿಸಿರುವ ಮೂರ್ಕಲ್ ಆಸ್ತಿಯೂ ಸೇರಿದಂತೆ, ತಿಳಿಸಿರುವ ಆಸ್ತಿಗಳ ಹಕ್ಕುಪತ್ರ ವರ್ಗಾವಣೆ ಮತ್ತು ಈ ಬಗ್ಗೆ ಮಾಡಲಾಗಿರುವ ಪಾವತಿಗಳನ್ನು ಲೆಕ್ಕ ಹಾಕುವಿಕೆ ಮತ್ತು ಅವುಗಳ ಪುನರ್‌ಪರಿಶೀಲನೆಯನ್ನು ನಡೆಸಲು ಮಂಡಳಿಯು ನಿರ್ದೇಶನ ನೀಡಿರುತ್ತದೆ. ಕಂಪನಿಯು ಈ ಸ್ವತ್ತುಗಳಿಗೆ ಆಸ್ತಿ ತೆರಿಗೆಗಳನ್ನೂ ಪಾವತಿಸುತ್ತಿದ್ದು, ಇವುಗಳ ಹಕ್ಕು ಪತ್ರಗಳನ್ನು ವರ್ಗಾಯಿಸಲು ಕೆಎಫ್‌ಡಿಸಿ ಗೆ ಮನವಿ ಮಾಡಿರುತ್ತದೆ. ದಿನಾಂಕ: 28.06.2012ರ ಪತ್ರಕ್ಕೆ ಕೆಎಫ್‌ಡಿಸಿ ಯು ಈ ದಿನಾಂಕದವರೆಗೂ ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲ ಅಥವಾ ಹಕ್ಕುಪತ್ರಗಳನ್ನು ನೀಡಿರುವುದಿಲ್ಲ.

ಮುಂದುವರೆದಂತೆ ಬೆಂಗಳೂರಿನ ಮೈಸೂರು ರಸ್ತೆಯಲ್ಲಿರುವ ಮತ್ತು ಗೊಟ್ಟೀಪುರದಲ್ಲಿರುವ (ಸ್ವತಂತ್ರ ಹಣಕಾಸಿನ ಕೋಷ್ಟಕದ ಟಿಪ್ಪಣಿ 31ರ ಕ್ರ.ಸಂ. 12 ಮತ್ತು 14 ರಲ್ಲಿ ಉಲ್ಲೇಖಿಸಲಾಗಿರುತ್ತದೆ) ಜಮೀನಿನ ಮೌಲ್ಯವನ್ನು ಇನ್ನೂ ಗುರುತಿಸಲಾಗಿರುವುದಿಲ್ಲ ಮತ್ತು ಲೆಕ್ಕಕ್ಕೆ ತೆಗೆದುಕೊಂಡಿರುವುದಿಲ್ಲ ಹಾಗೂ ದೀರ್ಘ ಕಾಲದಿಂದ ವಿಚಾರವು ಬಾಕಿ ಇರುತ್ತದೆ.

ii. ಟಿಪ್ಪಣಿ 31ರ ಕ್ರ. ಸಂ. 5ರಲ್ಲಿ ಉಲ್ಲೇಖಿಸಿರುವಂತೆ, ಸ್ವಾಧೀನಪಡಿಸಿಕೊಳ್ಳಲಾಗಿರುವ ಮತ್ತು ಎತ್ತುವಳಿ ಮಾಡದೇ ಜಮೀನಿನಲ್ಲಿಯೇ ಇಟ್ಟಿರುವ ಗ್ರಾನೈಟ್ ಬ್ಲಾಕ್‌ಗಳನ್ನು ಹೊರತುಪಡಿಸಿ, ಆಡಳಿತ ವರ್ಗವು ವರ್ಷಾವಧಿಯಲ್ಲಿ ಸಮಂಜಸವಾದ ಮಧ್ಯಂತರ ಕಾಲಾವಧಿಯಲ್ಲಿ ತನ್ನ ದಾಸ್ತಾನುಗಳ ಭೌತಿಕ ತಪಾಸಣೆಯನ್ನು ನಡೆಸುತ್ತಿದೆ. ಪುಸ್ತಕದಲ್ಲಿರುವ ದಾಸ್ತಾನಿಗೂ ಭೌತಿಕ ಶಿಲ್ಕುಗಳಿಗೂ ವ್ಯತ್ಯಾಸ ಕಂಡುಬಂದ ಪ್ರಕರಣಗಳನ್ನು ಸೂಕ್ತವಾಗಿ ನಿರ್ವಹಿಲಾಗಿರುತ್ತದೆ.

iii. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಲಾಗಿರುವ ಮಾಹಿತಿಗಳು ಮತ್ತು ವಿವರಣೆಗಳಂತೆ, ಕಂಪನಿಗಳ ಕಾಯ್ದೆ ಕಂಡಿಕೆ 189ರ ವ್ಯಾಪ್ತಿಯಲ್ಲಿ ಬರುವಂತೆ ನಿರ್ವಹಿಸಲಾಗುವ ರಿಜಿಸ್ಟರ್‌ನಲ್ಲಿ ದಾಖಲಿಸಬೇಕಾದಂತಹ ಕಂಪನಿಗಳು, ಸಂಸ್ಥೆಗಳು ಪರಿಮಿತ ಹೊಣೆಗಾರಿಕೆಯ ಪಾಲುದಾರಿಕೆ ಸಂಸ್ಥೆಗಳು ಮತ್ತು ಇತರ ಪಾರ್ಟಿಗಳಿಗೆ ಭದ್ರತೆಯುಳ್ಳ ಅಥವಾ ಭದ್ರತೆ ಇಲ್ಲದೆ ಸಾಲಗಳನ್ನು ಕಂಪನಿಯು ಮಂಜೂರು ಮಾಡಿರುವುದಿಲ್ಲ. ಆದ್ದರಿಂದ, ಆದೇಶದ ಪ್ಯಾರಾಗ್ರಾಫ್ 3 (iii) ಕಂಪನಿಗೆ ಅನ್ವಯಿಸಲ್ಪಡುವುದಿಲ್ಲ.

iv. ಕಂಪನಿಗಳ ಕಾಯ್ದೆ 2013ರ ಕಂಡಿಕೆ 185ರ ಉಪಬಂಧಗಳಂತೆ ಕಂಪನಿಯು ಕಂಪನಿಗಳು/ಸಂಸ್ಥೆಗಳು ಮತ್ತು ಅಸೋಸಿಯೋಟ್ಸ್‌ಗಳಿಗೆ ಸಾಲಗಳನ್ನು ಮಂಜೂರು ಮಾಡಿಲ್ಲ ಅಥವಾ ಜಾಮೀನನ್ನು ಒದಗಿಸಿರುವುದಿಲ್ಲ ಅಥವಾ ಪಾರ್ಟಿಗಳಿಗೆ ಜಾಮೀನನ್ನೂ ನೀಡಿರುವುದಿಲ್ಲ. ಕಂಡಿಕೆ 186ರ ವ್ಯಾಪ್ತಿಗೆ ಬರುವಂತಹ ಹೂಡಿಕೆಗಳು ಅಥವಾ ಸಾಲುಗಳು ಅಥವಾ ಜಾಮೀನುಗಳು ಅಥವಾ ಪಾರ್ಟಿಗಳಿಗೆ ನೀಡಲಾಗಿರುವ ಕಾತರಿಗಳು ಇರುವುದಿಲ್ಲವಾದ್ದರಿಂದ ಕಂಡಿಕೆ 186ನ್ನು ಅನುಸರಿಣೆ ಮಾಡಿರುತ್ತದೆ.

v. ಕಂಡಿಕೆ 73ರಿಂದ 76ರ ವರೆಗೆ ಅಥವಾ ಕಂಪನಿಗಳ ಕಾಯ್ದೆಯ ಅನ್ವಯ ರಚಿಸಲಾಗಿರುವ ಯಾವುದೇ ನಿಯಮಗಳನ್ವಯ ಕಂಪನಿಯು ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ಸ್ವೀಕರಿಸಿಲ್ಲ,

vi. ಕಾಯ್ದೆಯ ಕಂಡಿಕೆ 148 (1)ರಂತೆ ಕೇಂದ್ರ ಸರ್ಕಾರವು ಕಂಪನಿಯ ಯಾವುದೇ ಉತ್ಪನ್ನಗಳು/ಸೇವೆಗಳಿಗೆ ವೆಚ್ಚದ ದಾಖಲೆ ಪತ್ರಗಳ ನಿರ್ವಹಣೆಯನ್ನು ಸೂಚಿಸಿಲ್ಲ.

vii. ನಮಗೆ ನೀಡಲಾದ ಮಾಹಿತಿಗಳು ಮತ್ತು ನಿಯಮಗಳು ಶಾಸನಬದ್ಧ ಬಾಕಿಗಳ ಬಗ್ಗೆ.

a) ಭವಿಷ್ಯ ನಿಧಿ, ನೌಕರರ ರಾಜ್ಯ ವಿಮಾ, ಆದಾಯ ತೆರಿಗೆ, ಮಾರಾಟ ತೆರಿಗೆ, ಅಬಕಾರಿ ಶುಲ್ಕ, ವ್ಯಾಟ್, ಸೆಸ್ ಇವುಗಳನ್ನು ಒಳಗೊಂಡಂತೆ ಶಾಸನಬದ್ಧ ಬಾಕಿಗಳನ್ನು ಕಂಪನಿಯು ವರ್ಷಾವಧಿಯಲ್ಲಿ ಎಲ್ಲಾ ಪ್ರಕರಣಗಳಲ್ಲಿಯೂ ಸಂಬಂಧಪಟ್ಟ ಪ್ರಾಧಿಕಾರಗಳಲ್ಲಿ ಸಾಮಾನ್ಯವಾಗಿ ನಿಯತವಾಗಿ ಪಾವತಿಸಿರುತ್ತಿದೆ.

b) ಕಂಪನಿಯು ಈ ಕೆಳಗೆ ತಿಳಿಸಿರುವುದನ್ನು ಹೊರತುಪಡಿಸಿ, ಆದಾಯ ತೆರಿಗೆ ಅಥವಾ ಮಾರಾಟ ತೆರಿಗೆ ಅಥವಾ ಕಸ್ಟಮ್ಸ್ ಸುಂಕ ಅಥವಾ ವ್ಯಾಟ್‌ಗಳಿಗೆ ಸಂಬಂಧಿಸಿದಂತೆ ತಕರಾರಿನ ಕಾರಣದಿಂದ ಠೇವಣಿಯನ್ನು ಇಟ್ಟಿರುವುದಿಲ್ಲ.

ಶಾಸನದ ಹೆಸರು	ಬಾಕಿಯ ರೀತಿ	ಮೊಬಲಗು ರೂ	ಮೊಬಲಗು ಪಾವತಿಗೆ ಸಂಬಂಧಿಸಿದ ಅವಧಿ	ತಕರಾರು ಬಾಕಿ ಇರುವ ನ್ಯಾಯಾಲಯ	ಷರಾ
ಫೈನಾನ್ಸ್ ಆಕ್ಟ್, 1994	ಸೇವಾ ತೆರಿಗೆ ದಂಡ ಬಡ್ಡಿ ಸೇವಾ ತೆರಿಗೆ	2297898/- 2297898/- 50000/- 1242132/-	16.05.2005 ರಿಂದ 31.03.2015 ಆ.ವ. 2008-09	ಟ್ರಿಬ್ಯೂನಲ್ ಎದುರಿನ 2ನೇ ಮನವಿ ಇತ್ಯರ್ಥವಾಗಿರುತ್ತದೆ & ವಿಚಾರವನ್ನು ಮೂಲ ವ್ಯಾಪ್ತಿಯ ಪ್ರಾಧಿಕಾರಕ್ಕೆ ವಾಪಾಸ್ಸು ಕಳುಹಿಸಲಾಗಿರುತ್ತದೆ.	
ಫೈನಾನ್ಸ್ ಆಕ್ಟ್, 1994	ಸೇವಾ ತೆರಿಗೆ (ಶಿವಮೊಗ್ಗ ಘಟಕದ ಮರದ ದಿಮ್ಮಿಯ ಚಟುವಟಿಕೆಗಳು) ಸೇವಾ ತೆರಿಗೆ (ಶಿವಮೊಗ್ಗದ ಸಾಗಾಣಿಕೆ ವೆಚ್ಚಗಳು) ಸೇವಾ ತೆರಿಗೆ	2693378/- 849120/- 374741/- 1626100/-	ಆ.ವ. 2008-09 ಆ.ವ. 2008-09 ರಿಂದ 2014-15 ಅಕ್ಟೋಬರ್ 2011 ರಿಂದ ಮಾರ್ಚ್ 2016	ಕಮಿಷನರ್ ಆಫ್ ಸೆಂಟ್ರಲ್ ಎಕ್ಸೈಸ್, ಮೈಸೂರು ಜಂಟೀ ಕಮಿಷನರ್, ಮೈಸೂರು ಇವರ ಮುಂದೆ ಮೇಲ್ಮನವಿ CESTAT ಬೆಂಗಳೂರು ಇವರ ಮುಂದೆ ಮೇಲ್ಮನವಿ ಸಲ್ಲಿಸಿದೆ.	
ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ	ಕೆವಿಟಿಎ	18909362/-	2010-11	ಗೌರವಾನ್ವಿತ ಉಚ್ಚ ನ್ಯಾಯಾಲಯದ ಮುಂದೆ ಇರುತ್ತದೆ.	

viii. ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಂತೆ ಕಂಪನಿಯು ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ಮತ್ತು ಸರ್ಕಾರದ ಬಾಕಿಗಳ ಮರುಪಾವತಿಯಲ್ಲಿ ಸುಸ್ತಿದಾರನಾಗಿರುವುದಿಲ್ಲ. ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಂತೆ, ಕಂಪನಿಯ ಅಂಗಸಂಸ್ಥೆಯಾಗಿರುವ ಸ್ವಯಂಪ್ರೇರಿತ ಸಮಾಪನೆ ಪ್ರಕ್ರಿಯೆಯಲ್ಲಿರುವ ಮೈಸೂರು ಮ್ಯಾಚ್ ಕಂಪನಿ ಲಿಮಿಟೆಡ್ ಇವರಿಗೆ ಸಾಲದ ಸೌಲಭ್ಯವನ್ನು ವಿಸ್ತರಿಸುವ ಸಲುವಾಗಿ ಕಂಪನಿಯು ಕರ್ನಾಟಕ ಸರ್ಕಾರದಿಂದ ರೂ. 23,20,000/- ಸಾಲಗಳನ್ನು ಪಡೆದಿರುತ್ತದೆ. ಈ ಅಂಗಸಂಸ್ಥೆಯ ಆಸ್ತಿಗಳ ಮಾರಾಟದಿಂದ ವಸೂಲಾಗಬಹುದಾದ ಮೊಬಲಗಿನಿಂದ ಈ ಸಾಲವನ್ನು ತೀರಿಸಲಾಗುವುದು. ಕಂಪನಿಯು ಯಾವುದೇ ಸಾಲಪತ್ರಗಳನ್ನೂ ಹೊರಡಿಸಿರುವುದಿಲ್ಲ.

ix. ವರ್ಷಾವಧಿಯಲ್ಲಿ ಕಂಪನಿಯು ಪ್ರಾರಂಭಿಕ ಸಾರ್ವಜನಿಕ ವಾಗ್ದಾನ ಪತ್ರ ಅಥವಾ ಮುಂದಿನ ಸಾರ್ವಜನಿಕ ವಾಗ್ದಾನ (ಸಾಲಪತ್ರಗಳು ಸೇರಿದಂತೆ) ಪತ್ರ ಮತ್ತು ಅವಧಿ ಸಾಲಗಳ ಮೂಲಕ ಹಣವನ್ನು ಎತ್ತುವಳಿ ಮಾಡಿಲ್ಲ. ಆದ್ದರಿಂದ ಆದೇಶದ ಕಂಡಿಕೆ 3(ix) ಅನ್ವಯವಾಗುವುದಿಲ್ಲ.

x. ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ವಿತ್ತೀಯ ವರ್ಷದಲ್ಲಿ ಮೈಸೂರು ಘಟಕದ ಬನ್ನೂರು ಉರುವಲು ಸೌದೆ ಡಿಪೋದಲ್ಲಿ 1520.60 M3 (661.565 MT) ಉರುವಲು ದಾಸ್ತಾನು ರೂ. 23,81,634/-ಯ ದುರ್ಬಳಕೆ ಆಗಿರುವುದು ಕಾರ್ಯ ನಿರ್ವಾಹಕ ಮಂಡಳಿಯ ಗಮನಕ್ಕೆ ಬಂದು ವರದಿಯಾಗಿರುವುದು ತಿಳಿದುಬಂದಿರುತ್ತದೆ. ಕಂಪನಿಯು ಸಂಬಂಧಿಸಿದ ಡಿಪೋ ಇನ್‌ಚಾರ್ಜ್‌ನ ವಿರುದ್ಧವಾಗಿ ದೋಷಾರೋಪಣಪಟ್ಟಿಯನ್ನು ಜಾರಿ ಮಾಡಿ ವಿಚಾರಣೆಗೆ ಆದೇಶಿಸಲಾಗಿದೆ. ಎರವಲು ಸೇವೆಯ ಮೇಲಿರುವ ಅಧಿಕಾರಿಯ ಮೇಲೆ ಈ ದುರುಪಯೋಗದ ಬಗ್ಗೆ ವಿಚಾರಣೆ ನಡೆಸಲು ಸರ್ಕಾರಕ್ಕೆ ವರದಿ ಮಾಡಲಾಗಿದೆ. ದುರುಪಯೋಗವಾದ ರೂ. 23,81,634/- ಮೊತ್ತದಲ್ಲಿ ರೂ. 16,00,000/-ನ್ನು ಆಗಿನ ಪ್ರಾದೇಶಿಕ ವ್ಯವಸ್ಥಾಪಕರಿಂದ ವಸೂಲಿ ಮಾಡಲಾಗಿದೆ ಎಂದು ಸಂಸ್ಥೆ ತಿಳಿಸಿದೆ ಮತ್ತು ಮತ್ತಷ್ಟು ವಿಚಾರಣೆ ಪ್ರಗತಿಯಲ್ಲಿರುವುದಾಗಿ ತಿಳಿದುಬಂದಿರುತ್ತದೆ.

xi. ಕಂಪನಿಯು ಸರ್ಕಾರಿ ಕಂಪನಿಯಾಗಿದ್ದು, ಆಡಳಿತ ವರ್ಗದ ಸಿಬ್ಬಂಧಿಯ ಸಂಭಾವನೆಯ ಪಾವತಿಗೆ ಕರ್ನಾಟಕ ಸರ್ಕಾರವು ಒಪ್ಪಿಗೆ ನೀಡಿರುತ್ತದೆ. ಆದ್ದರಿಂದ ಆಡಳಿತ ವರ್ಗದ ಸಂಭಾವನೆಗೆ ಸಂಬಂಧಿಸದಂತೆ, ಕಾಯ್ದೆಯ ಕಂಡಿಕೆ 197 ಈ ಕಂಪನಿಗೆ ಅನ್ವಯಿಸಲ್ಪಡುವುದಿಲ್ಲ.

xii. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಲಾದ ಮಾಹಿತಿಳು ಮತ್ತು ವಿವರಣೆಗಳಂತೆ ಕಂಪನಿಯು ನಿಧಿ ಕಂಪನಿ ಆಗಿರುವುದಿಲ್ಲ. ಆದ್ದರಿಂದ ಆದೇಶದ ಕಂಡಿಕೆ 3(xii) ಅನ್ವಯವಾಗುವುದಿಲ್ಲ.

xiii. ಕಂಪನಿಗಳ ಕಾಯ್ದೆ, 2013ರ ಕಂಡಿಕೆ 2 (45)ರ ಅರ್ಥವ್ಯಾಪ್ತಿಯಲ್ಲಿ ಕಂಪನಿಯು ಸರ್ಕಾರಿ ಕಂಪನಿಯಾಗಿರುತ್ತದೆ ಮತ್ತು ಎಲ್ಲಾ ನಿರ್ದೇಶಕರನ್ನು ಸರ್ಕಾರವೇ ನೇಮಕಾತಿ ಮಾಡುವುದರಿಂದ ಸಂಬಂಧಪಟ್ಟ ಪಾರ್ಟಿಗಳೊಂದಿಗೆ ಕಂಪನಿಯ ವ್ಯವಹಾರವು ಅನ್ವಯಿಸಲ್ಪಡುವುದಿಲ್ಲ. ಆದ್ದರಿಂದ ಆದೇಶದ ಪ್ಯಾರ 3(xiii) ಅನ್ವಯವಾಗುವುದಿಲ್ಲ.

xiv. ನಮಗೆ ನೀಡಲಾಗಿರುವ ಮಾಹಿತಿಗಳು ಮತ್ತು ವಿವರಣೆಗಳಂತೆ ಕಂಪನಿಯು ವರ್ಷಾವಧಿಯಲ್ಲಿ ಷೇರುಗಳನ್ನು ಆದ್ಯತೆಯ ಮೇಲೆ ಹಂಚಿಕೆ, ಅಥವಾ ಷೇರುಗಳ ಖಾಸಗೀ ನಿಯೋಜನೆ ಅಥವಾ ಸಂಪೂರ್ಣವಾಗಿ ಅಥವಾ ಭಾಗಶಃ ಪರಿವರ್ತಿಸಬಹುದಾದ ಸಾಲ ಪತ್ರಗಳನ್ನು ಬಿಡುಗಡೆ ಮಾಡಿರುವುದಿಲ್ಲ.

xv. ನಮಗೆ ನೀಡಲಾಗಿರುವ ಮಾಹಿತಿಗಳು ಮತ್ತು ವಿವರಣೆಗಳಂತೆ ಹಾಗೂ ನಾವು ನಡೆಸಿರುವ ದಾಖಲೆ ಪತ್ರಗಳ ಪರಿಶೀಲನೆಯಂತೆ, ಕಂಪನಿಯು ನಿರ್ದೇಶಕರೊಂದಿಗೆ ಅಥವಾ ಅವರಿಗೆ ಸಂಬಂಧಿಸಿದ ವ್ಯಕ್ತಿಗಳೊಂದಿಗೆ ನಗದು ರಹಿತ ವ್ಯವಹಾರ ನಡೆಸಿಲ್ಲ. ಆದ್ದರಿಂದ ಆದೇಶದ ಕಂಡಿಕೆ 3(xv) ಅನ್ವಯವಾಗುವುದಿಲ್ಲ.

xvi. ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ 1934ರ ಕಂಡಿಕೆ 45-IA ಯ ಅಡಿಯಲ್ಲಿ ಕಂಪನಿಯನ್ನು ನೋಂದಾಯಿಸುವ ಅಗತ್ಯವಿರುವುದಿಲ್ಲ. ಆದ್ದರಿಂದ ಆದೇಶದ ಕಂಡಿಕೆ 3(xvi) ಅನ್ವಯವಾಗುವುದಿಲ್ಲ.

ಪಿಎನ್‌ಆರ್ & ಕಂ.,
ಸನ್ನದು ಲೆಕ್ಕಿಗರ ಪರವಾಗಿ
ಸಂಸ್ಥೆ ನೋಂದಣಿ ಸಂಖ್ಯೆ : 002495S
ಸಹಿ/-
(ಗುರುಪ್ರಸಾದ್ ಭಾದ್ಯ)
ಪಾಲುದಾರರು
ಸದಸ್ಯತ್ವದ ಸಂಖ್ಯೆ: 234052

ದಿನಾಂಕ: 17.10.2018
ಸ್ಥಳ : ಬೆಂಗಳೂರು

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ–B

(ನಮ್ಮ ಇದೇ ದಿನಾಂಕದ ವರದಿಯ ಕಂಡಿಕೆ 8(f)ರಲ್ಲಿ ಉಲ್ಲೇಖಿಸಿರುವಂತೆ)

ಕಂಪನಿಗಳ ಕಾಯ್ದೆ 2013ರ ("ದಿ ಆಕ್ಟ್") ಕಂಡಿಕೆ 143, ಉಪ ಕಂಡಿಕೆ 3(i) ರಂತೆ ಆಂತರಿಕ ಹಣಕಾಸಿನ ನಿಯಂತ್ರಣದ ಮೇಲೆ ವರದಿ

1. ನಾವು, 31ನೇ ಮಾರ್ಚ್ 2018ರಲ್ಲಿ ಇರುವಂತೆ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮತದ ("ದಿ ಕಂಪನಿ') ಹಣಕಾಸಿನ ವರದಿ ಮಾಡುವಿಕೆಯ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಬಗ್ಗೆ ಆ ದಿನಾಂಕದಂದು ಕೊನೆಯಾಗುವ ವರ್ಷದ ಪ್ರತ್ಯೇಕ ಆರ್ಥಿಕ ವಿವರಣಾ ಪಟ್ಟಿಗಳ ಕೋಷ್ಟಕದ ಸಂಯೋಗದೊಂದಿಗೆ ಲೆಕ್ಕಪರಿಶೋಧನೆ ನಡೆಸಿರುತ್ತೇವೆ.

ಆಂತರಿಕ ಹಣಕಾಸಿನ ನಿಯಂತ್ರಣಗಳಿಗೆ ಆಡಳಿತ ವರ್ಗದ ಜವಾಬ್ದಾರಿ

2. ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣ ವರದಿಗಳಿಗೆ ಸಂಬಂಧಿಸಿದಂತೆ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಇವರು ಹೊರಡಿಸಿರುವ ಮಾರ್ಗದರ್ಶಿ ಟಿಪ್ಪಣಿಯಂತೆ ಕಂಪನಿಯ ಹಣಕಾಸಿನ ವರದಿ ಮಾಡುವಿಕೆ ನೀತಿಯ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಯನ್ನು ಸ್ಥಾಪಿಸಿ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣವನ್ನು ಕಾಪಾಡಿಕೊಂಡು ಬರುವುದು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿರುತ್ತದೆ. ಕಂಪನಿಯ ಕಾರ್ಯನೀತಿಯನ್ನು ಪಾಲಿಸಿಕೊಂಡು ಹೋಗುವುದು, ವಂದನೆಗಳು ಮತ್ತು ಲೋಪಗಳನ್ನು ತಡೆಗಟ್ಟುವುದು ಮತ್ತು ಕಂಡುಹಿಡಿಯುವುದು, ಲೆಕ್ಕಪತ್ರಗಳ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ ಮತ್ತು ಕಂಪನಿಗಳ ಕಾಯ್ದೆ 2013ರ ಪ್ರಕಾರ ಕೇಳಿರುವಂತೆ ಕ್ಲುಪ್ತ ಸಮಯದಲ್ಲಿ ನಂಬಲರ್ಹ ಹಣಕಾಸಿನ ಕೋಷ್ಟಕಗಳನ್ನು ಸಿದ್ದಪಡಿಸುವುದು ಈ ಜವಾಬ್ದಾರಿಗಳಲ್ಲಿ ಸೇರಿರುತ್ತದೆ.

ಲೆಕ್ಕಪರಿಶೋಧಕರ' ಜವಾಬ್ದಾರಿ

3. ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಕಂಪನಿಯ ಹಣಕಾಸಿನ ಪಟ್ಟಿಯ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಮೇಲೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಇವರು ಹೊರಡಿಸಿರುವ ಮಾರ್ಗದರ್ಶಿ ಟಿಪ್ಪಣಿ ಆಡಿಟ್ ಆಫ್ ಇಂಟರ್ನಲ್ ಫೈನಾನ್ಷಿಯಲ್ ಕಂಟ್ರೋಲ್ಸ್ ಓವರ್ ಫೈನಾನ್ಷಿಯಲ್ ರಿಪೋರ್ಟಿಂಗ್ ("ದಿ ಗೈಡೆನ್ಸ್ ನೋಟ್") ಮತ್ತು ಐಸಿಎಐ ಅವರು ಹೊರಡಿಸಿರುವ ಲೆಕ್ಕಪರಿಶೋಧನಾ ಮಾನಕಗಳು ಎರಡನ್ನೂ ಸೇರಿಸಿ ಮತ್ತು ಕಂಪನಿಗಳ ಕಾಯ್ದೆ 2013ರ ಕಂಡಿಕೆ 143(10)ನ್ನು ಆಂತರಿಕ ಹಣಕಾಸಿನ ನಿಯಂತ್ರಣ ಲೆಕ್ಕಪರಿಶೋಧನೆಗೆ ಅನ್ವಯಿಸುವಷ್ಟು ಪರಿಗಣಿಸಿ ನಿರ್ಧಿಷ್ಟವಾಗಿ ನಿಗಧಿಪಡಿಸಿರುವಂತೆ ಮತ್ತು ಲೆಕ್ಕಪರಿಶೋಧನಾ ಮಾನಕಗಳಿಗೆ ಅನುಸಾರವಾಗಿ ನಾವು ಲೆಕ್ಕಪರಿಶೋಧನೆಯನ್ನು ನಿರ್ವಹಿಸುವುದು ನಮ್ಮ ಜವಾಬ್ದಾರಿಯಾಗುತ್ತದೆ. ಅಂತಹ ಮಾನಕಗಳು ಮತ್ತು ಮಾರ್ಗದರ್ಶಿ ಟಿಪ್ಪಣಿಗಳ ಅನ್ವಯ ನೈತಿಕ ಅಗತ್ಯತೆಗಳು ಮತ್ತು ಯೋಜನೆ ಮತ್ತು ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಧಿಸಲ್ಪಟ್ಟಿವೆಯೇ ಮತ್ತು ಮುಂದುವರಿಸಿಕೊಂಡು ಹೋಗಲಾಗಿದೆಯೇ ಎಂಬ ಬಗ್ಗೆ ಸಮಂಜಸವಾದ ಭರವಸೆಯನ್ನು ಹೊಂದುವುದರ ಜೊತೆಗೆ ಎಲ್ಲ ಭೌತಿಕ ಅಂಶಗಳಲ್ಲೂ ಅಂತಹ ಆಂತರಿಕ ನಿಯಂತ್ರಣ ವ್ಯವಸ್ಥೆಯು ಕಾರ್ಯ ನಿರ್ವಹಿಸಲ್ಪಡುತ್ತದೆಯೋ ಎಂಬ ಬಗ್ಗೆ ಕೂಡಾ ಖಚಿತಪಡಿಸಿಕೊಳ್ಳುವುದು ಅಗತ್ಯವಾಗಿರುತ್ತದೆ.

4. ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಯ ಸಮರ್ಪಕತೆ ಬಗ್ಗೆ ಲೆಕ್ಕಪರಿಶೋಧನಾ ಸಾಕ್ಷ್ಯಗಳನ್ನು ಪಡೆಯುವುದು ಮತ್ತು ಅವುಗಳ ಪರಿಣಾಮಕಾರೀ ಕಾರ್ಯ ನಿರ್ವಹಣೆಯನ್ನು ದೃಢೀಕರಿಸುವುದು ನಮ್ಮ ಲೆಕ್ಕಪರಿಶೋಧನೆಯಲ್ಲಿ ಸೇರಿದೆ. ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಲೆಕ್ಕ ಪರಿಶೋಧನೆಯಲ್ಲ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣವನ್ನು ಸಾಧಿಸುವುದು ಮತ್ತು

ಅರ್ಥಮಾಡಿಕೊಳ್ಳುವುದು, ಇರಬಹುದಾದ ಭೌತಿಕ ದೌರ್ಬಲ್ಯಗಳ ಅಪಾಯಗಳನ್ನು ನಿರ್ಣಯಿಸುವುದು, ನಿರ್ಣಯಿಸಲ್ಪಟ್ಟ ದೌರ್ಬಲ್ಯಗಳನ್ನು ಪರೀಕ್ಷಿಸಿ ವಿನ್ಯಾಸದ ಮೌಲ್ಯಮಾಪನ ಮಾಡಿ ಪರಿಣಾಮಕಾರೀ ಕಾರ್ಯ ನಿರ್ವಹಣೆಯು ಆಂತರಿಕ ನಿಯಂತ್ರಣ ವ್ಯವಸ್ಥೆಯು ನಮ್ಮ ಲೆಕ್ಕಪರಿಶೋಧನೆಯಲ್ಲಿ ಸೇರಿದೆ. ಆಯ್ಕೆ ಮಾಡಲ್ಪಟ್ಟ ಈ ಪದ್ಧತಿಯು ವಂಚನೆಯ ಅಥವಾ ತಪ್ಪಿನ ಕಾರಣದಿಂದ ಹಣಕಾಸಿನ ತಪ್ಪು ಹೇಳಿಕೆಗಳ ಮೌಲ್ಯಮಾಪನದ ಅಪಾಯವನ್ನು ಅಂದಾಜಿಸುವುದೂ ಸೇರಿದಂತೆ ಲೆಕ್ಕಪರಿಶೋಧಕರ ತೀರ್ಮಾನವನ್ನು ಅವಲಂಭಿಸಿರುತ್ತದೆ.

5. ನಾವು ಪಡೆದಿರುವ ಲೆಕ್ಕಪರಿಶೋಧನಾ ಸಾಕ್ಷ್ಯಗಳು, ಕಂಪನಿಯ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಬಗ್ಗೆ ಲೆಕ್ಕಪರಿಶೋಧನಾ ಅಭಿಪ್ರಾಯ ನೀಡಲು ಸಾಕಷ್ಟು ಸೂಕ್ತ ಆಧಾರ ನೀಡುತ್ತದೆ ಎಂದು ನಾವು ನಂಬುತ್ತೇವೆ.

ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಅರ್ಥ

6. ಒಂದು ಕಂಪನಿಯ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣವು ಹಣಕಾಸಿನ ಸ್ಥಿತಿಯ ಬಗ್ಗೆ ವಿಶ್ವಾಸಾರ್ಹ ವರದಿ ಮಾಡುವಿಕೆಯ ಬಗ್ಗೆ ಯೋಗ್ಯವಾದ ಭರವಸೆಯನ್ನು ಒದಗಿಸುವುದು ಮತ್ತು ಸಾಮಾನ್ಯವಾಗಿ ಒಪ್ಪಲ್ಪಟ್ಟ ಲೆಕ್ಕಪತ್ರ ಸಿದ್ಧಾಂತಗಳಂತೆ ಬಾಹ್ಯ ಉದ್ದೇಶಗಳಿಗಾಗಿ ಹಣಕಾಸಿನ ಕೋಸ್ಟಕಗಳನ್ನು ಸಿದ್ದಪಡಿಸಲು ವಿನ್ಯಾಸಗೊಳಿಸಲಾಗಿರುವ ಕಾರ್ಯ ವಿಧಾನವಾಗಿರುತ್ತದೆ. ಕಂಪನಿಯ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದಲ್ಲಿ ಈ ಕೆಳಕಂಡ ನೀತಿ ಮತ್ತು ವಿಧಾನಗಳನ್ನು ಒಳಗೊಂಡಿದ್ದು, ಅವುಗಳು: (1) ಕಂಪನಿಯ ಆಸ್ತಿಗಳ ವ್ಯವಹಾರ ಮತ್ತು ವಿಲೇವಾರಿಯನ್ನು ನಿಖರವಾಗಿ ಮತ್ತು ನ್ಯಾಯಯುತವಾಗಿ ಪ್ರತಿಬಿಂಬಿಸಲು ಪೂರಕವಾದ, ಸಾಕಷ್ಟು ವಿವರವಾದ ದಾಖಲೆ ಪತ್ರಗಳನ್ನು ನಿರ್ವಹಿಸುವುದು: (2) ಸಾಮಾನ್ಯವಾಗಿ ಒಪ್ಪಲ್ಪಟ್ಟ ಲೆಕ್ಕಪತ್ರ ಮಾನಕಗಳಿಗೆ ಅನುಸಾರವಾಗಿ ಹಣಕಾಸಿನ ಕೋಸ್ಟಕಗಳನ್ನು ಸಿದ್ಧಪಡಿಸಲು ಅನುವಾಗುವಂತೆ ವ್ಯವಹಾರಗಳನ್ನು ದಾಖಲಿಸುವ ಸೂಕ್ತ ಭರವಸೆ ನೀಡುವುದೂ ಅಲ್ಲದೆ, ಕಂಪನಿಯ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ಕಂಪನಿಯ ಆಡಳಿತ ಮಂಡಳಿ ಮತ್ತು ನಿರ್ದೇಶಕರ ಒಪ್ಪಿಗೆಯ ಅನುಸಾರ ಮಾತ್ರ ಮಾಡುವ ವ್ಯವಸ್ಥೆ ಹೊಂದಿರುವುದು ಮತ್ತು (3) ಕಂಪನಿಯ ಹಣಕಾಸಿನ ಕೋಸ್ಟಕಗಳ ಮೇಲೆ ಪರಿಣಾಮ ಬೀರುವಂತಹ ಕಂಪನಿಗಳ ಆಸ್ತಿಗಳನ್ನು ಅನಧಿಕೃತವಾಗಿ ಸ್ವಾಧೀನಪಡಿಸಿಕೊಳ್ಳುವಿಕೆ, ಉಪಯೋಗಿಸಿಕೊಳ್ಳುವಿಕೆ, ಅಥವಾ ವಿಲೇವಾರಿಯನ್ನು ತಡೆಯುವುದು ಮತ್ತು ಸಕಾಲದಲ್ಲಿ ಕಂಡುಹಿಡಿಯುವ ಬಗ್ಗೆ ವಿವೇಚನಾಯುಕ್ತ ಭರವಸೆಯನ್ನು ನೀಡುವುದು.

ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಅಂತರ್ಗತ ಮಿತಿಗಳು

7. ಒಳಸಂಚೂ ಸೇರಿದಂತೆ ಅಥವಾ ನಿಯಂತ್ರಣಗಳ ಮೇಲೆ ಅಸಮರ್ಪಕ ಆಡಳಿತ ವ್ಯವಸ್ಥೆ ಸವಾರಿ ಮಾಡುವುದು, ದೋಷಗಳಿಂದಾಗಿ ಅಥವಾ ವಂಚನೆಗಳಿಂದಾಗಿ ಭೌತಿಕ ತಪ್ಪು ಹೇಳಿಕೆಗಳು ಕಾಣಿಸಿಕೊಂಡು ಪತ್ತೆ ಮಾಡಲಾಗದೇ ಇರುವುದು, ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಅಂತರ್ಗತ ಮಿತಿಗಳಾಗಿರುತ್ತವೆ. ಅಲ್ಲದೆ, ಭವಿಷ್ಯದ ಅವಧಿಗಳಿಗೆ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಭವಿಷ್ಯದ ಅಂದಾಜು ಮೌಲ್ಯಮಾಪನವು ಅಪಾಯಕ್ಕೆ ಸಿಲುಕುವ ಸಾಧ್ಯತೆ ಇರುತ್ತದೆ. ಏಕೆಂದರೆ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣವು ಪರಿಸ್ಥಿತಿಯ ಬದಲಾವಣೆಗಳಿಂದಾಗಿ ಅಸಮರ್ಪಕವಾಗಬಹುದು ಅಥವಾ ನೀತಿ ಅಥವಾ ಪದ್ಧತಿಗಳು ಅನುಸರಿಸುವಿಕೆಯ ಮಟ್ಟವು ಕ್ಷೀಣಿಸುವ ಸಾಧ್ಯತೆಯೂ ಇರುತ್ತದೆ.

ಪರಿಣಿತ ಅಭಿಪ್ರಾಯ

8. ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಂತೆ ಮತ್ತು ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ 31.03.2018ರಲ್ಲಿ ಇರುವಂತೆ ಈ ಕೆಳಕಂಡ ವಾಸ್ತವಿಕ ದೌರ್ಬಲ್ಯಗಳನ್ನು ನಾವು ಗುರುತಿಸಿರುತ್ತೇವೆ.

a) ಈ ಕೆಳಕಂಡ ವಿಷಯಗಳಲ್ಲಿ ಲೆಕ್ಕಪತ್ರಗಳಲ್ಲಿನ ಶಿಲ್ಕುಗಳಿಗೆ ದೃಢೀಕರಣವನ್ನು ಕಾಲಕಾಲಕ್ಕೆ ಪಡೆಯುವ ಮತ್ತು ಅವುಗಳ ಪುನರ್ ಪರಿಶೀಲನೆಯನ್ನು ಮಾಡುವ ವ್ಯವಸ್ಥೆ ಇರುವುದಿಲ್ಲ.

1. ಬ್ಯಾಂಕ್ ಶಿಲ್ಕುಗಳು
2. ವ್ಯವಹಾರಿಕ ಸ್ವೀಕಾರಾರ್ಹವಾದವುಗಳು
3. ವ್ಯಾವಹಾರಿಕ ಪಾವತಿಸತಕ್ಕವುಗಳು
4. ಗ್ರಾಹಕರಿಂದ ಮುಂಗಡ
5. ಸಾಲಗಳು ಮತ್ತು ಮುಂಗಡಗಳು
6. ಅಂತರ್‌ಘಟಕ ವಹಿವಾಟುಗಳು

b) ಬಿಲ್ಲುಗಳನ್ನು ಗಣನೆಗೆ ತೆಗೆದುಕೊಳ್ಳುವ ವ್ಯವಸ್ಥೆ ಇಲ್ಲ ಮತ್ತು ಸ್ವೀಕರಿಸಿದಾಗ ಮತ್ತು ಅನೇಕ ಸಂದರ್ಭಗಳಲ್ಲಿ, ಬಿಲ್ಲುಗಳನ್ನು ಲೆಕ್ಕಹಾಕುವಲ್ಲಿ ವಿಳಂಬವಾಗಿದ್ದವು, ಪ್ರಸ್ತುತ ಬಿಲ್ಲುಗಳನ್ನು ಸ್ವೀಕರಿಸಿದ ನಂತರ ಮತ್ತು ಹೊಣೆಗಾರಿಕೆಯನ್ನು ಸ್ಥಾಪಿಸುವ ಬದಲು, ಅನುಮೋದನೆಯನ್ನು ಸಲ್ಲಿಸುವ ಮತ್ತು ಪಡೆದುಕೊಳ್ಳುವಲ್ಲಿ ಪ್ರಕ್ರಿಯೆಗೊಳಿಸಿದ ನಂತರ ಬಿಲ್ಲುಗಳನ್ನು ಗಣನೆಗೆ ತೆಗೆದಕೊಳ್ಳಲ್ಪಡುತ್ತವೆ. ಪರಿಣಾಮವಾಗಿ, ಅಂಗೀಕಾರಗಳು ಎಲ್ಲಿಯವರೆಗೆ ದೊರೆಯದಿದ್ದಲ್ಲಿ, ಈ ಬಿಲ್ಲುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗಲಿಲ್ಲ. ಇದರಿಂದಾಗಿ ಅದು ಮುಂಚಿನ ಅವಧಿಗೆ ಖರ್ಚು ಎಂದಾಗುತ್ತದೆ.

c) ಕ್ರೀಡಾ ಬಿಲ್ಲುಗಳಿಗೆ ಸಮರ್ಥ ಅಧಿಕಾರಿಯ ಅನುಮೋದನೆ ಇರುವ ಬಗ್ಗೆ ಲಭ್ಯಪಡಿಸಿರುವುದಿಲ್ಲ

d) ಮೈಸೂರು ಘಟಕದಲ್ಲಿ ಜರ್ನಲ್ ವೋಚರಗಳನ್ನು (Journal Vouchers) ನಗದು ವಹಿವಾಟುಗಳಿಗೆ ಪೋಸ್ಟ್ ಮಾಡಲು ಬಳಸಲಾಗುತ್ತಿದೆ.

e) ಮಂಗಳೂರು ಘಟಕದಲ್ಲಿ ದಿನಾಂಕ: 17.03.2018 ರಂದು ಪೀಠೋಪಕರಣಗಳಿಗಾಗಿ ಪಡೆದ ಮುಂಗಡ ರೂ. 2,16,900 ಅನ್ನು ಆಧರಿಸಿ ಪೀಠೋಪಕರಣಗಳು ಮಾರಾಟವಾಗಿದೆ ಎಂದು ಗುರುತಿಸಲಾಗಿದೆ. ಪೀಠೋಪಕರಣಗಳ ಖರೀದಿ ಇಲ್ಲದಿದ್ದರೂ ಈ ರೀತಿ ಮಾರಾಟವನ್ನು ತೋರಿಸಿರುವ ಬಗ್ಗೆ ಗಮನಕ್ಕೆ ತಂದಾಗ ಪೀಠೋಪಕರಣಗಳ ಖರೀದಿ ಮಾಡಲಾಗಿದೆ ಎಂದು ತೋರಿಸಲಾಗಿದೆ.

f) ಹಿಂದಿನ ವರ್ಷದಂತೆ ಪಟ್ಟಿಗಳನ್ನು ಸ್ಥಿರವಾಗಿ ಮೌಲೀಕರಿಸಲಾಗಿದ್ದರೂ ಸಹ, ಕಾರ್ಯ ನಿರ್ವಾಹಕ ಮಂಡಳಿಯು ಪಲ್ಪ್‌ವುಡ್ ಮತ್ತು ಉರುವಲು ಕಟ್ಟಿಗೆಯ ಮೌಲ್ಯಮಾಪನಕ್ಕೆ ಸ್ಪಷ್ಟವಾದ ನೀತಿಯನ್ನು ಹೊಂದಿರಬೇಕಾಗುತ್ತದೆ ಏಕೆಂದರೆ ರಾಯಲ್ಟಿಯನ್ನು ಘನ ಮೀಟರ್‌ನ ಆಧಾರದ ಮೇಲೆ ಪರಿಗಣಿಸಿ ಮಾರಾಟವನ್ನು ಮೆಟ್ರಿಕ್ ಟನ್ ಆಧಾರದ ಮೇಲೆ ಪರಿಗಣಿಸಿ ಅಂತಿಮ ದಾಸ್ತಾನಿನ ಮೌಲ್ಯಮಾಪನಕ್ಕೆ ಕಾರಣವಾಗಿದ್ದರೆ, ಉಳಿತಾಯವು ನಿಶ್ಚಿತ ವೆಚ್ಚಕ್ಕೆ ನಿಯೋಜಿಸಲಾಗುವುದಿಲ್ಲ. ತಯಾರಿಕಾ ವೆಚ್ಚಗಳನ್ನು ನಿಜವಾಗಿ ಮಾರಾಟವಾದ ಪರಿಮಾಣಕ್ಕೆ ಪರಿಗಣಿಸುವ ಬದಲು ಘನ ಮೀಟರ್ ನಿಂದ ಮೆಟ್ರಿಕ್ ಟನ್‌ಗೆ ಪರಿವರ್ತಿಸಿದ ಪರಿಮಾಣದಂತೆ ಪಾವತಿಸಲು ಪ್ರಾದೇಶಿಕ ವ್ಯವಸ್ಥಾಪಕರು, ಬೆಂಗಳೂರಿನಲ್ಲಿ ಪಾಲಿಸಿದಂತೆ, ಅಂತೆಯೇ ನೀತಿಯಲ್ಲಿ ವಿಕಸಿಗೊಳ್ಳಬೇಕಾಗಿರುತ್ತದೆ.

g) ಸ್ಥಿರ ಠೇವಣಿಗಳ ರಿಜಿಸ್ಟರನ್ನು ನಿರ್ವಹಿಸಿರುವುದಿಲ್ಲ

h) ಲೆಕ್ಕಪತ್ರಗಳ ಶಿಲ್ಕುಗಳನ್ನು ಕಾಲಕಾಲಕ್ಕೆ ಪರಿಶೀಲನೆ ನಡೆಸದೇ ಇರುವುದರಿಂದ ಲೆಕ್ಕದ ಪುಸ್ತಕಗಳಲ್ಲಿ ಬಹಳ ಕಾಲದಿಂದ ಬಾಕಿ ಇರುವ ಹಲವಾರು ವಿಷಯಗಳನ್ನು ಹಣಕಾಸಿನ ಕೋಷ್ಟಕಗಳಲ್ಲಿ ಪ್ರತೀ ವರ್ಷವೂ ಸತತವಾಗಿ ಪುನರಾವರ್ತನೆಯೊಂದಿಗೆ ಘೋಷಿಸಲ್ಪಟ್ಟಿರುತ್ತದೆ.

i) ದೀರ್ಘಕಾಲದಿಂದ ಬಾಕಿ ನಿಂತಿರುವ ಬಾಕಿಗಳ ವಸೂಲಿಗೆ ಅನುಗುಣವಾಗುವಂತೆ, ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಯನ್ನು ಬಲಪಡಿಸಬೇಕಾಗಿದ್ದು, ಅಂತಹ ಬಾಕಿಗಳ ವಸೂಲಿಗೆ ಕೈಗೊಳ್ಳಲಾಗಿರುವ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಬೇಕಾಗಿರುತ್ತದೆ.

j) ಟ್ಯಾಲಿ ಲೆಕ್ಕಹಾಕುವಿಕೆಗೆ ಸಂಬಂಧಿಸಿದಂತೆ ಮಾಹಿತಿ ಪಡೆಯುವ ಹಕ್ಕುಗಳನ್ನು ವಿವರಿಸಿರುವುದಿಲ್ಲ ಮತ್ತು ಸರಿಯಾದ ಕ್ರಮದಲ್ಲಿ ಇಟ್ಟಿರುವುದಿಲ್ಲ. ಟ್ಯಾಲಿ ಅಕೌಂಟಿಂಗ್ ಸಾಫ್ಟ್‌ವೇರ್‌ನ್ನು ಹಣಕಾಸಿನ ಲೆಕ್ಕಹಾಕುವಿಕೆಗಾಗಿ ನಿರ್ವಹಿಸಲಾಗುತ್ತದೆ. (ಪ್ರಮಾಣದ ಆಧಾರದ ಮೇಲೆ) ಆದಾಗ್ಯೂ, ಮಂಗಳೂರು ಮತ್ತು ಧಾರವಾಡ ಘಟಕಗಳಲ್ಲಿ ಟ್ಯಾಲಿ ಅಕೌಂಟಿಂಗ್ ಸಾಫ್ಟ್‌ವೇರ್ ಸಾಮಗ್ರಿಗಳ ಲೆಕ್ಕಹಾಕುವಿಕೆಗೂ ಸಂಯೋಜಿತವಾಗಿರುವುದಿಲ್ಲ.

k) ವ್ಯವಹಾರಿಕ ಸಾಲ ನೀಡಿರುವವರಿಗೆ ಸಂಬಂಧಿಸಿದಂತೆ, ವಿಶೇಷವಾಗಿ ದೀರ್ಘ ಸಮಯದಿಂದ ಪಾವತಿಸಬೇಕಾಗಿರುವ ಬಾಕಿಗಳು, ಟೆಂಡರುಗಳನ್ನು ಅಂತಿಮಗೊಳಿಸಲಾಗಿದ್ದರೂ ಕೂಡ ಹಿಂದಿಟ್ಟುಕೊಳ್ಳಲಾಗಿರುವ ಸಂಚಕಾರ ಠೇವಣಿಗಳು ಮತ್ತು ಇತರ ಹೊಣೆಗಾರಿಕೆಗಳಿಗೆ ಸಂಬಂಧಿಸಿದಂತೆ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಈಗ ಬಲಪಡಿಸಬೇಕಾಗಿರುತ್ತದೆ.

l) ಗ್ರಾಹಕರ ಸಾಲದ ಮಿತಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣವನ್ನು ಇನ್ನೂ ಉತ್ತಮವಾಗಿ ವ್ಯಾಖ್ಯಾನಿಸಿ, ಕಾಲಕಾಲಕ್ಕೆ ವಿಮರ್ಶಿಸಬೇಕಾಗಿರುತ್ತದೆ ಮತ್ತು ಬ್ಯಾಂಕ್ ಠೇವಣಿ/ಬ್ಯಾಂಕ್ ಖಾತರಿಗೆ ಅನುಸಾರವಾಗಿ ಸಾಲದ ಮಿತಿಗಳನ್ನು ನಿಯಂತ್ರಿಸಬೇಕಾಗಿರುತ್ತದೆ.

m) ಸಾಗಾಣಿಕೆ ಗುತ್ತಿಗೆದಾರರಿಂದ ಸೌದೆ ಮತ್ತು ಮರದ ತೊಗಟೆಗಳ ಸಾಗಾಟದ ಸಮಯದಲ್ಲಿ ಕಂಡುಬರುವ ಕೊರತೆಗಳ ಮೌಲ್ಯವನ್ನು ಕಂಡುಹಿಡಿಯುವ ಬಗ್ಗೆ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಸ್ಪಷ್ಟವಾಗಿ ನಿರ್ಧರಿಸಬೇಕಾಗಿರುತ್ತದೆ ಮತ್ತು ಸರಿಯಾದ ಸ್ಥಳದಲ್ಲಿ ಇರಿಸಬೇಕಾಗಿರುತ್ತದೆ. ಸಧ್ಯದಲ್ಲಿ, ಕೊರತೆಗಳ ಮೌಲ್ಯವನ್ನು ಮಾರಾಟದ ಬೆಲೆಯ ಮೇಲೆ ವಸೂಲಿಯನ್ನು ಜಾರಿಗೊಳಿಸುವ ಬದಲು ವಸ್ತುವಿನ ಅಸಲಿನ ಬೆಲೆಯ ಲಾಭದ ಅಂಶದ ಮೇಲೆ ಗುರುತಿಸಲಾಗುತ್ತಿದೆ. ಸಾಗಾಣಿಕೆ ಗುತ್ತಿಗೆದಾರರ ಜೊತೆ ಮಾಡಿಕೊಂಡಿರುವ ಒಪ್ಪಂದದಲ್ಲಿ ಕೊರತೆಯಾಗಿರುವ ಸಾಮಗ್ರಿಗಳ ಮೌಲ್ಯವನ್ನು ವಸೂಲು ಮಾಡುವ ಬಗ್ಗೆ ಯಾವುದೇ ಅವಕಾಶಗಳೂ ಇರುವುದಿಲ್ಲ.

n) ದಾಂಡೇಲಿ ಮತ್ತು ಶಿವಮೊಗ್ಗದಲ್ಲಿ ಇರುವ ಜಮೀನಿಗೆ ಸಂಬಂಧಿಸಿದಂತೆ ಕೆಎಸ್‌ಎಫ್‌ಐಸಿ ಯ ಪರವಾಗಿ ಹಕ್ಕುಪತ್ರಗಳ ಲಭಿಸಿರುವುದಿಲ್ಲ. ಗೊಟ್ಟಿಪುರ ಮತ್ತು ಟಿಂಬರ್‌ಯಾರ್ಡ್ ಬಡಾವಣೆಯಲ್ಲಿರುವ ಜಮೀನಿನ ಮೌಲ್ಯವನ್ನು ಇನ್ನೂ ಅಂತಿಮಗೊಳಿಸಬೇಕಾಗಿರುತ್ತದೆ ಮತ್ತು ಲೆಕ್ಕದ ಪುಸ್ತಕಗಳಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗಿರುತ್ತದೆ.

o) ಕಂಪನಿಯ ನಿರ್ದೇಶಕರ ಮಂಡಳಿಯು ಹಣಕಾಸಿನ ವರದಿ ಮಾಡುವಿಕೆಯ ಮೇಲೆ ನಿಯಂತ್ರಣ ಪ್ರಾರಂಭಿಕ ಹಂತದಲ್ಲಿನ ನಿಯಂತ್ರಣಗಳನ್ನು ಗುರುತಿಸಿ ದಾಖಲೆಗೊಳಪಡಿಸುವುದು, ದಾಖಲೆ ಪತ್ರಗಳ ನಿರ್ವಹಣೆಯನ್ನು ಮುಂದುವರೆಸುವುದು ಮತ್ತು ಪ್ರಮುಖ ಹಣಕಾಸಿನ ಪ್ರತಿಕ್ರಿಯೆಯಲ್ಲಿ ವಿವರಣೆಗಳು, ದಾಖಲೆ ಪತ್ರಗಳಲ್ಲಿ ಮೋಸದ ಸಂಭಾವ್ಯತೆಯ ನಿಯಂತ್ರಣ, ನಿರ್ವಹಣೆಯ ಮಟ್ಟದಲ್ಲಿಯೇ ನಿಯಂತ್ರಣ ಸಾಧಿಸುವುದು ಮತ್ತು ಈ ಎಲ್ಲಾ ಪ್ರತಿಕ್ರಿಯೆಗಳಿಗೂ ರಿಸ್ಕ್ ಕಂಟ್ರೋಲ್ ಮ್ಯಾಟ್ರಿಸಸ್‌ನಲ್ಲಿ (ಆರ್‌ಸಿಎಂ) ಆದಾಯ ತೆರಿಗೆ ಸಾಮಾನ್ಯ ನಿಯಂತ್ರಣ, ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಸೇರಿದಂತೆ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಸುಗಮಗೊಳಿಸಿ ಮತ್ತು ಬಲಪಡಿಸುವ ಉದ್ದೇಶದಿಂದ ಕಂಪನಿಯ ನಿರ್ದೇಶಕರ ಮಂಡಳಿಯು ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಇನ್ನೂ ಸಿದ್ದಪಡಿಸಬೇಕಾಗಿರುತ್ತದೆ.

p) ಕಂಪನಿಯು ಆಂತರಿಕ ಲೆಕ್ಕಪರಿಶೋಧಕರನ್ನು ಹೊಂದಿದ್ದರೂ ಕೂಡ, ಆಕ್ಷೇಪಣೆಯ ವರದಿಗಳನ್ನು ನಿರ್ದೇಶಕ ಮಂಡಳಿಯ ಸಭೆಯಲ್ಲಾಗಲೀ ಅಥವಾ ಪ್ರಧಾನ ಕಛೇರಿಯಲ್ಲಾಗಲೀ ಕಾಲಕಾಲಕ್ಕೆ ಪರಿಶೀಲಿಸಲಾಗಿರುವುದಿಲ್ಲ. ಮುಂದುವರೆದು ಆರ್ಥಿಕ ಪಟ್ಟಿಗಳನ್ನು ಪರಿಶೀಲಿಸಲು ವೃತ್ತಿಪರ ಅರ್ಹತೆ ಇರುವ ಯಾವುದೇ ಆರ್ಥಿಕ ನಿರ್ವಹಣಾ ಅಧಿಕಾರಿಗಳು ಇರುವುದಿಲ್ಲ.

q) 28.02.2018 ರಂದು ಮಂಡಳಿಯ ಸಭೆ ನಡೆಯಿತು ಮತ್ತು ಮುಂದಿನ ಸಭೆಯು 11.09.2018 ರಂದು ಮಾತ್ರ ನಡೆಯಿತು. ಹೀಗೆ ಮುಂದಿನ ನಿರ್ದೇಶಕ ಮಂಡಳಿಯ ಸಭೆಗೆ 195 ದಿವಸಗಳ ಅಂತರವಾಗಿರುತ್ತದೆ. ಕಾಲಕಾಲಕ್ಕೆ ಕಾರ್ಪೊರೇಟ್ ಗವರ್ನನ್ಸ್ ವಿರುದ್ಧವಾಗಿ ಸಂಸ್ಥೆಯ ಆಡಳಿತ ಮಂಡಳಿಯಿಂದ ಕಂಪನಿಯ ಚಟುವಟಿಕೆಗಳನ್ನು ಪರಿಶೀಲಿಸಲಾಗಿರುವುದಿಲ್ಲವೆಂದು ತಿಳಿದುಬರುತ್ತದೆ.

r) ಅಧಿಕಾರ ಚಲಾಯಿಸುವ ನೀತಿಯನ್ನು ಎರಡು ದಶಕಗಳ ಹಿಂದೆಯೇ ರೂಪಿಸಲಾಗಿತ್ತಾದರೂ ಕೂಡ ಇದನ್ನು ಪರಿಷ್ಕರಿಸಲಾಗಿರುವುದಿಲ್ಲ ಮತ್ತು ನವೀಕರಿಸಿರುವುದಿಲ್ಲ.

ನಮ್ಮ ಅಭಿಪ್ರಾಯದಲ್ಲಿ, ನಿಯಂತ್ರಣ ಮಾನದಂಡದ ಉದ್ದೇಶ ಸಾಧನೆಯ ಭೌತಿಕ ದೌರ್ಬಲ್ಯಗಳ ಪರಿಣಾಮಗಳು/ ಸಂಭಾವ್ಯ ಪರಿಣಾಮಗಳ ಬಗ್ಗೆ ನಾವು ಮೇಲೆ ವಿವರಿಸಿರುವುದನ್ನು ಹೊರತುಪಡಿಸಿ, ನಮ್ಮ ಗರಿಷ್ಟ ಮಾಹಿತಿಯಂತೆ ಹಾಗೂ ನಮಗೆ ನೀಡಲಾಗಿರುವ ವಿವರಣೆಗಳಂತೆ, ಕಂಪನಿಯಲ್ಲಿ ಸಮರ್ಪಕವಾದಂತಹ, ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ವ್ಯವಸ್ಥೆಯು ಇದ್ದು, ಅಂತಹ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ವ್ಯವಸ್ಥೆಯು 31ನೇ ಮಾರ್ಚ್ 2018 ರಿಂದ ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬರಲಿದೆ. ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಇವರು ಹೊರಡಿಸಿರುವ ಮಾರ್ಗದರ್ಶಿ ಟಿಪ್ಪಣಿ ಆಡಿಟ್ ಆಫ್ ಇಂಟರ್ನಲ್ ಫೈನಾನ್ಷಿಯಲ್ ಕಂಟ್ರೋಲ್ ಓವರ್ ಫೈನಾನ್ಷಿಯಲ್ ರಿಪೋರ್ಟಿಂಗ್‌ನಲ್ಲಿ ವಿವರಿಸಿರುವ ಆಂತರಿಕ ನಿಯಂತ್ರಣ ವಿಷಯಕ್ಕೆ ಸಂಬಂಧಿಸಿದ ಅತ್ಯಾವಶ್ಯಕ ಅಂಶಗಳನ್ನು ಒಳಗೊಂಡ ಭಾರತದ ಸನ್ನದ್ದು ಲೆಕ್ಕಪರಿಶೋಧಕರ ಸಂಸ್ಥೆಯು ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ವ್ಯವಸ್ಥೆಯನ್ನು ಕಂಪನಿಯು ಸ್ಥಾಪಿಸಿದೆ.

ಪಿಎನ್‌ಆರ್ & ಕಂ.,
ಸನ್ನದು ಲೆಕ್ಕಿಗರ ಪರವಾಗಿ
ಸಂಸ್ಥೆ ನೋಂದಣಿ ಸಂಖ್ಯೆ : 002495S
ಸಹಿ/-
(ಗುರುಪ್ರಸಾದ್ ಭಾದ್ಯ)
ಪಾಲುದಾರರು
ಸದಸ್ಯತ್ವದ ಸಂಖ್ಯೆ: 234052

ದಿನಾಂಕ: 17.10.2018
ಸ್ಥಳ : ಬೆಂಗಳೂರು

ಅನುಬಂಧ–ಸಿ

(ನಮ್ಮ ಇದೇ ದಿನಾಂಕದ ವರದಿಯ ಕಂಡಿಕೆ 8(ಹೆಚ್)ರಲ್ಲಿ ಉಲ್ಲೇಖಿಸಿರುವಂತೆ)

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ

ಕಂಪನಿಗಳ ಕಾಯ್ದೆ 2013ರ ("ದಿ ಆಕ್ಟ್") ಕಂಡಿಕೆ 143, ಉಪ ಕಂಡಿಕೆ (5)ರಂತೆ ನಿರ್ದೇಶನಗಳು

ಕ್ರ. ಸಂ.	ನಿರ್ದೇಶನಗಳು	ವಿವರಣೆಗಳು
1.	ಕಂಪನಿಯು ಸ್ವತಂತ್ರವಾಗಿ ಮತ್ತು ಲೀಸ್ಹೋಲ್ಡ್ ಭೂಮಿಗೆ ಕ್ರಮವಾಗಿ ಸ್ಪಷ್ಟ ಶೀರ್ಷಿಕೆ/ಗುತ್ತಿಗೆ ಕಾರ್ಯಗಳನ್ನು ಹೊಂದಿದೆಯೇ? ಇಲ್ಲದಿದ್ದಲ್ಲಿ ದಯವಿಟ್ಟು ಶೀರ್ಷಿಕೆ ಮತ್ತು ಗುತ್ತಿಗೆ ಲಭ್ಯವಿಲ್ಲದ ಫ್ರೀಹೋಲ್ಡ್ ಮತ್ತು ಲೀಸ್ಹೋಲ್ಡ್ ಭೂ ಪ್ರದೇಶವನ್ನು ತಿಳಿಸಿ.	ಕಂಪನಿಯು ಅನುಕ್ರಮವಾಗಿ ಸ್ವತಂತ್ರವಾಗಿ ಮತ್ತು ಲೀಸ್ಹೋಲ್ಡ್ ಭೂಮಿಗೆ ಕ್ರಮವಾಗಿ ಸ್ಪಷ್ಟ ಶೀರ್ಷಿಕೆ/ ಗುತ್ತಿಗೆ ದಾಖಲೆಗಳನ್ನು ಹೊಂದಿರುವುದಿಲ್ಲ. ಇವುಗಳನ್ನು 31.10 ರಿಂದ 31.15ರ ವರೆಗಿನ ಟಿಪ್ಪಣಿ ಗಳಲ್ಲಿ ಆರ್ಥಿಕ ಪಟ್ಟಿಗಳಲ್ಲಿ ಬಹಿರಂಗಪಡಿಸಲಾಗಿದೆ. ಅನುಬಂಧ–ಎ, ಪ್ಯಾರಾಗ್ರಾಫ್ i(c) ದಿನಾಂಕ: 17.10.2018ರ ನಮ್ಮ ವರದಿ. ಈ ಟಿಪ್ಪಣಿಗಳನ್ನು ದೀರ್ಘಕಾಲದವರೆಗಿನ ವರ್ಷದ ನಂತರ ಪ್ರತಿ ವರ್ಷ ಬಹಿರಂಗ ಪಡಿಸಲಾಗಿದೆ. ವಿವರಗಳು ಈ ಕೆಳಗಿನಂತಿವೆ:– 1. ಶಿವಮೊಗ್ಗದಲ್ಲಿರುವ (ಡಬ್ಲ್ಯೂಪಿಪಿ) 18 ಎಕರೆ 35 ಗುಂಟೆ ಮತ್ತು ದಾಂಡೇಲಿಯಲ್ಲಿ 15 ಎಕರೆ 25 ಗುಂಟೆ ರೂ. 1,89,879 ಮೌಲ್ಯದ ಜಮೀನಿನ ಹಕ್ಕು ಪತ್ರಗಳನ್ನು 1975 ರಿಂದಲೂ ಕಂಪನಿಯ ಹೆಸರಿಗೆ ವರ್ಗಾಯಿಸಲಾಗಿರುವುದಿಲ್ಲ. 2. ದಿನಾಂಕ: 14.11.2014ರ ಆದೇಶ ಸಂಖ್ಯೆ. ಎಫ್ಇಇ 104 ಎಫ್‌ಪಿಸಿ 2014ರಂತೆ ಸರ್ವೆ ನಂ. 23/6ಎ1ಬಿ2, 23–4ಬಿ, 23–12ಬಿ, 23–6ಎ2ಬಿ, 23–6ಬಿ ಮತ್ತು 23/3(ಭಾಗ)ರಲ್ಲಿರುವ 5–89 ಎಕರೆ ವಿಸ್ತೀರ್ಣವಾದ ಕೆಎಸ್‌ಎಫ್‌ಐಸಿ ಯ ಜಮೀನನ್ನು ಜಿಲ್ಲಾ ಕಛೇರಿಗಳ ಸಂಕೀರ್ಣ ಕಟ್ಟಡದ ನಿರ್ಮಾಣದ ಉದ್ದೇಶದಿಂದ ದಕ್ಷಿಣ ಕನ್ನಡದ ಜಿಲ್ಲಾಧಿಕಾರಿಗಳ ಪರವಾಗಿ ಬದಲಾಯಿಸಿಕೊಳ್ಳಲು ಅನುಮತಿ ನೀಡಿರುತ್ತದೆ. ಇದಕ್ಕೆ ಬದಲಾಗಿ, ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರು ಮಂಗಳೂರು ತಾಲ್ಲೂಕಿನ ಬಂಗ್ರೆ ಕೂಳೂರು ಗ್ರಾಮದ ಸರ್ವೆ ನಂ. 38–1ಎ ಯಲ್ಲಿರುವ 4.50 ಎಕರೆ ಜಮೀನನ್ನು ಕೆಎಸ್‌ಎಫ್‌ಐಸಿ, ಮಂಗಳೂರು ಇವರಿಗೆ, ಮೇಲ್ಕಂಡ ಸರ್ಕಾರಿ ಆದೇಶದಲ್ಲಿ ವಿಧಿಸಲಾಗಿರುವ ಕೆಲವೊಂದು ನಿಬಂಧನೆಗಳೊಂದಿಗೆ ಬದಲಾಯಿಸಿಕೊಳ್ಳಲು ಅನುಮತಿ ನೀಡಿರುತ್ತದೆ. ಅದರಂತೆ ಮೇಲ್ಕಂಡ ಜಮೀನಿನ ಆರ್‌ಟಿಸಿಯಲ್ಲಿ ಸೂಕ್ತ ದಾಖಲಾತಿಗಳನ್ನು ಸೇರಿಸಲಾಗಿರುತ್ತದೆ. ವಿಧಿಸಲಾಗಿರುವ ಷರತ್ತುಗಳು ಅಂದರೆ, ಕಾಂಪೌಂಡ್ ಗೋಡೆಯ ನಿರ್ಮಾಣ, ಸ್ವಾಧೀನಪಡಿಸಿಕೊಳ್ಳಲಾಗಿರುವ 1.39 ಎಕರೆ ಹೆಚ್ಚುವರಿ ಜಮೀನಿಗೆ ಪರಿಹಾರವಾಗಿ ಹೆಚ್ಚುವರಿ 3.50 ಎಕರೆ ಜಮೀನನ್ನು ಮಂಜೂರು ಮಾಡುವುದು, ಹೊಸ ಕಟ್ಟಡದಲ್ಲಿ 5000 ಚದರ ಅಡಿಯ

		ಕಟ್ಟಡವನ್ನು ಹಂಚಿಕೆ ಮಾಡುವುದು ಮುಂತಾದ ಷರತ್ತುಗಳನ್ನು ಇನ್ನೂ ಈಡೇರಿಸಬೇಕಾಗಿರುತ್ತದೆ. ನಿಬಂಧನೆಗಳ ಈಡೇರುವಿಕೆಯು ಬಾಕಿ ಇರುವುದರಿಂದ ಜಮೀನನ್ನು ಭೌತಿಕವಾಗಿ ಸರ್ಕಾರಕ್ಕೆ ಹಸ್ತಾಂತರಿಸಿರುವುದಿಲ್ಲ ಮತ್ತು ಲೆಕ್ಕದ ಪುಸ್ತಕದಲ್ಲಿ ಯಾವುದೇ ದಾಖಲಾತಿಗಳನ್ನು ಮಾಡಿರುವುದಿಲ್ಲ. 3. ಬೆಂಗಳೂರಿನ ಟಿಂಬರ್‌ಯಾರ್ಡ್ ಬಡಾವಣೆಯಲ್ಲಿರುವ ಜಮೀನಿಗೆ ಸಂಬಂಧಿಸಿದಂತೆ 1990ರಿಂದ ಮೌಲ್ಯವು ಅಂತಿಮವಾಗಿಲ್ಲದ ಕಾರಣದಿಂದ ಮೌಲ್ಯವನ್ನು ಕಂಪನಿಯ ಲೆಕ್ಕದ ಪುಸ್ತಕಗಳಲ್ಲಿ ಲೆಕ್ಕ ಹಾಕಿರುವುದಿಲ್ಲ. 4. ಸರ್ಕಾರದ ದಿನಾಂಕ: 28.08.1995ರ ಪತ್ರ ಸಂಖ್ಯೆ. ಎಫ್‌ಎಫ್‌ಡಿ 190 ಎಫ್‌ಡಬ್ಲ್ಯೂಎಲ್ 82 ಕ್ಕೆ ಅನುಸಾರವಾಗಿ ಕಂಪನಿಯು ಮೂರ್ಕಲ್ ಘಟಕದಲ್ಲಿ ಕೆಲವೊಂದು ಸ್ಥಿರ ಆಸ್ತಿಗಳ ಸ್ವಾಧೀನವನ್ನು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತಕ್ಕೆ ವಹಿಸಿಕೊಂಡಿರುತ್ತದೆ. ಮೊಬಲಗಿನ ಪಾವತಿಗಳು ಮತ್ತು ಆಸ್ತಿಗಳ ವರ್ಗಾವಣೆಯನ್ನು ಬಾಕಿ ಇರಿಸಿಕೊಂಡು ಕಂಪನಿಯು ಈ ಆಸ್ತಿಗಳ ಮೇಲೆ ಸವಕಳಿಯನ್ನು ಕಳೆಯುತ್ತಿದೆ. ಈ ಆಸ್ತಿಯ ಮೌಲ್ಯ ರೂ. 1,27,678/- ನ್ನು (ರೂ. 1,27,678/-) ಕಂಪನಿಯ ಲೆಕ್ಕದ ಪುಸ್ತಕಗಳಲ್ಲಿ ತೋರಿಸಲಾಗುತ್ತಿದೆ. ಈ ವಿಚಾರವನ್ನು ದಿನಾಂಕ:29.06.2010ರಂದು ನಡೆದ ಕಂಪನಿಯ ನಿರ್ದೇಶಕರ ಮಂಡಳಿಯ 216ನೇ ಸಭೆಯಲ್ಲಿ ಚರ್ಚಿಸಲಾಗಿದ್ದು, ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳುವ ಸಲುವಾಗಿ ಕೆಎಫ್‌ಡಿಸಿ ಯೊಂದಿಗೆ ಪುನರ್‌ಪರಿಶೀಲನೆ ನಡೆಸಲು ಸೂಚಿಸಲಾಗಿದ್ದು, ವಿಚಾರವು ಇನ್ನೂ ಬಾಕಿ ಇರುತ್ತದೆ. 5. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದಿಂದ ಕಂಪನಿಯು ಬೆಂಗಳೂರಿನ ಮಲ್ಲೇಶ್ವರಂನ "ವನವಿಕಾಸ" ದಲ್ಲಿ 9750 ಚದರ ಅಡಿ ವಿಸ್ತೀರ್ಣದ ಕಛೇರಿ ಸ್ಥಳವನ್ನು ಪಡೆದಿರುತ್ತದೆ. ಇದರ ಹಕ್ಕುಪತ್ರಗಳ ವರ್ಗಾವಣೆಯು ಬಾಕಿ ಇದ್ದರೂ ಕೂಡಾ, ಇದರ ಮೇಲೆ ಹಣಕಾಸಿನ ವರ್ಷ 1990-91ರಿಂದ ಸವಕಳಿಯನ್ನು ಕಳೆಯಲಾಗುತ್ತಿದೆ. ಮೇಲೆ ಉಲ್ಲೇಖಿಸಿರುವ ಮೂರ್ಕಲ್ ಆಸ್ತಿಯೂ ಸೇರಿದಂತೆ, ತಿಳಿಸಿರುವ ಆಸ್ತಿಗಳ ಹಕ್ಕುಪತ್ರ ವರ್ಗಾವಣೆ ಮತ್ತು ಈ ಬಗ್ಗೆ ಮಾಡಲಾಗಿರುವ ಪಾವತಿಗಳನ್ನು ಲೆಕ್ಕ ಹಾಕುವಿಕೆ ಮತ್ತು ಅವುಗಳ ಪುನರ್‌ಪರಿಶೀಲನೆಯನ್ನು ನಡೆಸಲು ಮಂಡಳಿಯು ನಿರ್ದೇಶನ ನೀಡಿರುತ್ತದೆ. ಕಂಪನಿಯು ಈ ಸ್ವತ್ತುಗಳಿಗೆ ಆಸ್ತಿ ತೆರಿಗೆಗಳನ್ನೂ ಪಾವತಿಸುತ್ತಿದ್ದು, ಇವುಗಳ ಹಕ್ಕು ಪತ್ರಗಳನ್ನು ವರ್ಗಾಯಿಸಲು ಕೆಎಫ್‌ಡಿಸಿ ಗೆ ಮನವಿ ಮಾಡಿರುತ್ತದೆ. ದಿನಾಂಕ: 28.06.2012ರ ಪತ್ರಕ್ಕೆ ಕೆಎಫ್‌ಡಿಸಿ ಯು ಈ ದಿನಾಂಕದವರೆಗೂ ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲ ಅಥವಾ ಹಕ್ಕುಪತ್ರಗಳನ್ನು ನೀಡಿರುವುದಿಲ್ಲ.

		6. ಸಂಸ್ಥೆಯು ಮಂಗಳೂರಿನಲ್ಲಿ 15 ಸೆಂಟ್ ಭೂಮಿಯನ್ನು ಜಿಲ್ಲಾ ಪರಿಷದ್, ಮಂಗಳೂರಿಗೆ 1993-94ರಂದು ವರ್ಷಕ್ಕೆ ರೂ. 30,000/-ದ ದರದಲ್ಲಿ ಭೋಗ್ಯಕ್ಕೆ ನೀಡಿತ್ತು. ಭೋಗ್ಯದ ಪತ್ರವನ್ನು ಅಂತಿಮಗೊಳಿಸಬೇಕಿದೆ ಮತ್ತು ಭೋಗ್ಯದ ಮೊತ್ತವು ನಮಗಿನ್ನೂ ಪಾವತಿಯಾಗಿರುವುದಿಲ್ಲ. ಜಿಲ್ಲಾ ಪರಿಷದ್ ಅಧಿಕಾರಿಗಳು ಭೋಗ್ಯದ ಬಾಡಿಗೆಯನ್ನು ಮನ್ನಾ ಮಾಡಲು ಕೋರಿದ್ದು, ಇದನ್ನು ತಿರಸ್ಕರಿಸಿ, ಪಾವತಿಯನ್ನು ಕೋರಲಾಗಿದೆ. 06.09.2010ರಂದು ನಡೆದ ಛಿಛಿಣ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಲಾಯಿತು ಮತ್ತು ಇದನ್ನು ಕೂಡಲೇ ಬಗೆಹರಿಸಲು ಕೋರಲಾಯಿತು. ಅಂತಿಮವಾಗಿ, ಅಗತ್ಯ ಕ್ರಮಗಳನ್ನು ಜರುಗಿಸಲಾಗುವುದು. ಆದರೆ, ಆಡಳಿತ ವರ್ಗವು 25.02.2014ರಂದು ತಮ್ಮ ಅಧಿಕಾರಿಗಳೊಂದಿಗೆ ಪ್ರ.ಮು.ಅ.ಸಂ. ರವರ ಸಭೆಯಲ್ಲಿ ಚರ್ಚಿಸಲಾಗಿದ್ದು, ಅದನ್ನು ಅನುಸರಿಸುತ್ತಿದೆ. ಇದರೊಂದಿಗೆ ಅ.ಪ್ರ.ಮು.ಅ.ಸಂ. (ಭೂ ದಾಖಲೆಗಳು), ಬೆಂಗಳೂರು ದಿನಾಂಕ:09.02.2018ರ ತಮ್ಮ ಪತ್ರದಲ್ಲಿ ಮು.ಅ.ಸಂ. ಮಂಗಳೂರು ಇವರಿಗೆ ತಕ್ಷಣದ ಕ್ರಮಕ್ಕಾಗಿ ನಿರ್ದೇಶನ ನೀಡಿರುತ್ತಾರೆ. ಹಾಗಾಗಿ ಭೋಗ್ಯದ ಬಾಡಿಗೆಯಾಗಿ ಸ್ವೀಕರಿಸಲಾಗುವ ಮೊತ್ತವನ್ನು ಪುಸ್ತಕದಲ್ಲಿ ದಾಖಲಿಸಲು ಯಾವುದೇ ಏರ್ಪಾಡು ಮಾಡಿಲ್ಲ ಹಾಗೂ ಇದನ್ನು ವಸೂಲಾತಿ ಆಧಾರದ ಮೇಲೆ ದಾಖಲಿಸಲಾಗುವುದು. 7. ಗೊಟ್ಟಿಪುರದ ಭೂಮಿಯ ಮೌಲ್ಯವನ್ನು ಅಂತಿಮಗೊಳಿಸ ಬೇಕಿರುವುದರಿಂದ ಮತ್ತು ಇದು 1985 ರಿಂದಲೂ ಉಳಿದಿರುವುದರಿಂದ ಲೆಕ್ಕದಲ್ಲಿ ಇದನ್ನು ದಾಖಲಿಸಲಾಗಿಲ್ಲ. ದಿನಾಂಕ: 18.08.2012ರ ಪತ್ರದ ಮೂಲಕ ಕರ್ನಾಟಕ ಅರಣ್ಯ ಇಲಾಖೆಯೊಂದಿಗೆ ಇದರ ಬಗ್ಗೆ ಅನುಸರಣಾ ಕ್ರಮ ಕೈಗೊಳ್ಳಲಾಗುತ್ತಿದೆ. ಇತ್ತೀಚೆಗೆ ನಿಗಮವು ಈ ಭೂಮಿಯನ್ನು ಕರ್ನಾಟಕ ಅರಣ್ಯ ಇಲಾಖೆಗೆ ಹಿಂದಿರುಗಿಸಲು ನಿರ್ಧರಿಸಿದೆ. ಆದರೆ ಮತ್ತೆ ಇತ್ತೀಚೆಗೆ ನಿಗಮವು ಇಲ್ಲಿ ಪೀಠೋಪಕರಣಗಳ ಘಟಕವನ್ನು ಸ್ಥಾಪಿಸಲು ಪ್ರಸ್ತಾಪಿಸಿದೆ. ಈ ಚರ್ಚೆಯನ್ನು ಅಂತಿಮಗೊಳಿಸಬೇಕಿದೆ. ಹಾಗಾಗಿ, ಭೂಮಿಯ ಮೌಲ್ಯವನ್ನು ಪುಸ್ತಕಗಳಲ್ಲಿ ದಾಖಲಿಸಲಾಗಿಲ್ಲ.
2.	**ಯಾವುದೇ ಸಾಲ/ಬಡ್ಡಿ ಇತ್ಯಾದಿಯ ಮನ್ನ/ ವಜಾಗಳ ಪ್ರಕರಣಗಳು ಇದೆಯೇ?, ಇದ್ದಲ್ಲಿ ಅವುಗಳಿಗೆ ಕಾರಣ ಹಾಗೂ ಸಂಬಂಧಿತ ಮೌಲ್ಯವನ್ನು ವರದಿ ಮಾಡುವುದು.**	28ನೇ ಫೆಬ್ರವರಿ 2018 ರಂದು ನಡೆದ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಹಾಸನ ಸಹಕಾರಿ ಹಾಲು ಒಕ್ಕೂಟ ಸಂಘ ಸಂಸ್ಥೆಯ ರೂ. 45,588 ಮತ್ತು ರೂ. 3,79,225 ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ವಿರಾಜಪೇಟೆ ವಿಭಾಗದ ಮತ್ತು ಮಂಗಳೂರಿನ ತಿಥಿಮತಿ ವಲಯಕ್ಕೆ ಸಂಬಂಧಿಸಿದಂತೆ ಕ್ರಮವಾಗಿ ಲೆಕ್ಕದ ಪುಸ್ತಕದಿಂದ ತೆಗೆದು ಹಾಕಲಾಗಿದೆ. **ವಿವರಗಳು ಈ ಕೆಳಗಿನಂತಿವೆ:-**

		• ರೂ. 43,588 –ಹಾಸನ ಸಹಕಾರಿ ಹಾಲು ಒಕ್ಕೂಟ ಸಂಘ ಸಂಸ್ಥೆಗೆ ಉರುವಲು ಕಟ್ಟಿಗೆಯನ್ನು ಸರಬರಾಜು ಮಾಡಲಾಗಿದ್ದು, ತೆರಿಗೆ ಪಾವತಿಸದ ತೆರಿಗೆಗೆ ಸಂಬಂಧಿಸಿದಂತೆ ಮರು ಪಾವತಿಸಲಾಗದ ಬಾಕಿ. • ರೂ. 3,79,255– ವಿರಾಜಪೇಟೆ ವಿಭಾಗದಲ್ಲಿ ಮತ್ತು ಮಂಗಳೂರಿನ ತಿಥಿ ಮಥಿ ವಲಯಗಳಲ್ಲಿ ಲಾಗಿಂಗ್ ಕಾರ್ಯಗಳನ್ನು ನಿರ್ವಹಿಸಲು ಆನೆಗಳನ್ನು ಉಪಯೋಗಿಸಿಕೊಳ್ಳಲಾಗಿದ್ದು, ಬಿಲ್ಲಿನಲ್ಲಿ ಆನೆಯ ಸೇವೆಗಳ ವೆಚ್ಚವನ್ನು ಸೇರಿಸಲಾಯಿತು. ಸಂಬಂಧಿಸಿದ ಮೊತ್ತದಲ್ಲಿ ಆನೆಗಳನ್ನು ಉಪಯೋಗಿಸಿಕೊಂಡಿರುವ ಬಗ್ಗೆ ಪಾವತಿಸಲಾಗದ ಬಾಕಿ.
2.	ಮೂರನೆಯ ಪಕ್ಷದ ಅಧೀನದಲ್ಲಿರುವ ಮತ್ತು ಸರ್ಕಾರದಿಂದ ಅಥವಾ ಇತರೆ ಪ್ರಾಧಿಕಾರಗಳಿಂದ ಉಡುಗೊರೆಯಾಗಿ ಸ್ವೀಕರಿಸಿದ ಆಸ್ತಿಗಳಿಗೆ ಸರಿಯಾದ ದಾಖಲೆಗಳನ್ನು ನಿರ್ವಹಿಸಲಾಗಿದೆಯೇ. ಈ ಪ್ರಕರಣದ ಮೇಲೆ ಯಾವುದೇ ದಾಸ್ತಾನು ಕುರಿತು ವರದಿ ಮಾಡುವುದು.	ಮೂರನೇ ವ್ಯಕ್ತಿಯ ಸ್ವಾಧೀನದಲ್ಲಿ ಯಾವುದೇ ಆಸ್ತಿಗಳೂ ಇರುವುದಿಲ್ಲ ಮತ್ತು ಸರ್ಕಾರ ಅಥವಾ ಇತರ ಅಧಿಕಾರಿಗಳಿಂದ ಯಾವುದೇ ಆಸ್ತಿಗಳನ್ನು ಕೊಡುಗೆಯಾಗಿ ಸ್ವೀಕರಿಸಲಾಗಿರುವುದಿಲ್ಲ. ಟಿಪ್ಪಣಿಗಳ ಸಂಖ್ಯೆ. 31.10 ರಿಂದ 31.15 ಮತ್ತು ಭೂಮಿಗೆ ಸಂಬಂಧಿಸಿದಂತೆ ಮತ್ತು ಗೊಟ್ಟಿಪುರ ಭೂಮಿ ಇತ್ಯಾದಿಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಭೂಮಿಗೆ ಸಂಬಂಧಿಸಿದಂತೆ, ಹಕ್ಕು , ಭೂಮಿಯ ಮೌಲ್ಯ ಮುಂತಾದವುಗಳು ಖಚಿತವಾಗಿಲ್ಲ ಮತ್ತು ದೀರ್ಘಕಾಲದಿಂದ ಬಾಕಿ ಉಳಿದಿವೆ. • ಆದಾಗ್ಯೂ ನಾವು, ಟಿಪ್ಪಣಿ ಸಂ. 31.5 ರತ್ತ, ಗಮನ ಸೆಳೆಯುತ್ತ, 6202.793 ಕ್ಯೂ.ಮೀ. ಗಳಷ್ಟು ಜಫ್ತಿ ಮಾಡಲಾದ ಗ್ರಾನೈಟ್ ಕಲ್ಲುಗಳ ಮಾರಾಟವನ್ನು 1994–95ರಲ್ಲಿ ಲೆಕ್ಕಪತ್ರದಲ್ಲಿ ನಮೂದಿಸಿದಂತೆ ಮಾರಾಟ ಮಾಡಲಾಗಿರುವ ಖರೀದಿದಾರರು ಇದನ್ನು ಸಾಗಿಸುವುದಕ್ಕೆ ಒಳಪಟ್ಟಿದೆ. ಆದರೆ, ಮಾರ್ಚ್ 31, 2005ರ ವರೆಗೆ ವಿವಿಧ ಖರೀದಿದಾರರು ಕೇವಲ 1575.302 ಕ್ಯೂ.ಮೀ. ಗಳಷ್ಟು ಮಾತ್ರ ಸಾಗಿಸಿದ್ದಾರೆ. ಟೆಂಡರ್‌ದಾರರು ಟೆಂಡರ್‌ನ ಷರತ್ತುಗಳನ್ವಯ ಹಣ ಪಾವತಿ ಮಾಡದಿದ್ದ ಕಾರಣದಿಂದಾಗಿ ಅವರಿಗೆ ಪರಿಮಿಟ್ ನೀಡಲಾಗಿಲ್ಲ ಮತ್ತು ಇದರಿಂದಾಗಿ ಉಳಿದ ಕಲ್ಲನ್ನು ಸಾಗಿಸಲಾಗಿಲ್ಲ. ಕರ್ನಾಟಕ ಸರ್ಕಾರವು ಗ್ರಾನೈಟ್ ಕಲ್ಲಿನ ಮಾರಾಟದಲ್ಲಿ ಕರಾಅಕ್ಕೈನಿನಿ ಯ ಪಾತ್ರ ಇಲ್ಲ ಎಂದು ಆದೇಶಿಸಿದ್ದು, ಗ್ರಾಹಕರಿಂದ ಪಡೆಯಲಾದ ಮುಂಗಡವನ್ನು ಹಿಂದಿರುಗಿಸಬೇಕೆಂದು ಆದೇಶಿಸಿದೆ. ಸಂಸ್ಥೆಯು ಕೋರಿಕೆಯು ಮೇರೆಗೆ, ಮೇಲೆ ಉಲ್ಲೇಖಿಸಲಾದ ಸರ್ಕಾರಿ ಆದೇಶವನ್ನು ಬದಲಿಸಲಾಗಿ, ಹಿಂದಿನ ಸೂಚನೆಯು ಕೇವಲ ಸಲಹೆಯಾಗಿದ್ದು, ಟೆಂಡರ್‌ನ ನಿಯಮ ಮತ್ತು ಷರತ್ತುಗಳನ್ವಯ ಸಂಸ್ಥೆಯು ಕ್ರಮ ಕೈಗೊಳ್ಳಬಹುದೆಂದು ಸರ್ಕಾರವು ತಿಳಿಸಿದೆ. ಇದರ ಪರಿಣಾಮವಾಗಿ, ಈ ವಿಷಯವನ್ನು ಬಗೆಹರಿಸಲು ಸಂಸ್ಥೆಯು ಕ್ರಮ ಜರುಗಿಸುತ್ತಿದೆ.

		• ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಇತರ ವಿಷಯಗಳ ನಡುವೆ, ಕೆಲವು ಖರೀದಿದಾರರು ಮುಂಗಡದ ಮರುಪಾವತಿಗೆ ನ್ಯಾಯಾಲಯದ ಮೊರೆ ಹೋಗಿದ್ದು ಮತ್ತು ಕೆಲವು ಪ್ರಕರಣಗಳಲ್ಲಿ ಖರೀದಿದಾರ ಪರವಾಗಿ ಇದನ್ನು ನಿರ್ಣಯಿಸಲಾಯಿತು. ಸಿವಿಲ್ ಮೇಲ್ಮನವಿಯಲ್ಲಿ ಭಾರತ ಸರ್ವೋಚ್ಚ ನ್ಯಾಯಾಲಯದ ದಿನಾಂಕ: 24.08.2008ರ ಆದೇಶದ ಮೇರೆಗೆ ಫೈಸಲಾತಿ ಮಾಡಲಾಗಿದೆ. ಗ್ರಾನೈಟ್‌ಗೆ ಪಡೆಯಲಾದ ಮುಂಗಡ ರೂ. 22,88,594/- (ರೂ. 22,88,594/-) ಗ್ರಾನೈಟ್‌ಗೆ ಇತರೆ ಸಾಲದಾತರು ರೂ. 72,37,934/- (ರೂ. 72,37,934/-) ಮತ್ತು ಗ್ರಾನೈಟ್‌ಗಾಗಿ ಅರಣ್ಯ ಇಲಾಖೆಗೆ ಪಾವತಿಸಬೇಕಾದ ಮೊತ್ತ ರೂ. 60,88,064/- (ರೂ. 60,88,064/-) ಇವನ್ನು ಸರಿಹೊಂದಿಸಿಲ್ಲ ಏಕೆಂದರೆ ಇವನ್ನು ಪರಿಶೀಲಿಸಿ, ಸಮನ್ವಯ ಗೊಳಿಸಬೇಕಿದೆ. ಆದರೆ ಈ ವರ್ಷದಲ್ಲಿ ಸಾಗಿಸಲಾಗದ ಬಯಲಿನಲ್ಲಿ ಬಾಕಿ ಉಳಿದಿರುವ ದಾಸ್ತಾನಿನ ಭೌತಿಕ ತಪಾಸಣೆಯನ್ನು ಮಾಡಲಾಗಿಲ್ಲ. ಈ ಬಗ್ಗೆ ಸಿಬ್ಬಂಧಿಗಳ ತೀವ್ರ ಕೊರತೆಯ ಪ್ರಯುಕ್ತ ಸಂಸ್ಥೆಯು ಯಾವುದೇ ದೃಢೀಕರಣವನ್ನು ಅರಣ್ಯ ಇಲಾಖೆಯಿಂದ ಪಡೆದಿರುವುದಿಲ್ಲ.

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ

ಹೆಚ್ಚುವರಿ ಕಂಪನಿ ನಿರ್ದಿಷ್ಟ ನಿರ್ದೇಶನಗಳು

ಕ್ರ. ಸಂ.	ನಿರ್ದೇಶನಗಳು	ಹೇಳಿಕೆಗಳು
ಎ.	ಕಾಡಿನ ಹೊದಿಕೆಯನ್ನು ಸಂರಕ್ಷಿಸಲು ಮತ್ತು ಉಳಿಸಲು ಅನುವಾಗುವಂತೆ ಅರಣ್ಯ ಸಂರಕ್ಷಣಾ ಕಾಯ್ದೆಯ ಅನುಸಾರವಾಗಿ ಅದರ ಅಡಿಯಲ್ಲಿ ಬರುವ ನಿಯಮಗಳು ಮತ್ತು ನಿಬಂಧನೆಗಳಂತೆ ಕಾಡು ಮತ್ತ ಅದರಲ್ಲಿರುವ ಮರಗಳನ್ನು ತೆರವುಗೊಳಿಸಲು ಅಗತ್ಯವಾದ ಅನುಮತಿ ಇತ್ಯಾದಿಗಳನ್ನು ಪಡೆಯಲಾಗಿದೆಯೇ. ಕಾಡಿನ ಹೊದಿಕೆಯನ್ನು ವಿಸ್ತರಿಸಲು ಮತ್ತು ಸಂರಕ್ಷಿಸುವುದಕ್ಕೆ ಪೂರಕವಾಗಿ ಅನಧಿಕೃತವಾಗಿ ಮರಗಳನ್ನು ಕತ್ತರಿಸಲು ಕಂಪನಿಯು ಸೂಕ್ತ ಕ್ರಮಗಳನನು ಕೈಗೊಂಡಿದೆಯೇ	ಕಾಡು ಮತ್ತು ಅದರಲ್ಲಿರುವ ಮರಗಳನ್ನು ತೆಗೆಯಲು ಅಗತ್ಯವಾದ ಅನುಮತಿಯನ್ನು ಕಂಪನಿಯು ಪಡೆದಿರುತ್ತದೆ ಮತ್ತು ಅರಣ್ಯ ಸಂರಕ್ಷಣಾ ಕಾಯ್ದೆಯನ್ನು ಸಾಮಾನ್ಯವಾಗಿ ಅನುಸರಣೆ ಮಾಡುತ್ತಿದೆ. ವರ್ಷದ ಅವಧಿಯಲ್ಲಿ ಕಂಪನಿಯು ಯಾವುದೇ ಸ್ವಂತ ಗಿಡ ನೆಡುವ ಕಾರ್ಯಕ್ರಮವನ್ನು ಕೈಗೊಂಡಿರುವುದಿಲ್ಲ.
ಬಿ.	ಉರುಳಿಸಲು ಗುರುತಿಸಲಾಗಿರುವ ಮರಗಳನ್ನು ಸಕಾಲದಲ್ಲಿ ಉರುಳಿಸುವ ಕ್ರಮ ಕೈಗೊಳ್ಳಲು, ಇದರಿಂದ ತೊಗಟೆಗಳನ್ನು ತೆಗೆಯಲು ಮತ್ತು ತೆಗೆಯುವಾಗ, ಸಾಗಿಸುವಾಗ ಮತ್ತು ದಾಸ್ತಾನು ಇಟ್ಟಿರುವಾಗ ಕೆಟ್ಟುಹೋಗುವುದರಿಂದ ರಕ್ಷಿಸಲು ಕಂಪನಿಯು ಸೂಕ್ತವಾದ ವ್ಯವಸ್ಥೆಯನ್ನು ರೂಪಿಸಿರುತ್ತದೆಯೇ. ಇಲ್ಲವಾದಲ್ಲಿ ವರ್ಷದ ಅವಧಿಯಲ್ಲಿ ಕೆಟ್ಟುಹೋಗಿರುವ ಕಾರಣದಿಂದ ಆಗಿರುವ ನಷ್ಟದ ವಿವರಗಳನ್ನು ಎತ್ತಿತೋರಿಸುವುದು.	ಉರುಳಿಸಲು ಗುರುತಿಸಲಾಗಿರುವ ಮರಗಳನ್ನು ಸಕಾಲದಲ್ಲಿ ಉರುಳಿಸುವ ಕ್ರಮ ಕೈಗೊಳ್ಳು, ಇದರಿಂದ ತೊಗಟೆಗಳನ್ನು ತೆಗೆಯಲು ಮತ್ತು ತೆಗೆಯುವಾಗ, ಸಾಗಿಸುವಾಗ ಮತ್ತು ದಾಸ್ತಾನು ಇಟ್ಟಿರುವಾಗ ಕೆಟ್ಟುಹೋಗುವುದರಿಂದ ರಕ್ಷಿಸಲು ಕಂಪನಿಯು ಸೂಕ್ತವಾದ ವ್ಯವಸ್ಥೆಯನ್ನು ರೂಪಿಸಿರುತ್ತದೆ. ಆದಾಗ್ಯೂ, ದಿಮ್ಮೆ ಸಾಗಾಟದ ಸಮಯದಲ್ಲಿ ಕಂಡುಬರುವ ಕೊರತೆಯನ್ನು ಕಂಪನಿಯು ಸಾಗಾಣಿಕೆ ಗುತ್ತಿಗೆದಾರರಿಂದ ಮಾರಾಟ ಬೆಲೆಯ ಆಧಾರದ ಬದಲಿಗೆ ಮೂಲ ಬೆಲೆ ಮತ್ತು ಲಾಭದ ಭಾಗದ ಆಧಾರದ ಮೇಲೆ ವಸೂಲು ಮಾಡುತ್ತಿದೆ. ನಾವು ಗಮನಿಸಿರುವುದಕ್ಕೆ ಆಡಳಿತ ಮಂಡಳಿಯು ಈ ಬಗ್ಗೆ ಪರಿಶೀಲಿಸುವುದಾಗಿ ಸ್ಪಷ್ಟೀಕರಣ ನೀಡಿರುತ್ತದೆ.
ಸಿ.	ರಾಜಧನವನ್ನು ಸೂಕ್ತವಾಗಿ ಲೆಕ್ಕಹಾಕಲು ಆಧಾರ ಮತ್ತು ಸಕಾಲದಲ್ಲಿ ಅರಣ್ಯ ಇಲಾಖೆಗೆ ಪಾವತಿಸುವುದನ್ನು ಪರಿಶೀಲಿಸಲು ಸೂಕ್ತವಾದ ವ್ಯವಸ್ಥೆಯನ್ನು ಹೊಂದಿದೆಯೇ. ಕಂಪನಿಯು ರಾಜಧನವನ್ನು ಪಾವತಿಸಲು ತಡವಾಗಿರುವ ಕಾರಣದಿಂದ ರಾಜ್ಯ ಸರ್ಕಾರಕ್ಕೆ ಪಾವತಿಸಿರುವ ಬಡ್ಡಿಯ ಬಗ್ಗೆ ವಿವರಣೆ ನೀಡುವುದು.	ನಿಗಧಿಪಡಿಸಿರುವ ಸಮಯದಲ್ಲಿ ರಾಜಧನವನ್ನು ಸೂಕ್ತವಾಗಿ ಲೆಕ್ಕಹಾಕಲು ಮತ್ತು ಸಕಾಲದಲ್ಲಿ ಅರಣ್ಯ ಇಲಾಖೆಗೆ ಪಾವತಿಸುವುದನ್ನು ಪರಿಶೀಲಿಸಲು ಕಂಪನಿಯು ಸೂಕ್ತವಾದ ವ್ಯವಸ್ಥೆಯನ್ನು ಹೊಂದಿರುತ್ತದೆ. ವರದಿಯ ವರ್ಷದಲ್ಲಿ ಕಂಪನಿಯು ರಾಜಧನವನ್ನು ಪಾವತಿಸಲು ತಡವಾಗಿರುವ ಕಾರಣದಿಂದ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಬಡ್ಡಿಯನ್ನು ಪಾವತಿಸಿರುವುದನ್ನು ನಾವು ಗಮನಿಸಿರುವುದಿಲ್ಲ. ಡಿಎಫ್ಒ ಅವರಿಂದ ಬಂದಿರುವ ಮಾಹಿತಿಗಳ ಆಧಾರದ ಮೇಲೆ ಕೆಲವೊಂದು ಪ್ರಕರಣಗಳಲ್ಲಿ ರಾಜಧನವನ್ನು ಮುಂಗಡವಾಗಿ ಪಾವತಿಸಲಾಗಿರುತ್ತದೆ.
ಡಿ.	ಕೇಂದ್ರ/ರಾಜ್ಯ ಸರ್ಕಾರದಿಂದ ಆಥವಾ ಅವುಗಳ ಏಜೆನ್ಸಿಗಳಿಂದ ಕಂಪನಿಯು ಯಾವುದೇ ನಿರ್ಧಿಷ್ಟವಾದ ಚಟುವಟಿಕೆಗಳನ್ನು ನಡೆಸುವ ಸಲುವಾಗಿ ಪಡೆದಿರುವ ಸಾಲಗಳು/ನೆರವಿನ ದೇಣಿಗೆ/ ಸಹಾಯಧನಗಳು ಪರಿಣಾಮಕಾರಿಯಾಗಿ ವಿನಿಯೋಗಿಸಲ್ಪಟ್ಟಿದೆಯೇ ಎಂಬುದನ್ನು ಪರೀಕ್ಷಿಸಿ, ನಿಧಿಗಳ ಮಾರ್ಗ ಪಲ್ಲಟವಾಗಿದ್ದರೆ ಪಟ್ಟಿ ಮಾಡಿ.	ಪರಿಶೀಲನೆಯ ವರ್ಷಾವಧಿಯಲ್ಲಿ ಕಂಪನಿಯು ಕೇಂದ್ರ/ರಾಜ್ಯ ಸರ್ಕಾರದಿಂದ ಅಥವಾ ಅವುಗಳ ಏಜೆನ್ಸಿಗಳಿಂದ ಯಾವುದೇ ನಿರ್ಧಿಷ್ಟವಾದ ಚಟುವಟಿಕೆಗಳನ್ನು ನಡೆಸುವ ಸಲುವಾಗಿ ಯಾವುದೇ ಸಾಲಗಳು/ಅನುದಾನ/ಸಹಾಯಧನಗಳನ್ನು ಸ್ವೀಕರಿಸಿರುವುದಿಲ್ಲ.

ಕ್ರ. ಸಂ.	ನಿರ್ದೇಶನಗಳು	ಹೇಳಿಕೆಗಳು
ಇ.	ಲೆಕ್ಕಪರಿಶೋಧಿಸಲ್ಪಟ್ಟಿರುವ ಸಂಸ್ಥೆಯು ತನ್ನ ವ್ಯವಹಾರವನ್ನು ಅಥವಾ ಅದರ ಭಾಗವನ್ನು ಗಣಕೀಕರಣ ಗೊಳಿಸಿದ್ದಲ್ಲಿ, ಲೆಕ್ಕಪತ್ರಗಳು, ಮಾರಾಟ ಸಿಬ್ಬಂಧಿ ಮಾಹಿತಿಗಳು, ವೇತನ ಮಾಹಿತಿಗಳು, ದಾಸ್ತಾನು ಮತ್ತಿತರ ಕಂಪನಿಯ ಎಷ್ಟು ಪ್ರಮಾಣದ ಡಾಟಾಗಳು ವಿದ್ಯುನ್ಮಾನ ಮಾದರಿಯಲ್ಲಿದೆ ಎಂಬ ಬಗ್ಗೆ ಮತ್ತು ಅಂತಹ ಡಾಟಾಗಳು /ಸಾಫ್ಟ್‌ವೇರ್/ಹಾರ್ಡ್‌ವೇರ್‌ಗಳಿಗಾಗಿ ಇರುವ ಸೂಕ್ತ ಭದ್ರತಾ ನೀತಿಯ ಬಗ್ಗೆ ಪರಿಶೀಲಿಸಿ ವರದಿ ಮಾಡುವುದು.	ಕಂಪನಿಯು ನಿರ್ವಹಣೆಯು ಸಂಪೂರ್ಣವಾಗಿ ಗಣಕೀಕರಣಗೊಂಡಿರುವುದಿಲ್ಲ. ಲೆಕ್ಕಪತ್ರಗಳ ಡಾಟಾವನ್ನು ವಿದ್ಯುನ್ಮಾನ ಮಾಧ್ಯಮದಲ್ಲಿ ಸಂರಕ್ಷಿಸಲಾಗಿರುತ್ತದೆ. ಕಂಪನಿಯ ಕೇಂದ್ರ ಕಛೇರಿ ಮತ್ತು ಅದರ ಘಟಕಗಳಲ್ಲಿ 'ಟ್ಯಾಲಿ' ಲೆಕ್ಕಪತ್ರ ಪ್ಯಾಕೇಜನ್ನು ಹೊಂದಿರುತ್ತದೆ. ಕೆಲವೊಂದು ಘಟಕಗಳಲ್ಲಿ, ಸಾಮಗ್ರಿಗಳನ್ನು ಒಟ್ಟುಗೂಡಿಸಲಾಗಿರುವುದಿಲ್ಲ. ಮುಂದುವರಿದಂತೆ ಡಾಟಾ ಎಂಟ್ರಿಯನ್ನು ಹೊರಗುತ್ತಿಗೆಯ ಮೇಲೇ ಮಾಡಿಸಲಾಗುತ್ತಿದ್ದು, ಸೂಕ್ತ ಭದ್ರತಾ ವ್ಯವಸ್ಥೆಯು ಇರುವುದಿಲ್ಲ. 'ಟ್ಯಾಲಿ' ಆಡಳಿತ/ತಿದ್ದುಪಡಿ ಹಕ್ಕನ್ನು ನಿಯಂತ್ರಿಸ ಲಾಗಿರುವುದಿಲ್ಲ ಮತ್ತು ಬಹಳಷ್ಟು ಪ್ರಕರಣಗಳಲ್ಲಿ ದಾಖಲಾತಿಗಳು ನೌಕರರಿಂದ/ಗುತ್ತಿಗೆ ನೌಕರರಿಂದ ಬದಲಾವಣೆಗೆ/ತಿದ್ದುಪಡಿಗೆ ಒಳಪಟ್ಟಿರುತ್ತದೆ. ಕೆಲವೊಂದು ಘಟಕಗಳಲ್ಲಿ ಟ್ಯಾಲಿಯು ಸ್ವಯಂಚಾಲಿತ ಬ್ಯಾಕ್‌ಅಪ್ ವ್ಯವಸ್ಥೆಗೆ ವಿನ್ಯಾಸಗೊಳಿಸಲಾಗಿರುವುದಿಲ್ಲ. ಕಂಪನಿಯು ಡಾಟಾಗಳು/ಸಾಫ್ಟ್‌ವೇರ್/ ಹಾರ್ಡ್ ವೇರ್‌ಗಳಿಗಾಗಿ ಸೂಕ್ತ ಭದ್ರತಾ ನೀತಿಯನ್ನು ಹೊಂದಿರುವುದಿಲ್ಲ. ಡಾಟಾಗಳ ಸಂಗ್ರಹ, ದಾಸ್ತಾನು, ಉಪಯೋಗ ಮತ್ತು ಸುರಕ್ಷಿತವಾಗಿ ಇಡುವ ಬಗ್ಗೆ ಮತ್ತು ಇದರ ಪರಿಷ್ಕರಣೆ ಬಗ್ಗೆ ಅನುಸರಿಸುತ್ತಿರುವ ಕ್ರಮಗಳು ಮತ್ತು ಮಾರ್ಗದರ್ಶಿ ಸೂತ್ರದ ಅಲಭ್ಯತೆಯಿಂದಾಗಿ ಆಗಿರಬಹುದಾದ ನೀತಿಯ ಉಲ್ಲಂಘನೆಯ ಬಗ್ಗೆ ಮತ್ತು ಅವುಗಳಿಂದಾಗುವ ಅಪಾಯಗಳ ಬಗ್ಗೆ ಹಾಗೂ ವ್ಯವಸ್ಥೆಯ ಅವುಗಳು ಬೀರುವ ಪರಿಣಾಮದ ಬಗ್ಗೆ ಹೇಳಿಕೆ ನೀಡಲು ನಾವು ಅಸಮರ್ಥರಾಗಿರುತ್ತೇವೆ.

ಪಿಎನ್‌ಆರ್ & ಕಂ.,
ಸನ್ನದು ಲೆಕ್ಕಿಗರ ಪರವಾಗಿ
ಸಂಸ್ಥೆ ನೋಂದಣಿ ಸಂಖ್ಯೆ : 002495S
ಸಹಿ/-
(ಗುರುಪ್ರಸಾದ್ ಭಾಧ್ಯ)
ಪಾಲುದಾರರು
ಸದಸ್ಯತ್ವದ ಸಂಖ್ಯೆ: 234052

ದಿನಾಂಕ: 17.10.2018
ಸ್ಥಳ : ಬೆಂಗಳೂರು

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ

CIN - U02005KA1973SGC002314

ನೋಂದಣಿ ಕಛೇರಿ: ವನ ವಿಕಾಸ, 3ನೇ ಮಹಡಿ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560 003

2018ರ ಮಾರ್ಚ್ 31 ರಂದು ಇದ್ದಂತೆ ಪ್ರತ್ಯೇಕ ಆರ್ಥಿಕ ನಮತೋಲನಾ ಪಟ್ಟಿ

ವಿವರಗಳು	ಟಿಪ್ಪಣಿ ಸಂಖ್ಯೆ	31.03.2018 ರಲ್ಲಿದ್ದಂತೆ		31.03.2017ರಲ್ಲಿದ್ದಂತೆ	
		ರೂ.	ರೂ.	ರೂ.	ರೂ.
ಈಕ್ವಟಿ ಮತ್ತು ಹೊಣೆಗಾರಿಕೆಗಳು					
ಷೇರುದಾರರ ನಿಧಿಗಳು					
ಷೇರು ಬಂಡವಾಳ	3	26,658,000		26,658,000	
ಮೀಸಲುಗಳು ಮತ್ತು ಹೆಚ್ಚಳ	4	342,068,852	368,726,852	299,036,882	325,694,882
ಅಪ್ರಚಲಿತ ಹೊಣೆಗಾರಿಕೆಗಳು					
ದೀರ್ಘಾವಧಿ ಸಾಲಗಳು	5	5,532,957		5,532,957	
ಮುಂದೂಡಿದ ತೆರಿಗೆ ಹೊಣೆಗಾರಿಕೆಗಳು (ನಿವ್ವಳ)	6	2,560,824		3,028,394	
ಇತರೆ ದೀರ್ಘಾವಧಿ ಹೊಣೆಗಾರಿಕೆಗಳು	7	708,409	8,802,190	600,370	9,161,721
ಪ್ರಚಲಿತ ಹೊಣೆಗಾರಿಕೆಗಳು					
ವ್ಯಾಪಾರ ಪಾವತಿಗಳು	8				
– ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆಗಳ ಒಟ್ಟು ಬಾಕಿ ಮೊತ್ತ		-		-	
– ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆಗಳ ಒಟ್ಟು ಸಾಲದ ಮೊತ್ತ		17,960,400		24,145,747	
ಇತರೆ ಪ್ರಚಲಿತ ಹೊಣೆಗಾರಿಕೆಗಳು	9	220,747,494		166,545,137	
ಅಲ್ಪಾವಧಿ ಮುನ್ನೇರ್ಪಾಟುಗಳು	10	18,500,000	257,207,894	49,000,000	239,690,884
ಒಟ್ಟು			634,736,936		574,547,488
ಸ್ವತ್ತುಗಳು					
ಅಪ್ರಚಲಿತ ಸ್ವತ್ತುಗಳು					
ಸ್ಥಿರಾಸ್ತಿಗಳು					
ಪ್ರತ್ಯಕ್ಷ ಸ್ವತ್ತುಗಳು	11	22,501,650		20,955,853	
ಅಪ್ರಚಲಿತ ಹೂಡಿಕೆಗಳು	12	294,550		294,550	
ದೀರ್ಘಾವಧಿ ಸಾಲಗಳು ಮತ್ತು ಮುಂಗಡಗಳು	13	2,333,830		2,333,830	
ಇತರೆ ಅಪ್ರಚಲಿತ ಆಸ್ತಿಗಳು	14	4,309,115	29,439,145	2,558,478	26,142,711
ಚಾಲ್ತಿ ಆಸ್ತಿಗಳು					
ತಪಶೀಲು ಪಟ್ಟಿ	15	24,786,207		38,893,054	
ವ್ಯಾಪಾರದಿಂದ ಬರಬೇಕಾಗಿರುವುದು	16	274,041,716		195,838,311	
ನಗದು ಮತ್ತು ನಗದಿಗೆ ಸಮನಾಂಶಗಳು	17	225,453,811		223,787,900	
ಅಲ್ಪಾವಧಿ ಸಾಲ ಮತ್ತು ಮುಂಗಡಗಳು	18	80,981,022		89,616,678	
ಇತರೆ ಪ್ರಚಲಿತ ಸ್ವತ್ತುಗಳು	19	35,035	605,297,791	268,834	548,404,778
ಒಟ್ಟು			634,736,936		574,547,488
ಗಣನೀಯ ಲೆಕ್ಕಪತ್ರ ನೀತಿಯ ಸಾರಾಂಶ	2.1				
ಲಗತ್ತಿಸಲಾದ ಟಿಪ್ಪಣಿಗಳು ಸ್ಥಿತಿ ವಿವರಣ ಪಟ್ಟಿಯ ಅಂಗವಾಗಿರುತ್ತದೆ	1 to 31				

ಲಗತ್ತಿಸಲಾದ ಸಮ ದಿನಂಕದ ನಮ್ಮ ವರದಿ ಅನ್ವಯ ಓದುವುದು

ಪಿಎನ್‌ಆರ್ ಅಂಡ್ ಕಂ., ಪರವಾಗಿ

ಸನ್ನದು ಲೆಕ್ಕಿಗರು

ಸಂಸ್ಥೆಯ ನೋಂದಣಿ ಸಂಖ್ಯೆ: 002495S

ಸಹಿ/–

(ಗುರುಪ್ರಸಾದ್ ಭಾದ್ಯ)

ಪಾಲುದಾರರು

ಸದಸ್ಯತ್ವದ ಸಂಖ್ಯೆ : 234052

ದಿನಾಂಕ :04.10.2018

ಸ್ಥಳ : ಬೆಂಗಳೂರು

ಆಡಳಿತ ಮಂಡಳಿ ಹಾಗೂ ಪರವಾಗಿ

ಸಹಿ/–

(ಸಂಜಯ್ ಮೋಹನ್)

ವ್ಯವಸ್ಥಾಪಕ ನಿರ್ದೇಶಕರು

ಡಿಐಎನ್ : 3196823

ಸಹಿ/–

(ಆರ್. ಶಂಕರ್)

ಅಧ್ಯಕ್ಷರು

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ

CIN - U02005KA1973SGC002314

ನೋಂದಣಿ ಕಛೇರಿ: ವನ ವಿಕಾಸ, 3ನೇ ಮಹಡಿ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560 003

2018ರ ಮಾರ್ಚ್ 31 ರಂದು ಮುಗಿದ ವರ್ಷಕ್ಕೆ ಪ್ರತ್ಯೇಕ ಲಾಭ ಮತ್ತು ನಷ್ಟದ ಲೆಕ್ಕ

ಕ್ರ. ಸಂ.	ವಿವರಗಳು	ಟಿಪ್ಪಣಿ ಸಂಖ್ಯೆ	31.03.2018 ರಲ್ಲಿದ್ದಂತೆ		31.03.2017 ರಲ್ಲಿದ್ದಂತೆ	
			ರೂ	ರೂ	ರೂ	ರೂ
I	**ಆದಾಯ**					
	ಕಾರ್ಯಾಚರಣೆಯಿಂದ ಆದಾಯ	21		503,229,642		667,770,304
	ಇತರೆ ಆದಾಯ	22		19,868,963		24,327,822
	ಒಟ್ಟು ಆದಾಯ			523,098,605		692,098,127
II	**ವೆಚ್ಚ**					
	ಉಪಯೋಗಿಸಿದ ಸಾಮಾಗ್ರಿಗಳ ವೆಚ್ಚ	23	16,599,702		18,287,191	
	ದಾಸ್ತಾನುಗಳು ಖರೀದಿ	24	96,305,497		149,856,722	
	ತಪಶೀಲುಗಳ ಬದಲಾವಣೆ	25				
	– ಪ್ರಗತಿಯಲ್ಲಿರುವ ಕಾರ್ಯಗಳು		113,097		1,168,367	
	– ತಯಾರಾದ ವಸ್ತುಗಳು		12,360,547	125,378,843	(11,102,667)	158,209,613
	ಉದ್ಯೋಗಿಗಳ ಸೌಲಭ್ಯಕ್ಕಾಗಿ ವೆಚ್ಚಗಳು	26		52,427,584		59,660,730
	ಸವಕಳಿ ಮತ್ತು ಋಣವಿಮೋಚನೆ ವೆಚ್ಚ	27		2,923,434		2,706,931
	ಇತರೆ ವೆಚ್ಚಗಳು	28		278,630,921		321,729,250
	ಒಟ್ಟು ವೆಚ್ಚಗಳು			459,360,782		542,306,524
III	ಅಸಾಧರಣ ಮತ್ತು ವಿಶೇಷ ವಸ್ತುಗಳು ಮತ್ತು ಲಾಭ/(ನಷ್ಟ)			63,737,823		149,791,603
IV	ಮುಂಚಿನ ಅವಧಿಯ ಬಾಬ್ತುಗಳು	29		(2,654,573)		(4,375,995)
V	ಒಟ್ಟು ಲಾಭ/(ನಷ್ಟ)ಗಳ ಮುಂಚಿನ ತೆರಿಗೆ ವೆಚ್ಚ			61,083,250		145,415,608
VI	**ತೆರಿಗೆ ವೆಚ್ಚಗಳು:**					
	ಚಾಲ್ತಿ ತೆರಿಗೆ		(18,500,000)		(49,000,000)	
	ಮುಂದೂಡಿದ ತೆರಿಗೆ		467,570	(18,032,430)	(567,928)	(49,567,928)
VII	ಪ್ರಸ್ತುತ ವರ್ಷದ ಲಾಭ/(ನಷ್ಟ)			43,050,820		95,847,680
VIII	ಪ್ರತಿ ಈಕ್ವಿಟಿ ಷೇರುಗಳಿಗೆ ಗಳಿಕೆ (ಪ್ರತಿ ರೂ. 1000/–ಗಳ ಮೌಲ್ಯದಂತೆ)	30				
	ಮುಂಚಿನ ಅಸಾಧಾರಣ ವಸ್ತುಗಳು					
	ಮೂಲ ಮತ್ತು ನಿಸ್ಸಾರ			1,715		3,760
	ನಂತರದ ಅಸಾಧಾರಣ ವಸ್ತುಗಳು					
	ಮೂಲ ಮತ್ತು ನಿಸ್ಸಾರ			1,615		3,595
IX	ಗಣನೀಯ ಲೆಕ್ಕಪತ್ರ ನೀತಿಯ ಸಾರಾಂಶ	2.1				
X	ಲಗತ್ತಿಸಲಾದ ಟಿಪ್ಪಣಿಗಳ ಸ್ಥಿತಿ ವಿವರಣಾ ಪಟ್ಟಿಯ ಅಂಗವಾಗಿರುತ್ತದೆ	1 to 31				

ಲಗತ್ತಿಸಲಾದ ಸಮ ದಿನಂಕದ ನಮ್ಮ ವರದಿ ಅನ್ವಯ ಓದುವುದು

ಪಿಎನ್‌ಆರ್ ಅಂಡ್ ಕಂ., ಪರವಾಗಿ
ಸನ್ನದು ಲೆಕ್ಕಿಗರು
ಸಂಸ್ಥೆಯ ನೋಂದಣಿ ಸಂಖ್ಯೆ: 002495S

ಸಹಿ/–
(ಗುರುಪ್ರಸಾದ್ ಭಾದ್ಯ)
ಪಾಲುದಾರರು
ಸದಸ್ಯತ್ವದ ಸಂಖ್ಯೆ : 234052

ದಿನಾಂಕ :04.10.2018
ಸ್ಥಳ : ಬೆಂಗಳೂರು

ಆಡಳಿತ ಮಂಡಳಿ ಹಾಗೂ ಪರವಾಗಿ

ಸಹಿ/–
(ಸಂಜಯ್ ಮೋಹನ್)
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್ : 3196823

ಸಹಿ/–
(ಆರ್. ಶಂಕರ್)
ಅಧ್ಯಕ್ಷರು

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ

CIN - U02005KA1973SGC002314

ನೋಂದಣಿ ಕಛೇರಿ: ವನ ವಿಕಾಸ, 3ನೇ ಮಹಡಿ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560 003

2018 ಮಾರ್ಚ್ 31 ಕ್ಕೆ ಅಂತ್ಯಗೊಂಡಂತೆ ನಗದು / ಹರಿವುಗಳ ತಃಖ್ತೆ

ವಿವರಗಳು	31.03.2018 ರಲ್ಲಿದ್ದಂತೆ	31.03.2017 ರಲ್ಲಿದ್ದಂತೆ
	ರೂ.	ರೂ.
ಕಾರ್ಯಾಚರಣೆ ಚಟುವಟಿಕೆಗಳಿಂದ ನಗದು ಹರಿವು		
ತೆರಿಗೆ ಕಟ್ಟುವ ಮುನ್ನ ಲಾಭ / ನಷ್ಟ	61,083,250	145,415,608
ಇವುಗಳಿಗೆ ನೇರ್ಪಡಿಕೆ / ಹೊಂದಾಣಿಕೆ		
ಸವಕಳಿ ಮತ್ತು ಋಣವಿಮೋಚನೆ ವೆಚ್ಚ	2,923,434	2,706,931
ಆಸ್ತಿಯ ಮಾರಾಟದಿಂದ ಬಂದ ಲಾಭ	(187,619)	(3,273,850)
ಸ್ವೀಕರಿಸಿದ ಬಡ್ಡಿ	(11,506,295)	(14,563,272)
ಹಿಂಪಡೆಯಲಾದ ಬಂಡವಾಳ ಅನುದಾನದ ಸಮ ಪಾಲಿನ ಮೌಲ್ಯ	(18,850)	(18,850)
	52,293,920	130,266,567
ತಪಶೀಲುಗಳಲ್ಲಿ (ಹೆಚ್ಚಳ) / ಇಳಿಕೆ	14,106,847	(8,014,539)
ವ್ಯಾಪಾರ ಮತ್ತು ಇತರೆ ಪ್ರಾಪ್ಯ ಲೆಕ್ಕಗಳಲ್ಲಿ (ಹೆಚ್ಚಳ) / ಇಳಿಕೆ	(78,203,405)	(90,269,756)
ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳಲ್ಲಿ (ಹೆಚ್ಚಳ) / ಇಳಿಕೆ	8,635,656	(40,437,498)
ಇತರೆ ಚಾಲ್ತಿ ಆಸ್ತಿಗಳಲ್ಲಿ (ಹೆಚ್ಚಳ) / ಇಳಿಕೆ	233,799	(268,834)
ವ್ಯಾಪಾರ ಪಾವತಿಗಳಗಳಲ್ಲಿ (ಹೆಚ್ಚಳ) / ಇಳಿಕೆ	(6,185,347)	5,397,885
ಇತರೆ ಚಾಲ್ತಿ ಹೊಣೆಗಾರಿಕೆಗಳಲ್ಲಿ (ಹೆಚ್ಚಳ) / ಇಳಿಕೆ	54,202,357	26,934,010
ಅಲ್ಪಾವಧಿ ಮುನ್ನೇರ್ಪಾಟುಗಳಲ್ಲಿ (ಹೆಚ್ಚಳ) / ಇಳಿಕೆ	(30,500,000)	36,000,000
	(37,710,093)	(70,658,733)
	14,583,827	59,607,836
ಪಾವತಿಸಲಾದ ಆದಾಯ ತೆರಿಗೆಗಳು	(18,500,000)	(49,000,000)
ಹಿಂದಿನ ವರ್ಷಕ್ಕೆ ಸಂಬಂಧಿಸಿದ ಆದಾಯ ತೆರಿಗೆ	-	
ಕಾರ್ಯಾಚರಣೆ ಚಟುವಟಿಕೆಗಳಿಂದ ನಿವ್ವಳ ನಗದು	**(3,916,173)**	**10,607,836**
ಹೂಡಿಕೆ ಚಟುವಟಿಕೆಗಳಿಂದ ನಗದು ಹರಿವು		
ಸ್ಥಿರಾಸ್ತಿಗಳ ಖರೀದಿ	(4,469,231)	(7,020,194)
ಆಸ್ತಿಗಳ ಮಾರಾಟ	187,619	3,040,064
ದೀರ್ಘಾವಧಿ ಸಾಲ ಮತ್ತು ಮುಂಗಡಗಳ ಹೆಚ್ಚಳ / ಇಳಿಕೆ	-	-
ಇತರೆ ಅಪ್ರಚಲಿತ ಆಸ್ತಿಗಳ ಹೆಚ್ಚಳ / ಇಳಿಕೆ	(1,750,637)	1,487,956
ಬಡ್ಡಿಗಳನ್ನು ಪಡೆದಿರುವುದು	11,506,295	14,563,272
ಹೂಡಿಕೆ ಚಟುವಟಿಕೆಗಳಿಂದ ನಿವ್ವಳ ಹರಿವು	**5,474,046**	**12,071,097**
ಹಣ ಒದಗಿಸಿದ ಚಟುವಟಿಕೆಗಳಿಂದ ನಗದು ಹರಿವು		
ಇತರೆ ದೀಘಾವಧಿ ಹೊಣೆಗಾರಿಕೆಗಳಿಂದ ಪ್ರಾಪ್ತಿ	108,039	242,640
ಸಾಂಸ್ಥಿಕ ಲಾಭಾಂಶ ತೆರಿಗೆ	-	(2,214,193)
ಮಧ್ಯಂತರ ಡಿವಿಡೆಂಡ್ ಪಾವತಿ	-	(10,663,200)
ಹಣಕಾಸಿನ ಹೂಡಿಕೆಯ ಚಟುವಟಿಕೆಗಳಿಂದ ನಿವ್ವಳ ಹಣ	**108,039**	**(12,634,753)**
ನಗದು ಮತ್ತು ನಗದು ಸಮಾನಗಳಲ್ಲಿ ನಿವ್ವಳ ಹೆಚ್ಚಳ / ಗಳಿಕೆ	**1,665,911**	**10,044,180**

ವರದಿ ಮಾಡುತ್ತಿರುವ ಅವಧಿಯ ಆರಂಭದಲ್ಲಿ ನಗದು ಮತ್ತು ನಗದು ಸಮಾನಗಳು	223,787,900	213,743,719
ವರದಿ ಮಾಡುತ್ತಿರುವ ಅವಧಿಯ ಕೊನೆಯಲ್ಲಿ ನಗದು ಮತ್ತು ನಗದು ಸಮಾನಗಳು	**225,453,811**	**223,787,900**

ನಗದು ಮತ್ತು ನಗದು ಸಮಾನಗಳು

ನಗದು ಮತ್ತು ನಗದು ಸಮಾನಗಳು ಕೈಯಲ್ಲಿರುವ ನಗದು ಮತ್ತು ಬ್ಯಾಂಕ್‌ಗಳಲ್ಲಿ ಶಿಲ್ಕುಗಳ ಹಾಗೂ ಹಣ ಮಾರುಕಟ್ಟೆ ಸಾಧನಗಳಲ್ಲಿ ಹೂಡಿಕೆಗಳನ್ನು ಒಳಗೊಂಡಿದೆ. ನಗದು ಹರಿವು ತಃಖ್ತೆಯಲ್ಲಿ ಸೇರಿಸಲಾದ ನಗದು ಮತ್ತು ನಗದು ಸಮಾನ ಸ್ಥಿತಿ ವಿವರಣ ಪಟ್ಟಿಯಲ್ಲಿರುವ ಈ ಕೆಳಗಿನ ಮೊತ್ತಗಳನ್ನು ಒಳಗೊಂಡಿದೆ.

ಕೈಯಲ್ಲಿರುವ ನಗದು ಮತ್ತು ಬ್ಯಾಂಕ್‌ಗಳಲ್ಲಿ ಶಿಲ್ಕುಗಳು	225,453,811	223,787,900
ಅಲ್ಪಾವಧಿ ಹೂಡಿಕೆಗಳು	-	-
ವರದಿ ಮಾಡಿರುವಂತೆ ನಗದು ಮತ್ತು ನಗದು ಸಮಾನಗಳು	225,453,811	223,787,900
ವಿನಿಮಯ ದರ ಬದಲಾವಣೆಗಳ ಮೇಲಿನ ಪ್ರಭಾವ	-	-
ಮರುಹೇಳಿಕೆ ನೀಡಲಾದಂತೆ ನಗದು ಮತ್ತು ನಗದು ಸಮಾನಗಳು	**225,453,811**	**223,787,900**

ಲಗತ್ತಿಸಲಾದ ಸಮ ದಿನಂಕದ ನಮ್ಮ ವರದಿ ಅನ್ವಯ ಓದುವುದು

ಪಿಎನ್‌ಆರ್ ಅಂಡ್ ಕಂ., ಪರವಾಗಿ

ಸನ್ನದು ಲೆಕ್ಕಿಗರು

ಸಂಸ್ಥೆಯ ನೋಂದಣಿ ಸಂಖ್ಯೆ: 002495S

ಆಡಳಿತ ಮಂಡಳಿ ಹಾಗೂ ಪರವಾಗಿ

ಸಹಿ/–

(ಗುರುಪ್ರಸಾದ್ ಭಾದ್ಯ)

ಪಾಲುದಾರರು

ಸದಸ್ಯತ್ವದ ಸಂಖ್ಯೆ : 234052

ಸಹಿ/–

(ಸಂಜಯ್ ಮೋಹನ್)

ವ್ಯವಸ್ಥಾಪಕ ನಿರ್ದೇಶಕರು

ಡಿಐಎನ್ : 3196823

ಸಹಿ/–

(ಆರ್. ಶಂಕರ್)

ಅಧ್ಯಕ್ಷರು

ದಿನಾಂಕ :04.10.2018

ಸ್ಥಳ : ಬೆಂಗಳೂರು

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ

CIN - U02005KA1973SGC002314

ನೋಂದಣಿ ಕಛೇರಿ: ವನ ವಿಕಾಸ, 3ನೇ ಮಹಡಿ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560 003

ಹಣಕಾಸಿನ ಕೋಷ್ಟಕಗಳಿಗೆ ಟಿಪ್ಪಣಿಗಳು

ಹಣಕಾಸಿನ ಕೋಷ್ಟಕಗಳ ಅಂತರ್ಗತ ಭಾಗವಾಗಿರುವ ಪ್ರಮುಖ ಲೆಕ್ಕಪತ್ರ ನೀತಿಗಳು ಮತ್ತು ಟಿಪ್ಪಣಿಗಳು

1. **ಕಾರ್ಪೊರೇಟ್ ಮಾಹಿತಿಗಳು**

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತವು ಕರ್ನಾಟಕ ಸರ್ಕಾರದ ಸ್ವಾಮ್ಯದ ಉದ್ದಿಮೆಯಾಗಿದ್ದು, ಕಂಪನಿಗಳ ಕಾಯ್ದೆ 1956ರ ಉಪಬಂಧಗಳ ಅನ್ವಯ 1973ರಲ್ಲಿ ಸ್ಥಾಪಿಸಲ್ಪಟ್ಟಿತು. ಕರ್ನಾಟಕ ಅರಣ್ಯ ಇಲಾಖೆಯ ಮರದ ದಿಮ್ಮಿಗಳ ಉತ್ಪನ್ನ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳುವುದು, ದಿಮ್ಮೆಗಳು, ಸೌದೆ, ಪೋಲ್ಸ್ ಮತ್ತಿತರ ಸಾಮಗ್ರಿಗಳನ್ನು ಡಿಪೋಗಳಿಗೆ ಸಾಗಾಣಿಕೆ ಮಾಡುವ ಪ್ರಮುಖ ಧ್ಯೇಯದೊಂದಿಗೆ ನಿಗಮವು ಸ್ಥಾಪಿಸಲ್ಪಟ್ಟಿರುತ್ತದೆ. ಇದೂ ಅಲ್ಲದೆ ನೀಲಗಿರಿ ಮತ್ತು ಅಕೇಶಿಯಾ ಮರದ ಪಲ್ಪ್‌ವುಡ್‌ನ್ನು ಕಾಗಾ ಕಾರ್ಖಾನೆಗಳಿಗೆ ಸರಬರಾಜು ಮಾಡುವುದೂ ಕೂಡಾ ನಿಮಗದ ಪ್ರಮುಖ ಚಟುವಟಿಕೆಯಾಗಿರುತ್ತದೆ. ಕಾಡಿನ ಪ್ರದೇಶದಲ್ಲಿ ಗುತ್ತಿಗೆದಾರರ ಪಾತ್ರವನ್ನು ತೊಡೆದು ಹಾಕುವ ಜವಾಬ್ದಾರಿಯು ನಿಗಮದ ಮೇಲೆ ಇರುತ್ತದೆ.

ದಿನಾಂಕ: 22.11.2004ರ ಸರ್ಕಾರಿ ಆದೇಶದಂತೆ ಹಾಗೂ ಇತ್ತೀಚಿನ ಸರ್ಕಾರದ ದಿನಾಂಕ: 13.12.2014ರ ನಡವಳಿಯಂತೆ ನಿಗಮವನ್ನು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದೊಂದಿಗೆ ವಿಲೀನಗೊಳಿಸುವ ಪ್ರಕ್ರಿಯೆಯು ಈಗ ಪ್ರಗತಿಯಲ್ಲಿರುತ್ತದೆ.

2. **ಸಿದ್ಧತೆಯ ಆಧಾರ**

ಲೆಕ್ಕಪತ್ರ ಕೋಷ್ಟಕಗಳನ್ನು ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಲ್ಪಟ್ಟ ಲೆಕ್ಕಪತ್ರ ನೀತಿಯನ್ನು (ಭಾರತೀಯ ಜಿಎಎಪಿ) ಅಳವಡಿಸಿರುವುದನ್ನು ಹೊರತುಪಡಿಸಿ, ಚಾರಿತ್ರಿಕ ದರ ಅಳವಡಿಕೆ ಆಧಾರದ ಮೇಲೆ ಸೇರಿಕೆ ಆಧಾರದ ಮೇಲೆ ಲೆಕ್ಕಹಾಕಲಾಗಿರುತ್ತದೆ ಮತ್ತು ಇದು ಕಂಪನಿಗಳ (ಲೆಕ್ಕಪತ್ರ ಮಾನಕಗಳು) ನಿಯಮ, 2006ರ ಅನುಸರಣೆಯಾಗಿದ್ದು, ಕಂಪನಿಗಳ ಕಾಯ್ದೆ, 2013ರ ('ದಿ ಆಕ್ಟ್') ಜೊತೆಗೆ ಕಂಪನಿಗಳ (ಲೆಕ್ಕಪತ್ರಗಳು) ನಿಯಮ, 2014ರ ನಿಯಮ 7ನ್ನು ಓದಿಕೊಂಡಂತೆ ಮತ್ತು ಕಂಪನಿಗಳ ಕಾಯ್ದೆ 1956ರ ಉಪಬಂಧಗಳಂತೆ ಅನ್ವಯಿಸಲು ಸಾಧ್ಯವದಷ್ಟೂ ಅನುಸಾರವಾಗಿರುತ್ತದೆ. ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಸಿದ್ಧಪಡಿಸುವಿಕೆಯಲ್ಲಿ ಅಳವಡಿಸಲಾಗಿರುವ ಲೆಕ್ಕಪತ್ರ ನೀತಿಗಳು ಹಿಂದಿನ ವರ್ಷಗಳಂತೆ ಸ್ಥಿರವಾಗಿರುತ್ತದೆ.

2.1 **ಗಣನೀಯ ಲೆಕ್ಕಪತ್ರ ನೀತಿಗಳ ಸಾರಾಂಶ**

ಅ. ಹಣಕಾಸಿನ ವರ್ಷದಲ್ಲಿ ಒದಗಿ ಬಂದಿರುವ ಮತ್ತು ಗುರುತಿಸಲಾಗಿರುವ ದಿನಾಂಕದಂದು ಸಮಂಜಸವಾಗಿ ನಿಖರತೆಯಿಂದ ಕೂಡಿದೆಯೆಂದು ಗುರುತಿಸಬಹುದಾದ ವೆಚ್ಚಗಳನ್ನು ಮಾತ್ರ ಲೆಕ್ಕಹಾಕಲಾಗಿರುತ್ತದೆ.

ಆ. ಹಣಕಾಸಿನ ವರ್ಷದಲ್ಲಿ ಒದಗಿ ಬಂದಿರುವ ಮತ್ತು ಗುರುತಿಸಲಾಗಿರುವ ದಿನಾಂಕದಂದು ಸಮಂಜಸವಾಗಿ ನಿಖರತೆಯಿಂದ ಕೂಡಿದೆಯೆಂದು ಗುರುತಿಸಬಹುದಾದ ಮತ್ತು ನಗದಾಗಬಹುದಾದ ಲಾಭಗಳನ್ನು, ಸಿಬ್ಬಂಧಿಗಳ ಮುಂಗಡದ ಮೇಲಿನ ಬಡ್ಡಿ ಮತ್ತು ಸೌದೆಯ ಕೊರತೆಯ ಬಾಬ್ತು ವಸೂಲಿಗಳನ್ನು ಹೊರತುಪಡಿಸಿ ಲೆಕ್ಕಹಾಕಲಾಗಿರುತ್ತದೆ.

ಇ. ಜಮೀನು/ಗುತ್ತಿಗೆಯ ಬಾಡಿಗೆಯನ್ನು ನಗದು ಆಧಾರದ ಮೇಲೆ ಲೆಕ್ಕಹಾಲಾಗಿರುತ್ತದೆ.

ಈ. ಸ್ಥಿರ ಆಸ್ತಿಗಳು ಮತ್ತು ಸವಕಳಿ

ಎ) ಸ್ಥಿರ ಆಸ್ತಿಗಳನ್ನು ಅವುಗಳನ್ನು ಸ್ವಾಧೀನಕ್ಕೆ ಪಡೆದ ಮೂಲದರದಲ್ಲಿ ಸೇರಿಬಂದಿರುವ ಸವಕಳಿಯನ್ನು ಕಳೆದು ತಿಳಿಸಲಾಗಿರುತ್ತದೆ.

ಬಿ) ಸ್ಥಿರ ಆಸ್ತಿಗಳ (ಲೀಸ್‌ಹೋಲ್ಡ್ ಮತ್ತು ಫ್ರೀಹೋಲ್ಡ್ ಜಮೀನನ್ನು ಹೊರತುಪಡಿಸಿ) ಮೇಲಿನ ಸವಕಳಿಗೆ ಸ್ಟ್ರೈಟ್‌ಲೈನ್ ಪದ್ಧತಿಯ ಆಧಾರದ ಮೇಲೆ ಆಸ್ತಿಗಳ ಉಪಯೋಗಿ ಜೀವಿತಾವಧಿಯ ಮೇಲೆ ಉಪಬಂಧಗಳನ್ನು ಕಲ್ಪಿಸಲಾಗುತ್ತಿದೆ ಮತ್ತು ಕಂಪನಿಗಳ ಕಾಯ್ದೆ 2013ರ ಅನುಸೂಚಿ II ರ ಅಗತ್ಯತೆಯಂತೆ ಲಾಭ ಮತ್ತು ನಷ್ಟದ ಕೋಷ್ಟಕಕ್ಕೆ ಸೇರಿಸಲಗುತ್ತದೆ. ವರ್ಷಾವಧಿಯಲ್ಲಿ ಮಾಡಲಾಗಿರುವ ಸೇರಿಕೆಗಳಿಗೆ ಸಂಬಂಧಿಸಿದಂತೆ, ಸೇರಿಕೆಯ ದಿನಾಂಕ ಯವುದೇ ಅಗಿದ್ದರೂ ಕೂಡಾ ಸವಕಳಿಯನ್ನು ಪೂರ್ತಿ ವರ್ಷಕ್ಕೆ ಲೆಕ್ಕಹಾಕಲಾಗುತ್ತದೆ. ವರ್ಷಾವಧಿಯಲ್ಲಿ ತೆಗೆದು ಹಾಕಿರುವ ಪ್ರಕರಣಗಳಲ್ಲಿ, ಆಸ್ತಿಗಳನ್ನು ತೆಗೆದು ಹಾಕಿರುವ ದಿನಾಂಕ ಯಾವುದೇ ಆಗಿದ್ದರೂ ಕೂಡಾ ಸವಕಳಿಯನ್ನು ಲೆಕ್ಕಹಾಕಲಾಗುವುದಿಲ್ಲ.

ಸಿ) 1998-99ರ ಲೆಕ್ಕಪತ್ರಗಳ ವರ್ಷದಿಂದ ಜಾರಿಗೆ ಬರುವಂತೆ ಕ್ಯಾಪಿಟಲ್ ಗ್ರಾಂಟ್‌ಗೆ ಸಂಬಂಧಿಸಿದಂತೆ ಕಂಪನಿಯ ನೀತಿಯಂತೆ, ಇದನ್ನು ಮೀಸಲು ಬಂಡವಾಳಕ್ಕೆ ವರ್ಗಾಯಿಸಿ ಮತತು ತದನಂತರ ಸವಕಳಿಗೆ ಅನುಗುಣವಾದ ಭಾಗವನ್ನು ಲಾಭ ಮತ್ತು ನಷ್ಟದ ಖಾತೆಗೆ ಉಳಿದ ಮೊಬಲಗನ್ನು ಮೀಸಲು ಬಂಡವಾಳ ಖಾತೆಯಲ್ಲಿ ತೋರಿಸಲಾಗುತ್ತಿದೆ.

ಉ. ದಾಸ್ತಾನುಗಳು

ಅ) ಕಚ್ಚಾ ವಸ್ತುಗಳು, ದಾಸ್ತಾನುಗಳು ಮತ್ತು ಬಿಡಿಭಾಗಗಳನ್ನು ಮೊದಲು ಒಳಗೆ ಮೊದಲು ಹೊರಗೆ ವೆಚ್ಚದ ಆಧಾರದದಲ್ಲಿ ಮೌಲ್ಯ ಮಾಡಲಾಗುವುದು.

ಆ) ಸಂಸ್ಕರಿಸಲಾಗುತ್ತಿರುವ ದಾಸ್ತಾನನ್ನು ವೆಚ್ಚದ ಆಧಾರದಲ್ಲಿ ಮೌಲ್ಯ ಮಾಡಲಾಗುವುದು.

ಇ) ಪೂರ್ಣಗೊಂಡ ಸರಕನ್ನು ವೆಚ್ಚ ಅಥವಾ ಪ್ರಾಪ್ಯ ಮೌಲ್ಯಗಳ ನಡುವೆ ಕಡಿಮೆ ಇರುವುದಕ್ಕೆ ಮೌಲ್ಯ ಮಾಡಲಾಗುವುದು. (ನಿವ್ವಳ ಎಕ್ಸೈಸ್ ಡ್ಯೂಟಿ ತೆರಿಗೆಯೊಂದಿಗೆ)

ಈ) ಉಪ ಉತ್ಪನ್ನಗಳನ್ನು ನಿವ್ವಳ ಪ್ರಾಪ್ಯ ಮೌಲ್ಯದಲ್ಲಿ ಮೌಲ್ಯ ಮಾಡಲಾಗುವುದು.

ಉ) ಪೂರ್ಣಗೊಂಡ ಸರಕಿನಲ್ಲಿ ಕತ್ತರಿಸಲಾದ ಗಾತ್ರಗಳನ್ನು ವೆಚ್ಚದಲ್ಲಿ ಮೌಲ್ಯ ಮಾಡಲಾಗುವುದು; ಆದರೆ ನಿಧಾನವಾಗಿ ಮಾರಾಟವಾಗುವ/ಮಾರಾಟವಾಗದ ಕತ್ತರಿಸಿದ ಗಾತ್ರಗಳನ್ನು ನಿವ್ವಳ ಪ್ರಾಪ್ಯ ಮೌಲ್ಯದಲ್ಲಿ ಮಾಲ್ಯ ಮಾಡಲಾಗುವುದು.

ಊ) ನೆಡುತೋಪುಗಳಿಗೆ ತಗಲುವ ಎಲ್ಲಾ ವೆಚ್ಚಗಳನ್ನು ಅಯವ್ಯಯ ತಃಖ್ತೆಯಲ್ಲಿ ಚಾಲ್ತಿಯಲ್ಲದ ಆಸ್ತಿಯಡಿಯಲ್ಲಿ ತೋರಿಸಲಾಗಿದೆ.

ಎ) ನೆಡುತೋಪಿನಿಂದ ಪಡೆಯಲಾದ ಇಳುವರಿಯನ್ನು, ನೆಡುತೋಪಿನ ವರ್ಷಕ್ಕೆ ಉಂಟಾದ / ಇಡಲಾದ ಒಟ್ಟು ವೆಚ್ಚವನ್ನು ಮತ್ತು ನೆಡುತೋಪಿನ ಅನುಕ್ರಮದ ವರ್ಷದಲ್ಲಿ ಪಡೆಯಲಾದ / ನಿರೀಕ್ಷಿಸಲಾದ ಇಳುವರಿಯನ್ನು ಆಧರಿಸಿದ ವೆಚ್ಚದಲ್ಲಿ ಮೌಲ್ಯ ಮಾಡಲಾಗುವುದು: ಹೀಗೆ ಮಾಡುವಾಗ ಕರ್ನಾಟಕ ಅರಣ್ಯ ಇಲಾಖೆಗೆ ಪಾವತಿಸಬೇಕಾದ ಭೋಗ್ಯದ ಬಾಡಿಗೆಯನ್ನು ಪರಿಗಣಿಸಿಲ್ಲ. ಆದರೆ, ನೆಡುತೋಪಿನ ಮೌಲ್ಯದ ವಿಷಯದಲ್ಲಿ ಪರಿಪಕ್ವತೆ ಆಗುವವರೆಗೆ, ತಗಲುವ ವೆಚ್ಚಕ್ಕೆ ಮೌಲ್ಯಮಾಪನ ಮಾಡಲಾಗಿದೆ.

ಏ) ಆದಾಯ

ಅ) ಗ್ರಾಹಕರಿಗೆ ವರ್ಗಾಯಿಸಲಾದ ಪ್ರಮುಖ ಅಪಾಯಗಳು ಮತ್ತು ಬಹುಮಾನಗಳ ಮೇಲೆ ಮಾರಾಟವನ್ನು ಲೆಕ್ಕ ಮಾಡಲಾಗಿದೆ.

ಆ) ಅರಣ್ಯ ಇಲಾಖೆಯ ಲಾಗಿಂಗ್ ವಸ್ತುಗಳನ್ನು ಸ್ವೀಕರಿಸಿದ ನಂತರ ಅರಣ್ಯ ಇಲಾಖೆಯ ಲಾಗಿಂಗ್ ರಶೀದಿಗಳ ಆಧಾರದ ಮೇಲೆ ಆದಾಯ ಎಂದು ಲೆಕ್ಕ ಮಾಡಲಾಗಿದೆ. ಬಿಲ್‌ನಲ್ಲಿ ಹೇಳಲಾದ ಜಿಎಸ್‌ಟಿಯನ್ನು ಇಲಾಖೆಗೆ ರವಾನಿಸಲಾಗುತ್ತದೆ.

ಇ) ಎಲ್ಲಾ ಇತರ ಆದಾಯಗಳನ್ನು ಅವು ಖಚಿತವಾಗುವ ಪ್ರಮಾಣಕ್ಕೆ ಸಂಚಯದ ಆಧಾರದಲ್ಲಿ ಲೆಕ್ಕ ಮಾಡಲಾಗಿದೆ. ಖಚಿತ ಪಡಿಸಲಾಗದ ಆದಾಯವನ್ನು ಅವು ಖಚಿತವಾದ ಅಥವಾ ಸ್ವೀಕರಿಸಲಾದ, ಮುಂಚಿತವಾದ ವರ್ಷದಲ್ಲಿ ಲೆಕ್ಕ ಮಾಡಲಾಗಿದೆ.

ಐ. ಉದ್ಯೋಗಿಗಳ ನಿವೃತ್ತಿ ಲಾಭಗಳು :

a) ವರ್ಷಕ್ಕೆ ಭವಿಷ್ಯ ನಿಧಿ, ವಯೋಗುಣ ನಿವೃತ್ತಿ ಮತ್ತು ಇತರ ನಿಧಿಗಳಿಗೆ ಕಂಪನಿಯ ಕೊಡುಗೆಯನ್ನು ಲಾಭ ಮತ್ತು ನಷ್ಟ ಖಾತೆಗೆ ವಿಧಿಸಲಾಗಿದೆ.

b) ಸಮೂಹ ಉಪಧನ ಮೊತ್ತವನ್ನು ಲಾಭ ನಷ್ಟದ ತಃಖ್ತೆಗೆ ಸೇರಿಸಲಾಗಿದೆ. ಉದ್ಯೋಗಿಗಳ ಉಪಧನ ಬಾಧ್ಯತೆಗಳನ್ನು ಎಲ್‌ಐಸಿ ಯೊಂದಿಗೆ ನಗದು ಸಂಗ್ರಹಣೆಯಡಿ ಸಮೂಹ ಉಪಧನ ಯೋಜನೆಯಲ್ಲಿ ಪೂರೈಸಲಾಗಿದೆ.

c) ನಿವೃತ್ತಿಯ ವೇಳೆ ಉದ್ಯೋಗಿಗಳ ರಜೆ ನಗದೀಕರಣದ ಬಾಧ್ಯತೆಯನ್ನು ಆಯವ್ಯಯ ತಃಖ್ತೆಯ ದಿನಾಂಕದಂದು ವಾಸ್ತವ ಮೌಲ್ಯದ ಆಧಾರದಲ್ಲಿ ನಿರ್ಣಯ ಮಾಡಲಾಗಿದ್ದು, ಎಲ್‌ಐಸಿ ಯೊಂದಿಗೆ ಸಮೂಹ ರಜೆ ನಗದೀಕರಣ ಯೋಜನೆಯಡಿ ಒದಗಿಸಲಾಗಿದ್ದು, ಧನ ಒದಗಿಸಲಾಗಿದೆ.

ಒ. ಆದಾಯದ ಮೇಲೆ ತೆರಿಗೆ:

a) ಆದಾಯದ ತೆರಿಗೆ ಕಾಯ್ದೆ 1961ರ ಪ್ರಕಾರ ವರ್ಷಕ್ಕೆ ಆದಾಯವನ್ನು ಅಂದಾಜು ಮಾಡಿ ಅನ್ವಯವಾಗುವ ತೆರಿಗೆಯ ಆಧಾರದ ಮೇಲೆ ಸಧ್ಯದ ತೆರಿಗೆ ಬಾಧ್ಯತೆಗಳನ್ನು ಒದಿಗಸಲಾಗಿದೆ.

b) ಲೆಕ್ಕ ಮಾಪನ–22 ಪ್ರಕಾರ ಮುಂದೂಡಿದ ತೆರಿಗೆ ಬಾಧ್ಯತೆಗಳಿಗೆ ಒದಗಿಸಲಾಗಿದೆ.

c) ಲೆಕ್ಕ ಮಾಪನ–22ರಲ್ಲಿ ಉಲ್ಲೇಖಿಸಲಾಗಿರುವ ಮುಂದೂಡಿದ ತೆರಿಗೆ ಆಸ್ತಿಗಳನ್ನು ವಿವೇಚನೆಯ ವಿಷಯವೆಂದು ಗುರುತಿಸಲಾಗಿಲ್ಲ. ಏಕೆಂದರೆ, ಇರುವ ಪ್ರಾಪ್ಯತೆಗೆ ವಸ್ತುತಃ ನಿಶ್ಚಿತತೆಗಳಿಲ್ಲ.

ಓ. ಪ್ರತಿ ಷೇರಿನ ಗಳಿಕೆ

ಪ್ರತಿ ಷೇರಿಗೆ ಮೂಲಭೂತ ಗಳಿಕೆಗಳನ್ನು ಈಕ್ವಿಟಿ ಪಾಲುದಾರರಿಗೆ ಸರಾಸರಿ ನಿವ್ವಳ ಸಂಖ್ಯೆಗೆ ಕಾರಣವಾಗುವ ನಷ್ಟದ ನಿವ್ವಳ ಲಾಭವನ್ನು ಚಾಲನೆ ಮಾಡುವ ಮೂಲಕ ಲೆಕ್ಕ ಹಾಕಲಾಗುತ್ತದೆ. ಈ ಅವಧಿಯಲ್ಲಿ ಈಕ್ವಿಟಿ ಷೇರುಗಳ ಬಾಕಿ ಉಳಿದಿರುವ ಷೇರುಗಳಿಗೆ ಅನ್ವಯಿಸುತ್ತದೆ.

ಪ್ರತಿ ಷೇರಿಗೆ ದುರ್ಬಲ ಗಳಿಕೆಗಳನ್ನು ಲೆಕ್ಕಾಚಾರ ಮಾಡುವ ಉದ್ದೇಶಕ್ಕಾಗಿ ಷೇರುಗಳ ಷೇರುದಾರರಿಗೆ ಕಾರಣವಾಗುವ ಅವಧಿಯ ನಷ್ಟದ ನಿವ್ವಳ ಲಾಭ ಮತ್ತು ಅವಧಿಗೆ ಬಾಕಿ ಉಳಿದಿರುವ ಷೇರುಗಳ ಸಂಖ್ಯೆಯು ಎಲ್ಲಾ ದುರ್ಬಲ ಸಂಭವನೀಯ ಈಕ್ವಿಟಿ ಷೇರುಗಳ ಪರಿಣಾಮಗಳಿಗೆ ಸರಿ ಹೊಂದಿಸಲಾಗುತ್ತದೆ.

ಔ. ಏರ್ಪಾಡುಗಳು

ಹಿಂದಿನ ಘಟನೆಯ ಪರಿಣಾಮವಾಗಿ ಕಂಪನಿಯು ಅರ್ಜಿದಾರರ ಜವಾಬ್ದಾರಿಯನ್ನು ಹೊಂದಿರುವಾಗ ವ್ಯವಸ್ಥೆಗಳನ್ನು ಗುರುತಿಸಲಾಗಿದೆ. ಇದು ಜವಾಬ್ದಾರಿಗಳನ್ನು ಪರಿಹರಿಸಲು ಅಗತ್ಯವಾದ ಸಂಪನ್ಮೂಲಗಳ ಹೊರ ಹರಿವಿನ ಅಗತ್ಯವಿರುತ್ತದೆ ಮತ್ತು ಆಸ್ತಿಯ ಮೌಲ್ಯದ ಪ್ರಮಾಣವನ್ನು ಅಂದಾಜು ಮಾಡಲು ಸಾಧ್ಯವಿದೆ. ಅಂದಾಜು ಗಣನೀಯ ಪ್ರಮಾಣವನ್ನು ಬಳಸಿಕೊಂಡು ಅಳತೆ ಮಾಡಬಹುದಾದ ಪರಿಚಿತ ಹೊಣೆಗಾರಿಕೆಗಳಿಗೆ ಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗಿದೆ.

ಅಂ. ಸಂಬಂಧಿಸಿದ ಪಕ್ಷದ ಅಭಿವ್ಯಕ್ತಿಗಳು

ಕಂಪನಿ ಮತ್ತು ಸಂಬಂಧಿತ ಪಕ್ಷಗಳ ನಡುವಿನ ವಹಿವಾಟುಗಳನ್ನು ಹಣಕಾಸು ಪಟ್ಟಿಗಳ ಟಿಪ್ಪಣಿಗಳಲ್ಲಿ ಬಹಿರಂಗ ಪಡಿಸಲಾಗುತ್ತದೆ.

ಅಃ. ಮುಂಚಿನ ಅವಧಿ ವಸ್ತುಗಳ ಮತ್ತು ಲೆಕ್ಕಪತ್ರ ನೀತಿಗಳ ಬದಲಾವಣೆ

ಪ್ರಸಕ್ತ ವರ್ಷದ ಹಣಕಾಸಿನ ಹೇಳಿಕೆಗಳ ಮೇಲೆ ಪರಿಣಾಮ ಬೀರುವ ಲೆಕ್ಕಪತ್ರದ ನೀತಿಗಳಲ್ಲಿ ಯಾವುದೇ ಬದಲಾವಣೆಗಳಿಲ್ಲ. ಹಿಂದಿನ ಅವಧಿಯ ವಸ್ತುಗಳನ್ನು ಪ್ರತ್ಯೇಕವಾಗಿ ತೋರಿಸಲಾಗಿದೆ.

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ

CIN - U02005KA1973SGC002314

ನೋಂದಣಿ ಕಛೇರಿ: ವನ ವಿಕಾಸ, 3ನೇ ಮಹಡಿ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560 003

ಆರ್ಥಿಕ ವಿವರಣಾ ಟಿಪ್ಪಣಿಗಳು

3. ಷೇರು ಬಂಡವಾಳ

ವಿವರಗಳು	31.03.2018 ರಲ್ಲಿದ್ದಂತೆ		31.03.2017 ರಲ್ಲಿದ್ದಂತೆ	
	ಸಂಖ್ಯೆ	ರೂ	ಸಂಖ್ಯೆ	ರೂ
ಅಧಿಕೃತ				
ತಲಾ 1000/– ರೂ ಗಳಂತೆ ಈಕ್ವಿಟಿ ಷೇರುಗಳು	30,000	30,000,000	30,000	30,000,000
		30,000,000		30,000,000
ಹೊರಡಿಸಿದ, ಸಂದಾಯವಾದ ಹಾಗೂ ಪಾವತಿಯಾದ ಬಂಡವಾಳ				
ಈಕ್ವಟಿ ಷೇರು ತಲಾ 1000/– ರೂ. ಗಳಂತೆ	26,658	26,658,000	26,658	26,658,000
3.1 ಷೇರು ಬಂಡವಾಳದ ಸಮನ್ವಯ				
ಈಕ್ವಿಟಿ ಷೇರುಗಳು				
ವರದಿಯ ಅವಧಿಯ ಆರಂಭದಲ್ಲಿ	26,658	26,658,000	26,658	26,658,000
ವರದಿಯ ಅವಧಿಯಲ್ಲಿ ನೀಡಿದ್ದು	–		–	
ವರದಿಯ ಅವಧಿಯಲ್ಲಿ ಹಿಂದಕ್ಕೆ ಕೊಂಡಿದ್ದು	–		–	
ವರದಿಯ ಅಂತ್ಯಕ್ಕೆ ಅವಧಿಗೆ	26,658	26,658,000	26,658	26,658,000

3.2 ಈಕ್ವಿಟಿ ಷೇರುಗಳಿಗೆ ಲಗತ್ತಿಸಲಾದ ನಿಯಮಗಳು/ಹಕ್ಕುಗಳು

33. ಕಂಪನಿ ಕಾಯ್ದೆ 2013ರ ಸೆಕ್ಷನ್ 135ರ ಪ್ರಕಾರ 26.12.2016ರಂದು ನಡೆದ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ನಿರ್ದೇಶಕರು ಸಿಎಸ್‌ಆರ್ ಸಮಿತಿಯನ್ನು ರಚಿಸಿದ್ದಾರೆ ಮತ್ತು ಸಮಿತಿಯು ಕಂಪನಿಯ ಕಾಯ್ದೆ 2013 ರ ಅನುಸೂಚಿ ಗಿಖಖ ರಲ್ಲಿ ನಿರ್ಧಿಷ್ಟಪಡಿಸಿದಂತೆ ಚಟುವಟಿಕೆಗಳಿಗೆ ಹಣವನ್ನು ನಿಯೋಜಿಸಲು ನೀತಿಗಳನ್ನು ರೂಪಿಸುವ ಪ್ರಕ್ರಿಯೆಯಲ್ಲಿದೆ. 2017-18 ರ ಅವಧಿಯಲ್ಲಿ ರೂ. 4.80 ಲಕ್ಷಗಳನ್ನು ಸಿಎಸ್‌ಆರ್ ಬಜೆಟ್‌ನಲ್ಲಿ ನೀಡಲಾಗಿತ್ತು, ರೂ. 2,98,602/- ಸಾಮಾಜಿಕ ಕಲ್ಯಾಣಕ್ಕಾಗಿ ಮತ್ತು ಸವಲತ್ತುಗಳ ಅಡಿಯಲ್ಲಿ ಉನ್ನತಿಗಾಗಿ ಈ ಪಾಲಿಸಿಯ ಅಡಿಯಲ್ಲಿ ವ್ಯಯಿಸಲಾಗಿದೆ. ದಿನಾಂಕ: 29.06.2018 ರಂದು ಸಂಬಂಧಪಟ್ಟವರಿಗೆ ಕಳುಹಿಸಲಾಗಿದೆ.

34. ಉಳಿದಿರುವ ಕಾನೂನು ಪ್ರಕರಣಗಳ ಬಾಕಿ ಮತ್ತು ಪ್ರಸ್ತುತ ಸ್ಥಿತಿಗತಿಗಳ ಮಾಹಿತಿ ಅಡಕದಲ್ಲಿ ನೀಡಿದೆ.

35. ಅಂಕಿಗಳನ್ನು ಹತ್ತಿರದ ರೂಪಾಯಿಗಳಿಗೆ ಸಮೀಪಿಸಲಾಗಿದೆ.

ಆಡಳಿತ ಮಂಡಳಿ ಹಾಗೂ ಪರವಾಗಿ

ಲಗತ್ತಿಸಲಾದ ಸಮ ದಿನಂಕದ ನಮ್ಮ ವರದಿ ಅನ್ವಯ ಓದುವುದು
ಪಿಎನ್‌ಆರ್ ಅಂಡ್ ಕಂ., ಪರವಾಗಿ
ಸನ್ನದು ಲೆಕ್ಕಿಗರು
ಸಂಸ್ಥೆಯ ನೋಂದಣಿ ಸಂಖ್ಯೆ: 002495S
ಸಹಿ/-
(ಗುರುಪ್ರಸಾದ್ ಭಾದ್ಯ)
ಪಾಲುದಾರರು
ಸದಸ್ಯತ್ವದ ಸಂಖ್ಯೆ : 234052

ಸಹಿ/-
(ಸಂಜಯ್ ಮೋಹನ್)
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್:03196823

ಸಹಿ/-
(ಆರ್. ಶಂಕರ್)
ಅಧ್ಯಕ್ಷರು
ಡಿಐಎನ್:7721554

ದಿನಾಂಕ:06.09.2018
ಸ್ಥಳ : ಬೆಂಗಳೂರು

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ

ನೋಂದಣಿ ಕಛೇರಿ: ವನ ವಿಕಾಸ, 3ನೇ ಮಹಡಿ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560 003

ಅನುಬಂಧ ಕ್ರ. ಸಂ. 34ಕ್ಕೆ ಸಂಬಂಧಿಸಿದಂತೆ ಟಿಪ್ಪಣಿ ಸಂಖ್ಯೆ.31

ಬಾಕಿ ಮತ್ತು ಹಾಲಿ ಇರುವ ಕಾನೂನು ಪ್ರಕರಣಗಳ ಸಧ್ಯದ ಸ್ಥಿತಿ ಗತಿ ಪಟ್ಟಿ

ಕ್ರ. ಸಂ.	ಘಟಕದ ಹೆಸರು	ಅರ್ಜಿದಾರರ ಹೆಸರು	ಮೊಕದ್ದಮೆಯ ವಿವರಣೆ	ಮೊಕದ್ದಮೆಯ ಕಾಲ	ಮೊಕದ್ದಮೆಯ ಸಂಖ್ಯೆ.	ನ್ಯಾಯಾಲಯದ ಬಾಕಿ	ವಿವರಣೆ
1	ಪ್ರಾದೇಶಿಕ ವ್ಯವಸ್ಥಾಪಕರು, ಶಿವಮೊಗ್ಗ	ಶ್ರೀ. ನಾರಾಯಣಪ್ಪ	ಶ್ರೀ ನಾರಾಯಣಪ್ಪ ಮತ್ತು ಇತರರ ಮನವಿಯ ಆದ್ಯತೆಯ ಮೇರೆಗೆ ಕರಾಅಕ್ಕೈನಿನಿ ಯ ಜಾಗದಲ್ಲಿ ಕಾನೂನು ಬಾಹಿರವಾಗಿ ನಿರ್ಮಿಸಿದ ಬೇಲಿಯ ಕುರಿತು	2013	No.113/2013	ಹೆಚ್ಚುವರಿ ಹಿರಿಯ ನಗರ ನಾಗರೀಕ ನ್ಯಾಯಾಲಯ	ಮೊಕದ್ದಮೆ ಪ್ರಗತಿಯಲ್ಲಿದೆ
2	ವ್ಯವಸ್ಥಾಪಕ ನಿರ್ದೇಶಕರು, ಕರಾಅಕ್ಕೈನಿನಿ, ಬೆಂಗಳೂರು.	ಶ್ರೀ. ಎಸ್.ಎಸ್. ನಾಡಿಗರ್	ರೂ. 2,84,198.00 ಗಳ ಬಾಕಿ ಸಂಬಳದ ಹೆಚ್ಚುವರಿ ಪಾವತಿ ಮರುಪಾವತಿಗೆ ಸಂಬಂಧಿಸಿದಂತೆ	2013	WP.No/47037 / 2013.	ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯ	ಮೊಕದ್ದಮೆ ಪ್ರಗತಿಯಲ್ಲಿದೆ
3	ವ್ಯವಸ್ಥಾಪಕ ನಿರ್ದೇಶಕರು, ಕರಾಅಕ್ಕೈನಿನಿ, ಬೆಂಗಳೂರು.	ವಾಸುದೇವ ರೆಡ್ಡಿ ಮತ್ತು ಇತರರು v/s ಕರಾಅಕ್ಕೈನಿನಿ	ಪಿಂಚಣಿ ಸೌಲಭ್ಯಗಳಿಗೆ ಸಂಬಂಧಿಸಿದಂತೆ.	2015	WP No: 53400-53407/ 2015	ಕರ್ನಾಟಕದ ಉಚ್ಚ ನ್ಯಾಯಾಲಯ	ಮೊಕದ್ದಮೆ ಪ್ರಗತಿಯಲ್ಲಿದೆ
4.	ಪ್ರಾದೇಶಿಕ ವ್ಯವಸ್ಥಾಪಕರು, ಶಿರಸಿ	ಮೆ॥ ಮಹೇಶ್ವರ ಟ್ರೇಡರ್ಸ್	ಹಸಿರು ಹುಲ್ಲು ಅಭಿವೃದ್ಧಿ ಯೋಜನೆಯ ಒಪ್ಪಂದದ ಉಲ್ಲಂಘನೆ (GGDP)	2011	WP No: 16569/2002 dt: 21.06.2011	ಕರ್ನಾಟಕದ ಉಚ್ಚ ನ್ಯಾಯಾಲಯ	ತಡೆ ನೀಡಲಾಗಿದೆ. vide S.O. No. 16569/02 dt: 21.06.2011
5	ಪ್ರಾದೇಶಿಕ ವ್ಯವಸ್ಥಾಪಕರು ಧಾರವಾಡ	ಮಂಜುನಾಥ ಇ ಭದ್ರಾಪುರ	ಸೇವೆಗಳ ಸಕ್ರಮೀಕರಣ ಗೊಳಿಸುವಿಕೆಗೆ ಸಂಬಂಧಿಸಿದಂತೆ	2017	WP No: 110267/2017 (L-RES) dt: 05.04.2018	ಧಾರವಾಡದ ಉಚ್ಚ ನ್ಯಾಯಾಲಯ	ಮೊಕದ್ದಮೆ ಪ್ರಗತಿಯಲ್ಲಿದೆ

KSFIC
Wood is good

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ

(ಕರ್ನಾಟಕ ರಾಜ್ಯ ಸರ್ಕಾರದ ಅಧೀನ ಸಂಸ್ಥೆ)

ಸಂಚಿತ ಆರ್ಥಿಕ ವಿವರಣಾ ಪಟ್ಟಿಗಳು 2017-18

"ವನವಿಕಾಸ", 3ನೇ ಮಹಡಿ, 18ನೇ ತಿರುವು, ಮಲ್ಲೇಶ್ವರಂ,
ಬೆಂಗಳೂರು-560 003

31 ಮಾರ್ಚ್ 2018 ಅಂತ್ಯಗೊಳ್ಳುವ ವರ್ಷಕ್ಕೆ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ, ಬೆಂಗಳೂರು ಇವರ ಸಂಚಿತ ಆರ್ಥಿಕ ವಿವರಣ ಪಟ್ಟಿಗಳ ಬಗ್ಗೆ ಕಂಪನಿಗಳ ಕಾಯಿದೆ, 2013ರ ಪರಿಚ್ಛೇದ 143(6)(ಬಿ) ಅಡಿಯಲ್ಲಿ ವಿಭಾಗ 129(4)ನ್ನು ಓದಿಕೊಂಡು ಮಾಡಿರುವ ಭಾರತದ ಕಂಪ್ಟ್ರೋಲರ್ ಮತ್ತು ಅಡಿಟರ್ ಜನರಲ್ ಅವರ ವ್ಯಾಖ್ಯಾನಗಳು.

ಕಂಪನಿಯ ಕಾಯಿದೆ, 2013ರ ಅಡಿಯಲ್ಲಿ ಸೂಚಿಸಲಾದ ಆರ್ಥಿಕ ವರದಿಯ ಚೌಕಟ್ಟಿನೊಂದಿಗೆ ಅನ್ವಯವಾಗುವಂತೆ, ದಿನಾಂಕ 31 ಮಾರ್ಚ್ 2018ರ ಅಂತ್ಯಕ್ಕೆ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ, ಬೆಂಗಳೂರು ಇವರ ಸಂಚಿತ ಆರ್ಥಿಕ ವಿವರಣಾ ಪಟ್ಟಿಗಳ ಹೇಳಿಕೆಗಳನ್ನು ಸಿದ್ದಪಡಿಸುವುದು ಕಂಪನಿಯ ಆಡಳಿತದ ಜವಾಬ್ದಾರಿಯಾಗಿರುತ್ತದೆ, ಕಾಯಿದೆ 2013ರ ಪರಿಚ್ಛೇದ 139 (5)ರ ಅಡಿಯಲ್ಲಿ ವಿಭಾಗ 129(4)ನ್ನು ಓದಿಕೊಂಡು ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಅವರಿಂದ ನೇಮಿಸಲ್ಪಟ್ಟ ಶಾಸನಬದ್ಧ ಲೆಕ್ಕಪರಿಶೋಧಕರು, ಭಾರತದ ಸನ್ನದು ಲೆಕ್ಕಿಗರ (ಚಾರ್ಟರ್ಡ್ ಅಕೌಂಟೆಂಟ್) ಸಂಸ್ಥೆ ನಿಗದಿಪಡಿಸಿರುವ ಲೆಕ್ಕಪರಿಶೋಧನೆ ಹಾಗೂ ಭರವಸೆ ಮಾನಕಗಳಿಗೆ ಅನುಗುಣವಾಗಿ, ಸ್ವತಂತ್ರ ಲೆಕ್ಕಪರಿಶೋಧನೆಯ ಆಧಾರದ ಮೇಲೆ, ಕಂಪನಿಗಳ ಕಾಯಿದೆ, ಪರಿಚ್ಛೇದ 143ರ ಅಡಿಯಲ್ಲಿ, ಈ ಆರ್ಥಿಕ ಹೇಳಿಕೆಗಳ ಬಗ್ಗೆ ಕಂಪನಿಗಳ ಕಾಯ್ದೆ ಪರಿಚ್ಛೇದ 143 (10)ರ ಅಡಿಯಲ್ಲಿ ವಿಭಾಗ 129(4)ನ್ನು ಓದಿಕೊಂಡು ಅಭಿಪ್ರಾಯ ವ್ಯಕ್ತಪಡಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಈ ಶಾಸನಬದ್ಧ ಪರಿಶೋಧಕರು ತಮ್ಮ ಲೆಕ್ಕಪರಿಶೋಧನೆ ವರದಿ 7ನೇ ಡಿಸೆಂಬರ್ 2018ರ ಮೂಲಕ ಈ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ ಎಂದು ಹೇಳಲಾಗಿದೆ.

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ, ಬೆಂಗಳೂರು ಇದರ ಆರ್ಥಿಕ ವರ್ಷ 31 ಮಾರ್ಚ್ 2018ಕ್ಕೆ ಕೊನೆಗೊಳ್ಳುವ ಸಮಯಕ್ಕೆ ನಾನು, ಭಾರತದ ಕಂಪ್ಟ್ರೋಲರ್ ಮತ್ತು ಅಡಿಟರ್ ಜನರಲ್ ಪರವಾಗಿ ಕಂಪನಿಯ ಸಂಚಿತ ಆರ್ಥಿಕ ವಿವರಣಾ ಪಟ್ಟಿಯನ್ನು ಕಂಪನಿ ಕಾಯ್ದೆ ಪರಿಚ್ಛೇದ 143(6)(ಎ) ವಿಭಾಗ 129(4)ನ್ನು ಓದಿಕೊಂಡು ವರದಿಸಿದಂತೆ ಮತ್ತೊಮ್ಮೆ ಪರಿಷ್ಕರಿಸುವ ಅಗತ್ಯವಿರುವುದಿಲ್ಲವೆಂದು ತೀರ್ಮಾನಿಸಿರುತ್ತೇನೆ.

ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಪರವಾಗಿ
ಸಹಿ/-
(ಬಿಜಿತ್ ಕುಮಾರ್ ಮುಖರ್ಜಿ)
ಅಕೌಂಟೆಂಟ್ ಜನರಲ್
(ವಾಣಿಜ್ಯ ಮತ್ತು ಆದಾಯ ವಿಭಾಗ, ಲೆಕ್ಕಪರಿಶೋಧನೆ)

ಬೆಂಗಳೂರು.
ದಿನಾಂಕ : 18.12.2018

ಗೆ,

ಷೇರುದಾರರು

ಮೆ॥ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ

ಸಿಐಎನ್ ಸಂಖ್ಯೆ: U02005KA1973SG002314

"ವನವಿಕಾಸ', 3ನೇ ಮಹಡಿ, 18ನೇ ತಿರುವು, ಮಲ್ಲೇಶ್ವರಂ, ಬೆಂಗಳೂರು- 560 003.

ಸಂಘಟಿತ ಆರ್ಥಿಕ ವಿವರಣಾ ಪಟ್ಟಿಗಳ ಮೇಲಿನ ವರದಿ

1. ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತದ ಮತ್ತು ದಿ ಮೈಸೂರು ಮ್ಯಾಚ್ ಕಂಪನಿ ಲಿಮಿಟೆಡ್ ಎಂದು ಕರೆಯಲಾಗುವ ಅದರ ಅಂಗಸಂಸ್ಥೆಯ (ಒಟ್ಟಾಗಿ ಇದನ್ನು 'ನಿರ್ವಾಹಕ ಕಂಪನಿ' ಎಂದು ಉಲ್ಲೇಖಿಸಲಾಗಿದೆ) ಸಂಘಟಿತ ವಿವರಣ ಪಟ್ಟಿಗಳನ್ನು ಪತ್ರವನ್ನು ನಾವು ಪರಿಶೋಧಿಸಿದ್ದೇವೆ ಮತ್ತು ಇದರಲ್ಲಿ 31 ಮಾರ್ಚ್ 2018ರ ಸಂಘಟಿತ, ಲಾಭ ಮತ್ತು ನಷ್ಟಗಳ ಸಂಘಟಿತ ಪತ್ರ ಮತ್ತು ಆ ವರ್ಷದ ಕೊನೆಯವರೆಗಿನ ಸಂಘಟಿತ ಹಣ ಹರಿವು ಪತ್ರಗಳು ಮತ್ತು ಪ್ರಮುಖ ಲೆಕ್ಕದ ನೀತಿಗಳ ಸಾರಾಂಶ ಮತ್ತು ಇತರ ವಿವರಣೆಯ ಅಂಶಗಳನ್ನು ಒಳಗೊಂಡಿದೆ. ("ಈಗ ಇದನ್ನು ಆರ್ಥಿಕ ವಿವರಣಾ ಪಟ್ಟಿಗಳೆಂದು ಉಲ್ಲೇಖಿಸಲಾಗುವುದು").

ಆರ್ಥಿಕ ವಿವರಣ ಪಟ್ಟಿಗಳಿಗೆ ಆಡಳಿತ ವರ್ಗದ ಜವಾಬ್ದಾರಿ

2. ಉಪ ನಿಯಮ (5) ಸೆಕ್ಷನ್ 134ರ ಕಂಪನಿ ಕಾಯ್ದೆ 2013ರ ಅಡಿಯಲ್ಲಿ ಹಿಡುವಳಿ ಸಂಸ್ಥೆಯು ಮಂಡಳಿಯ ನಿರ್ದೇಶಕರು ಸಂಘಟಿತ ಆರ್ಥಿಕ ವಿವರಣ ಪಟ್ಟಿಗಳನ್ನು ತಯಾರಿಸಿದ ಜವಾಬ್ದಾರಿಯಾಗಿರುತ್ತದೆ ಹಾಗೂ ಇವುಗಳು ಸಂಘಟಿತ ಆರ್ಥಿಕ ಪಟ್ಟಿಗಳ ಸತ್ಯ ಮತ್ತು ನೈಜತೆಯುಳ್ಳ ಸಂಘಟಿತ ಆರ್ಥಿಕ ವಿವರಣ ಪಟ್ಟಿಗಳಾಗಿವೆ. ಕಾಯ್ದೆಯ ಪರಿಚ್ಛೇದ 133ರಲ್ಲಿ ವ್ಯಾಖ್ಯಾನಿಸಲಾದ ಲೆಕ್ಕದ ಮಾನದಂಡಗಳನ್ನು, ಸಂಸ್ಥೆಗಳ (ಲೆಕ್ಕ) ನಿಯಮಗಳು, 2014ರ ನಿಯಮ 7ರೊಂದಿಗೆ ಓದಿದಂತೆ, ಭಾರತದಲ್ಲಿ ಸಾಮಾನ್ಯವಾಗಿ ಅನುಸರಿಸಲಾಗುವ ಲೆಕ್ಕದ ನೀತಿಗಳ ಪ್ರಕಾರ, ಸಮೂಹದ ಸಂಘಟಿತ ಆರ್ಥಿಕ ಸ್ಥಿತಿಯ, ಸಂಘಟಿತ ಆರ್ಥಿಕ ಸಾಧನೆ ಮತ್ತು ಸಂಘಟಿತ ಹಣ ಹರಿವಿನ ಸಂಘಟಿತ ನ್ಯಾಯಯುತ ದೃಶ್ಯಗಳ ತಯಾರಿಕೆಗೆ ಹಿಡುವಳಿ ಸಂಸ್ಥೆಯ ನಿರ್ದೇಶಕರ ಮಂಡಳಿಯು ಜವಾಬ್ದಾರರಾಗಿದೆ. ಈ ಸಮೂಹದಲ್ಲಿರುವ ಅನುಕ್ರಮದ ನಿರ್ದೇಶಕರ ಮಂಡಳಿಯು ಇವಕ್ಕೆ ಜವಾಬ್ದಾರರಾಗಿದೆ. ಸಮೂಹದ ಆಸ್ತಿಯನ್ನು ರಕ್ಷಿಸುವ ಸಲುವಾಗಿ ಮತ್ತು ಮೋಸ ಮತ್ತಿತ್ತರ ಅನ್ಯಾಯಗಳನ್ನು ತಡೆಯಲು ಮತ್ತು ಪತ್ತೆ ಮಾಡಲು ಕಾಯ್ದೆಯ ನಿಯಮಗಳ ಪ್ರಕಾರ ಲೆಕ್ಕಪತ್ರಗಳ ನಿರ್ವಹಣೆ, ಸೂಕ್ತವಾದ ಲೆಕ್ಕದ ನೀತಿಗಳನ್ನು ಆರಿಸಿ, ಅನ್ವಯಿಸುವುದು, ತಾರ್ಕಿಕವಾದ ಮತ್ತು ವಿವೇಕಯುತ ನಿರ್ಧಾರಗಳನ್ನು ಮತ್ತು ಅಂದಾಜುಗಳನ್ನು ಮಾಡುವುದು, ಮೋಸದಿಂದಾಗಿ ಅಥವಾ ತಪ್ಪಿನಿಂದಾಗಿ, ವಾಸ್ತವಿಕ ಅಸತ್ಯದಿಂದ ಮುಕ್ತವಾದ ನಿಜವಾದ ಮತ್ತು ನ್ಯಾಯವಾದ ದೃಶ್ಯವನ್ನು ತಯಾರಿಸಲು ಅಗತ್ಯವಾದ ಲೆಕ್ಕಪತ್ರದ ನಿಖರತೆ ಮತ್ತು ಪೂರ್ಣತೆಯನ್ನು ಕಾಪಾಡಲು ಈವರೆಗೂ ಪರಿಣಾಮಕಾರಿಯಾಗಿ ಕಾರ್ಯ ರೂಪದಲ್ಲಿದ್ದ ಪರ್ಯಾಪ್ತವಾದ ಆಂತರಿಕ ವಿತ್ತೀಯ ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆ, ಮತ್ತು ಇವುಗಳನ್ನು ಹಿಡುವಳಿ ಸಂಸ್ಥೆಯ ನಿರ್ದೇಶಕರು ಸಂಘಟಿತ ವಿತ್ತೀಯ ಪತ್ರಗಳನ್ನು ತಯಾರಿಸಲು ಬಳಸಿದ್ದಾರೆ.

ಲೆಕ್ಕಪರಿಶೋಧಕರ ಜವಾಬ್ದಾರಿ

3. ನಮ್ಮ ಪರಿಶೋಧನೆಯನ್ನು ಆಧರಿಸಿ, ಈ ಸಂಘಟಿತ ಆರ್ಥಿಕ ವಿವರಣ ಪಟ್ಟಿಗಳ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿದೆ.

   ಪರಿಶೋಧನೆಯನ್ನು ನಡೆಸಿದಾಗ, ನಾವು ಕಾಯ್ದೆಯ ನಿಯಮಗಳನ್ನು ಲೆಕ್ಕದ ಮತ್ತು ಪರಿಶೋಧನೆಯ ಮಾನದಂಡಗಳನ್ನು ಮತ್ತು ಕಾಯ್ದೆಯ ನೀತಿಗಳು ಮತ್ತು ಅದರಡಿ ಮಾಡಲಾದ ನಿಯಮಗಳಡಿಯಲ್ಲಿ ಪರಿಶೋಧನೆ ವರದಿಯಲ್ಲಿ ಒಳಗೊಂಡಿರಬೇಕಾದ ವಿಷಯಗಳನ್ನು ಪರಿಗಣಿಸಿದ್ದೇವೆ. ಕಾಯ್ದೆ ಮತ್ತು ನಿಬಂಧನೆಗಳ ಅಡಿಯಲ್ಲಿ ಆಡಿಟ್ ವರದಿಯಲ್ಲಿ ಸೇರ್ಪಡೆಗೊಳ್ಳಬೇಕಾದ ಲೆಕ್ಕಪತ್ರ ಮತ್ತು ಆಡಿಟಿಂಗ್ ಮಾನದಂಡಗಳು ಮತ್ತು ವಿಷಯಗಳ ನಿಬಂಧನೆಗಳನ್ನು ನಾವು ಪರಿಗಣಿಸಿದ್ದೇವೆ.

ಕಾಯ್ದೆ ಪರಿಚ್ಛೇದ 143 (10)ರ ಅಡಿಯಲ್ಲಿ ವ್ಯಾಖ್ಯಾನಿಸಲಾದ ಪರಿಶೋಧನೆಯ ಮಾನದಂಡಗಳ ಪ್ರಕಾರ ಪರಿಶೋಧನೆಯನ್ನು ನಾವು ಮಾಡಿದ್ದೇವೆ. ಈ ಮಾನದಂಡಗಳ ಅಗತ್ಯದಂತೆ ನಾವು ಅದರ ನೈತಿಕ ಅಗತ್ಯಗಳನ್ನು ಅನುಸರಿಸಬೇಕು ಮತ್ತು ಈ ಸಂಘಟಿತ ಆರ್ಥಿಕ ವಿವರಣಾ ಪಟ್ಟಿಗಳು ವಾಸ್ತವಿಕ ತಪ್ಪುಗಳಿಂದ ಮುಕ್ತವಾಗಿದೆಯೆಂದು ಖಾತ್ರಿಪಡಿಸಿಕೊಳ್ಳಲು ಪರಿಶೋಧನೆಯನ್ನು ಯೋಜಿಸಿ, ನಡೆಸಬೇಕಿದೆ.

ಸಂಘಟಿತ ಆರ್ಥಿಕ ವಿವರಣ ಪಟ್ಟಿಗಳಲ್ಲಿರುವ ಮೊತ್ತಗಳು ಮತ್ತು ಪ್ರಕಟಣೆಗಳ ಬಗ್ಗೆ ಪರಿಶೋಧಕ ಸಾಕ್ಷಿಯನ್ನು ಪಡೆಯಲು ಕೆಲವು ಪ್ರಕ್ರಿಯೆಗಳನ್ನು ಪರಿಶೋಧನೆಯು ಒಳಗೊಂಡಿರುತ್ತದೆ. ಆರಿಸಲಾದ ಪ್ರಕ್ರಿಯೆಗಳು ಪರಿಶೋಧಕರ ನಿರ್ಧಾರವನ್ನು ಅವಲಂಬಿಸುತ್ತದೆ, ಮತ್ತು ಮೋಸದಿಂದಾಗಿ ಅಥವಾ ತಪ್ಪಿನಿಂದಾಗಿ, ಆರ್ಥಿಕ ವಿವರಣ ಪಟ್ಟಿಯಲ್ಲಿ ವಾಸ್ತವಿಕ ಅಸತ್ಯಗಳ ಅಪಾಯದ ನಿರ್ಣಯವನ್ನು ಒಳಗೊಂಡಿರುತ್ತದೆ. ಆ ಅಪಾಯದ ನಿರ್ಧಾರಣೆಯನ್ನು ಮಾಡುವಲ್ಲಿ, ಸಂದರ್ಭಗಳಿಗೆ ಸೂಕ್ತವಾದ ಪರಿಶೋಧಕ ಪ್ರಕ್ರಿಯೆಗಳನ್ನು ನಿಜ ಮತ್ತು ನ್ಯಾಯಯುತ ದೃಶ್ಯ ನೀಡುವ ಹಿಡುವಳಿ ಸಂಸ್ಥೆಯ ಆರ್ಥಿಕ ವಿವರಣಾ ಪಟ್ಟಿಗಳನ್ನು ತಯಾರಿಸಲು ಸಮಂಜಸವಾದ ಆಂತರಿಕ ವಿತ್ತೀಯ ನಿಯಂತ್ರಗಳನ್ನು ಪರಿಗಣಿಸುತ್ತಾರೆ. ಆದರೆ ಹಿಡುವಳಿ ಸಂಸ್ಥೆಯು ವಿತ್ತ ವರದಿಗಳ ಮೇಲೆ ಪರ್ಯಾಪ್ತವಾದ ಆಂತರಿಕ ವಿತ್ತೀಯ ನಿಯಂತ್ರಗಳನ್ನು ಹೊಂದಿದೆಯೇ ಮತ್ತು ಅಂಥ ನಿಯಂತ್ರಣಗಳ ಪರಿಣಾಮಕಾರಿತ್ವದ ಮೇಲೆ ಅಭಿಪ್ರಯ ವ್ಯಕ್ತಪಡಿಸುವ ಉದ್ದೇಶಕ್ಕಾಗಿ ಆಗಿರುವುದಿಲ್ಲ. ಲೆಕ್ಕ ಪರಿಶೋಧನೆಯು, ಬಳಸಲಾದ ಲೆಕ್ಕದ ನೀತಿಗಳ ಸೂಕ್ತತೆಯ ಮೌಲ್ಯಮಾಪನ ಮತ್ತು ಸಂಸ್ಥೆಯ ನಿರ್ದೇಶಕರ ಲೆಕ್ಕದ ಅಂದಾಜುಗಳ ನ್ಯಾಯಸಮ್ಮತತೆ, ಜೊತೆಗೆ ವಿತ್ತ ಪತ್ರಗಳ ಒಟ್ಟು ಪ್ರಧಾನದ ಮೌಲ್ಯಮಾಪನವನ್ನೂ ಒಳಗೊಂಡಿರುತ್ತದೆ.

ನಾವು ಪಡೆದಂತಹ ಪರಿಶೋಧನೆಯ ಸಾಕ್ಷಿ ಮತ್ತು ಉಲ್ಲೇಖಿಸಲಾದ ಇತರ ಪರಿಶೋಧಕರು ತಮ್ಮ ವರದಿಗಳಿಗೆ ಪಡೆದುಕೊಂಡ ಪರಿಶೋಧನಾ ಸಾಕ್ಷಿಯು ಪರ್ಯಾಪ್ತವಾಗಿದೆ ಮತ್ತು ಸ್ವತಂತ್ರ ವಿತ್ತ ಪತ್ರಗಳ ಮೇಲೆ ನಮ್ಮ ಅರ್ಹ ಪರಿಶೋಧನಾ ಅಭಿಪ್ರಾಯಕ್ಕೆ ಆಧಾರವಾಗಿದೆ ಎಂದು ನಾವು ನಂಬುತ್ತೇವೆ.

ಸಂಘಟಿತ ಆರ್ಥಿಕ ವಿವರಣಾ ಪಟ್ಟಿಗಳ ಪರಿಶೋಧನೆ.

ದಿ ಮೈಸೂರು ಮ್ಯಾಚ್ ಕಂಪನಿ ನಿಯಮಿತವು ('ಅಂಗಸಂಸ್ಥೆ'ಯಾಗಿರುತ್ತದೆ) 17ನೇ ಮೇ 1940ರಲ್ಲಿ ಸ್ಥಾಪಿಸಲ್ಪಟ್ಟಿದ್ದು, ಕಂಪನಿಗಳ ಕಾಯ್ದೆ, 1956ರ ಉಪಬಂಧಗಳನ್ವಯ ನೋಂದಾಯಿಸಲ್ಪಟ್ಟಿದ್ದು, ಅದರ ನೋಂದಾಯಿತ ಕಛೇರಿಯು ಭಾರತದಲ್ಲಿನ ಕರ್ನಾಟಕದ ಶಿವಮೊಗ್ಗದಲ್ಲಿ ಇರುತ್ತದೆ. ಈ ಅಂಗ ಸಂಸ್ಥೆಯು ಬಹಳ ಕಾಲದಿಂದ ತನ್ನ ವ್ಯವಹಾರವನ್ನು ಸ್ಥಗಿತಗೊಳಿಸಿರುತ್ತದೆ. 2002ರ ಅವಧಿಯಲ್ಲಿ ಕರ್ನಾಟಕ ಸರ್ಕಾರವು ಈ ಅಂಗ ಸಂಸ್ಥೆಯ ಸ್ವಯಂಪ್ರೇರಿತ ಮುಕ್ತಾಗೊಳಿಸುವಿಕೆಗೆ ಆದೇಶ ಹೊರಡಿಸಿದ್ದು, ದಿನಾಂಕ 30ನೇ ಸೆಪ್ಟಂಬರ್ 2004ರಲ್ಲಿ ನಡೆದ ನಿಗಮದ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಷೇರುದಾರರ ವಿಷೇಶ ಠರಾವನ್ನು ಹೊರಡಿಸಿ, ಕಂಪನಿಯ ಜಮೀನನ್ನು ಹರಾಜು ಮಾರಾಟದ ಮೂಲಕ ಮಾರಾಟ ಮಾಡುವ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳಲು ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಿತು. ಈ ಸ್ವಯಂಪ್ರೇರಿತ ಮುಕ್ತಾಯ ವಿಚಾರವನ್ನು ಚುರುಕುಗೊಳಿಸುವಂತೆ 2005ರಲ್ಲಿ ಕರ್ನಾಟಕ ಸರ್ಕಾರವು ಕಂಪನಿಗೆ ಸೂಚಿಸಿ, ತಕರಾರುಗಳು ಮತ್ತು ಕಾನೂನು ತೊಡಕುಗಳನ್ನು ತಪ್ಪಿಸುವ ಸಲುವಾಗಿ ಕಂಪನಿಯ ಆಸ್ತಿಗಳನ್ನು ಲಿಕ್ವಿಡೇಟರುಗಳ ಮೂಲಕ ಮಾರಾಟ ಮಾಡಲು ಸಲಹೆ ನೀಡಿತು.

ಕಾರ್ಪೊರೇಟ್ ಮಾಹಿತಿಗಳು, ಏಕೀಕೃತ ಹಣಕಾಸಿನ ಕೋಷ್ಟಕಗಳಿಗೆ ಟಿಪ್ಪಣಿಯಂತೆ, ಅಂಗ ಸಂಸ್ಥೆಯು ತನ್ನ ಎಲ್ಲಾ ಸ್ಥಾವರ ಮತ್ತು ಯೋಂತ್ರೋಪಕರಣಗಳ ಬಿಚ್ಚಬಹುದಾದ ಬಿಡಿ ಭಾಗಗಳು, ಪೀಠೋಪಕರಣಗಳು, ಸಾಮಗ್ರಿಗಳು ಮತ್ತು ಜೋಡಣೆಗಳನ್ನು ಬಿಚ್ಚಿ ಮಾರಾಟ ಮಾಡಿದ್ದು, ಅದರಲ್ಲಿ ಯಾವುದೇ ಕಚ್ಚಾ ಸಾಮಗ್ರಿ ಅಥವಾ ಉತ್ಪನ್ನದ ಯಾವುದೇ ದಾಸ್ತಾನೂ ಇರುವುದಿಲ್ಲ. ನಂತರದಲ್ಲಿ ಈ ಅಂಗಸಂಸ್ಥೆಯು ತನ್ನ ಎಲ್ಲ ನಿರ್ವಹಣಾ ಚಟುವಟಿಕೆಗಳನ್ನೂ ಸ್ಥಗಿತ ಗೊಳಿಸಿದ್ದು, ಉತ್ಪಾದನಾ ಚಟುವಟಿಗಳೂ ಇರುವುದಿಲ್ಲ ಮತ್ತು ಅದರ ಕೆಳಹಂತದ ಎಲ್ಲಾ ಚಟುವಟಿಕೆಗಳೂ ನಿಂತು ಹೋಗಿರುತ್ತದೆ.

ಕಂಪನಿಯು ದಿವಾಳಿಯಾಗುವ ಪ್ರಕ್ರಿಯೆಯನ್ನು ಕಾರ್ಯಶೀಲಗೊಳಿಸುವ ಸಲುವಾಗಿ ಕೇಂದ್ರ ಸರ್ಕಾರವು ಇನ್‌ಸಾಲ್ವೆನ್ಸಿ & ಬ್ಯಾಂಕ್‌ರಪ್ಟ್ಸಿ ಕೋಡ್, 2016ನ್ನು (ಕೋಡ್) ಪ್ರಚುರಪಡಿಸಿ, 15ನೇ ಡಿಸೆಂಬರ್ 2016ರಿಂದ ಜಾರಿಗೆ ಬರುವಂತೆ, ಕಾರ್ಪೊರೇಟ್ ವ್ಯಕ್ತಿಗಳ ಸಮಾಪನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಮತ್ತು ಸ್ವಯಂಪ್ರೇರಿತ ಸಮಾಪನೆಗೆ ಸಂಬಂಧಿಸದಂತೆ 1ನೇ ಏಪ್ರಿಲ್ 2017ರಿಂದ ಜಾರಿಗೆ ಬರುವಂತೆ ಕೋಡ್‌ನ ಕಂಡಿಕೆ 33ರಿಂದ 54ರವರೆಗಿನ ಕಂಡಿಕೆಗಳಂತೆ ಅಧಿಸೂಚನೆ ಹೊರಡಿಸಿತು. ಮೇಲ್ಕಂಡ ಕೋಡ್‌ನ ಕಂಡಿಕೆ 2ರಂತೆ, ಕೋಡ್‌ನ ಉಪಬಂಧಗಳು ಸ್ವಯಂಪ್ರೇರಿತ ಸಮಾಪನೆಯಲ್ಲಿರುವ

ಎಲ್ಲಾ ಕಂಪನಿಗಳಿಗೆ ಅನ್ವಯಿಸಲ್ಪಡುತ್ತದೆ ಮತ್ತು ಕಂಡಿಕೆ 59 ಕಾರ್ಪೊರೇಟ್ ವ್ಯಕ್ತಿಗಳ ಸ್ವಯಂ ಪ್ರೇರಿತ ಸಮಾಪನೆಗೆ ಸಂಬಂಧಿಸಿರುತ್ತದೆ. ಈ ಅಂಗ ಸಂಸ್ಥೆಯು 2004ರ ಸೆಪ್ಟಂಬರ್‌ನ ಹಿಂದೆಯೇ ಕಂಪನಿಗಳ ಕಾಯ್ದೆ 1956ರ ವಿಶೇಷ ಠರಾವನ್ನು ಹೊರಡಿಸಿ, ಬೆಂಗಳೂರಿನಲ್ಲಿರುವ ರಿಜಿಸ್ಟ್ರಾರ್ ಆಫ್ ಕಂಪನೀಸ್, ಕರ್ನಾಟಕ ಇವರಲ್ಲಿ ವಿಶೇಷ ಠರಾವನ್ನು ನೋಂದಾಯಿಸಿದ್ದರೂ ಕೂಡ, ಅಂಗ ಸಂಸ್ಥೆಯ ನಿರ್ದೇಶಕರ ಮಂಡಳಿಯು ಕಂಪನಿಯ ಋಣಪರಿಹಾರ ಸಾಮರ್ಥ್ಯದ ಬಗ್ಗೆ ಯಾವುದೇ ಘೋಷಣೆ ಹೊರಡಿಸಿಲ್ಲ ಅಥವಾ ಸ್ವಯಂ ಪ್ರೇರಿತ ಸಮಾಪನೆಯ ಪ್ರಕ್ರಿಯೆ ಪೂರ್ಣಗೊಳಿಸುವ ಸಲುವಾಗಿ ಲಿಕ್ವಿಡೇಟರುಗಳನ್ನಾಗಲೀ ಅಥವಾ ಇಂಟರಿಮ್ ರೆಸೊಲ್ಯೂಷನ್ ಪ್ರೊಫೆಷನಲ್‌ಗಳ ನೇಮಕಾತಿಯನ್ನೂ ಮಾಡಿರುವುದಿಲ್ಲ. ಬ್ಯಾಂಕ್‌ರಪ್ಟಿ ಕೋಡ್ 2016ರ ಉಪಬಂಧಗಳಂತೆ ಇಂಟರಿಮ್ ರೆಸೊಲ್ಯೂಷನ್ ಪ್ರೊಫೆಷನಲ್‌ಗಳ ನೇಮಕಾತಿಯಾದ ಕೂಡಲೇ, ಅಂಗಸಂಸ್ಥೆಯ ವ್ಯವಹಾರಗಳ ನಿರ್ವಹಣೆಯು ಇಂಟರಿಮ್ ರೆಸೊಲ್ಯೂಷನ್ ಪ್ರೊಫೆಷನಲ್‌ಗಳ ಸ್ವಾಧೀನಕ್ಕೆ ಬರಲಿದ್ದು, ನಿರ್ದೇಶಕರ ಮಂಡಳಿಯ ಅಧಿಕಾರವು ಸ್ಥಗಿತಗೊಂಡು ಇಂಟರಿಮ್ ರೆಸೊಲ್ಯೂಷನ್ ಪ್ರೊಫೆಷನಲ್‌ಗಳ ನಿರ್ವಹಣೆಗೆ ಬರಲಿದ್ದು, ತನ್ಮೂಲಕ ಅಂಗಸಂಸ್ಥೆಯ ನಿರ್ವಹಣೆಯ ಮೇಲೆ ಹಿಡುವಳಿ ಕಂಪನಿಯ ನಿಯಂತ್ರಣವು ಕೊನೆಯಾಗುತ್ತದೆ. ಅದಾಗ್ಯೂ, ಅಂಗಸಂಸ್ಥೆಯ ಗೋಯಿಂಗ್ ಕನ್‌ಸರ್ನ್ ನೀತಿಯು ಕೊನೆಗೊಳ್ಳುವುದರಿಂದ ಹಣಕಾಸಿನ ಕೋಷ್ಟಕಗಳನ್ನು ಸಮಾಪನೆಯಾಗುವ ಕಂಪನಿಯ ಆಧಾರದಲ್ಲಿ ಮಾಡುವ ಬದಲು ಗೋಯಿಂಗ್ ಕನ್‌ಸರ್ನ್ ಆಧಾರದ ಮೇಲೆಯೇ ಸಿದ್ಧಪಡಿಸಿರುತ್ತದೆ. ಚಾಲ್ತಿ ಹೊಣೆಗಾರಿಕೆಗಳು ಮತ್ತು ಉಪಬಂಧಗಳನ್ನು ಲೆಕ್ಕಹಾಕುವಿಕೆಯು ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಅವರ ಲೆಕ್ಕಪತ್ರ ಮಾನಕಗಳಿಗೆ ಅನುಸರಣೆಯಾಗಿ ಮತ್ತು ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಲ್ಪಟ್ಟ ಲೆಕ್ಕಪತ್ರ ನೀತಿಯಂತೆ ಸೇರಿಕೆ ಆಧಾರದ ಮೇಲೆ ಲೆಕ್ಕಹಾಕಲಾಗುತ್ತಿದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯವು ಕ್ವಾಲಿಫೈ ಆಗಿರುವುದಿಲ್ಲ.

ಮೇಲ್ಕಂಡ ವಿಷಯಗಳಿಗೆ ಒಳಪಟ್ಟು, ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಲೆಕ್ಕಪರಿಶೋಧನೆಯನ್ನು ನಾವು ನಡೆಸಿರುತ್ತೇವೆ.

4. **ಅರ್ಹ ಅಭಿಪ್ರಾಯಕ್ಕೆ ಆಧಾರಗಳು:**

(i) ವ್ಯವಹಾರಿಕ ಸ್ವಿಕಾರಾರ್ಹವಾದವುಗಳು, ವ್ಯಾವಹಾರಿಕ ಪಾವತಿಸತಕ್ಕವುಗಳು, ಠೇವಣಿಗಳು, ಗ್ರಾಹಕರಿಂದ ಮುಂಗಡಗಳು ಮುಂತಾದ ಖಾತೆಗಳಲ್ಲಿರುವ ಶಿಲ್ಕುಗಳನ್ನು ದೃಢೀಕರಣಕ್ಕೆ ಮತ್ತು ಪುನರ್‌ಪರಿಶೀಲನೆಗೆ ಒಳಪಡೆಸಬೇಕಾಗಿರುತ್ತದೆ. ಲೆಕ್ಕಪತ್ರಗಳ ಖಾತೆಯ ಶಿಲ್ಕುಗಳನ್ನು ಕಾಲಕಾಲಕ್ಕೆ ಪಡೆಯದೇ ಇರುವುದರಿಂದ ಮತ್ತು ಪುನರ್‌ಪರಿಶೀಲನೆಗೆ ಒಳಪಡಿಸದೇ ಇರುವುದರಿಂದ ಚಾಲ್ತಿ ಆಸ್ತಿಗಳು ಮತ್ತು ಚಾಲ್ತಿ ಹೊಣೆಗಾರಿಕೆಗಳು ಮತ್ತು ವರ್ಷಾವಧಿಯ ನಿವ್ವಳ ಲಾಭದ ಮೇಲೆ ಅವುಗಳ ಪರಿಣಾಮಗಳನ್ನು ಗುರುತಿಸಲಾಗುವುದಿಲ್ಲ.

(ii) ಗೊಟ್ಟೀಪುರದಲ್ಲಿರುವ ಜಮೀನಿಗೆ ಸಂಬಂಧಿಸಿದಂತೆ 1985ರಿಂದ ಮೌಲ್ಯವು ಅಂತಿಮವಾಗಿಲ್ಲದ ಕಾರಣದಿಂದ ಮೌಲ್ಯವನ್ನು ಕಂಪನಿಯ ಲೆಕ್ಕಪುಸ್ತಕದಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರುವುದಿಲ್ಲ. ಲೆಕ್ಕಪತ್ರಗಳ ಕೋಷ್ಟಕಗಳ ಮೇಲೆ ಇವುಗಳ ಪರಿಣಾಮವನ್ನು ಗುರುತಿಸಲಾಗುವುದಿಲ್ಲ.

(iii) ದಾಂಡೇಲಿಯಲ್ಲಿರುವ ದುರ್ಬಲ ಯಂತ್ರಗಳ ಮತ್ತು ಆಸ್ತಿಗಳ ವಿಷಯದಲ್ಲಿ ಕಂಪನಿಯು ಯಾವುದೇ ಮೌಲ್ಯಮಾಪನ ಮಾಡಿರುವುದಿಲ್ಲ., ಏಕೆಂದರೆ ಯಂತ್ರಗಳ ಮೌಲ್ಯವು ಮೌಲ್ಯಮಾಪನದ ಮೌಲ್ಯಕ್ಕಿಂತ ಹೆಚ್ಚಾಗಿರುತ್ತದೆ. ಪರಿಣಾಮವನ್ನು ಗುರುತಿಸಲಾಗುವುದಿಲ್ಲ.

(iv) ಈ ಕೆಳಗಿನ ಅಂಶಗಳತ್ತ ಗಮನ ಸೆಳೆಯಲಾಗಿದೆ

a) ಟಿಪ್ಪಣಿ 31ರ ಕ್ರ.ಸಂ. 5ರಲ್ಲಿ ಉಲ್ಲೇಖಿಸಿದಂತೆ, 1994-95ರ ಸಾಲಿನಲ್ಲಿ ವಶಪಡಿಸಿಕೊಳ್ಳಲಾಗಿದ್ದು, ಖರೀದಿದಾರರು ಸಾಮಗ್ರಿಗಳನ್ನು ಎತ್ತಿ ಸಾಗಿಸುವುದಕ್ಕೆ ಒಳಪಟ್ಟ 6202.793 ಘನ ಮೀಟರ್ ಗ್ರಾನೈಟ್ ತುಂಡುಗಳ ಮಾರಾಟವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ 31ನೇ ಮಾರ್ಚ್ 2005ರ ವರೆಗೆ ಕೇವಲ 1575.302 ಘನ ಮೀಟರ್ ಸಾಮಗ್ರಿಗಳನ್ನು ಮಾತ್ರ ವಿವಿಧ ಖರೀದಿದಾರರು ಎತ್ತಿ ಸಾಗಿಸಿರುತ್ತಾರೆ. ದರಖಾಸ್ತುದಾರರು ಟೆಂಡರಿನ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸದೇ ಇರುವ ಕಾರಣದಿಂದ ಪರವಾನಗಿ ಪತ್ರ ನೀಡದೇ ಇರುವುದರಿಂದ ಬಾಕಿ ಉಳಿದ ಸಾಮಗ್ರಿಗಳನ್ನು ಸಾಗಿಸಲಾಗಿರುವುದಿಲ್ಲ. ಸಾಗಿಸದೇ ಜಮೀನಿನಲ್ಲಿ ಬಿದ್ದಿರುವ ಉಳಿದ ಸಾಮಗ್ರಿಗಳ ಭೌತಿಕ ತಪಾಸಣೆಯನ್ನು ಕಂಪನಿಯು ಇಲ್ಲಿಯವರೆಗೂ ಕೈಗೊಂಡಿರುವುದಿಲ್ಲ. ಸಾಗಿಸದೇ ಇರುವ ಗ್ರಾನೈಟ್ ಚಪ್ಪಡಿಗಳ ದಾಸ್ತಾನು ಲಭ್ಯವಿರುತ್ತದೆಯೇ ಎಂಬ ಬಗ್ಗೆಯಾಗಲೀ ಅಥವಾ ಈ ಬಗ್ಗೆ ಅರಣ್ಯ ಇಲಾಖೆಯಿಂದ ದೃಢೀಕರಣ ಪಡೆದುಕೊಳ್ಳುವ ಬಗ್ಗೆಯಾಗಲೀ ಕಂಪನಿಯು

ಯಾವುದೇ ಕ್ರಮವನ್ನೂ ಕೈಗೊಂಡಿರುವುದಿಲ್ಲ. ಗ್ರಾನೈಟ್‌ಗಳಿಗಾಗಿ ಪಡೆದಿರುವ ಮುಂಗಡ ರೂ. 22,88,594 (ಹಿಂದಿನ ವರ್ಷ ರೂ. 22,88,594), ಗ್ರಾನೈಟ್‌ಗಳಿಗಾಗಿ ವ್ಯಾವಹಾರಿಕ ಸ್ವೀಕೃತಿಗಳು ರೂ. 72,37,934 (ಹಿಂದಿನ ವರ್ಷ ರೂ. 72,37,934) ಮತ್ತು ಗ್ರಾನೈಟ್‌ಗಳ ಬಾಬ್ತು ಅರಣ್ಯ ಇಲಾಖೆಗೆ ಪಾವತಿಸಬೇಕಾಗಿರುವ ಮೊಬಲಗು ರೂ. 60,88,064 (ಹಿಂದಿನ ವರ್ಷ ರೂ. 60,88,064) ಪುನರಾವಲೋಕನ ಮತ್ತು ಪುನರ್‌ತಾಳೆ ನೋಡುವಿಕೆಗೆ ಒಳಪಟ್ಟಿರುವುದರಿಂದ ಇವುಗಳನ್ನು ಹೊಂದಾಣಿಕೆ ಮಾಡಲಾಗಿರುವುದಿಲ್ಲ. ಈ ವಿಚಾರವು ಬಹಳ ಸಮಯದಿಂದ ಬಾಕಿ ಇದ್ದರೂ ಕೂಡಾ, ಶಿಲ್ಕುಗಳ ಪುನರಾವಲೋಕನ ಮತ್ತು ಪುನರ್‌ಪರಿಶೋಧನೆಗೆ ಯಾವುದೇ ಕ್ರಮವನ್ನೂ ಕೈಗೊಳ್ಳಲಾಗಿರುವುದಿಲ್ಲ. ಆದ್ದರಿಂದ ಹಣಕಾಸಿನ ಕೋಷ್ಟಕಗಳ ಮೇಲೆ ಇವುಗಳ ಪರಿಣಾಮವನ್ನು ಗುರುತಿಸುವುದಕ್ಕೆ ಸಾಧ್ಯವಾಗುವುದಿಲ್ಲ.

b) ಟಿಪ್ಪಣಿ 31ರ ಕ್ರಮ ಸಂಖ್ಯೆ. 8ರಲ್ಲಿ ತಿಳಿಸಿರುವಂತೆ, ಲೆಕ್ಕಪತ್ರದಲ್ಲಿ ಅವಕಾಶ ಮಾಡಿಕೊಳ್ಳದೇ ಇರುವ, ಮೆ॥ ಮಹೇಶ್ವರ ಟ್ರೇಡರ್ಸ್ ಪರವಾಗಿ ವಿತರಿಸಲಾಗಿರುವ ಮೊಕದ್ದಮೆಯ ಮೊತ್ತ ರೂ. 12.85 ಲಕ್ಷ, ಅದರ ವಿರುದ್ಧ ಕಂಪನಿಯು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದೆ ಮತ್ತು ಈ ಬಗ್ಗೆ ಜೂನ್ 2011ರಲ್ಲಿ ತಡೆಯನ್ನು ಪಡೆಯಲಾಯಿತು.

c) ಟಿಪ್ಪಣಿ 31ರ ಕ್ರ. ಸಂ. 10ರಲ್ಲಿ ತಿಳಿಸಿರುವಂತೆ, ರೂ. 1,89,879 ಮೌಲ್ಯದ ಶಿವಮೊಗ್ಗದಲ್ಲಿರುವ (ಡಬ್ಲ್ಯೂಪಿಪಿ) 18 ಎಕರೆ 35 ಗುಂಟೆ ಮತ್ತು ದಾಂಡೇಲಿಯಲ್ಲಿ 15 ಎಕರೆ 25 ಗುಂಟೆ ಜಮೀನಿನ ಹಕ್ಕು ಪತ್ರಗಳನ್ನು 1975 ರಿಂದಲೂ ಕಂಪನಿಯ ಹೆಸರಿಗೆ ವರ್ಗಾಯಿಸಲಾಗಿರುವುದಿಲ್ಲ. ಲೆಕ್ಕಪತ್ರಗಳ ಕೋಸ್ಟಕಗಳ ಮೇಲೆ ಇವುಗಳ ಪರಿಣಾಮವನ್ನು ಗುರುತಿಸಲಾಗುವುದಿಲ್ಲ.

d) ಟಿಪ್ಪಣಿ 31 ರ ಕ್ರ.ಸಂ. 12ರಲ್ಲಿ ತಿಳಿಸಿರುವಂತೆ ಬೆಂಗಳೂರಿನ ಟಿಂಬರ್‌ಯಾರ್ಡ್ ಬಡಾವಣೆಯಲ್ಲಿರುವ ಜಮೀನಿಗೆ ಸಂಬಂಧಿಸಿದಂತೆ 1990ರಿಂದ ಮೌಲ್ಯವು ಅಂತಿಮವಾಗಿಲ್ಲದ ಕಾರಣದಿಂದ ಮೌಲ್ಯವನ್ನು ಕಂಪನಿಯ ಲೆಕ್ಕದ ಪುಸ್ತಕಗಳಲ್ಲಿ ಲೆಕ್ಕ ಹಾಕಿರುವುದಿಲ್ಲ. ಹಣಕಾಸಿನ ಕೋಸ್ಟಕಗಳ ಮೇಲೆ ಇವುಗಳ ಪರಿಣಾಮಗಳನ್ನು ಗುರುತಿಸಲಾಗುವುದಿಲ್ಲ.

e) ಟಿಪ್ಪಣಿ 31 ರ ಕ್ರ.ಸಂ. 13ರಲ್ಲಿ ತಿಳಿಸಿರುವಂತೆ ಮೂರ್ಕಲ್ ಘಟಕದಲ್ಲಿ ರೂ. 1,27,678/-ರ (ಹಿಂದಿನ ವರ್ಷ ರೂ. 1,27,678/-) ಮೌಲ್ಯದ ಕೆಲವೊಂದು ಸ್ಥಿರ ಆಸ್ತಿಗಳ ಸ್ವಾಧೀನವನ್ನು ಕೆ.ಎಫ್.ಡಿ.ಸಿ. ಗೆ ವಹಿಸಿಕೊಡಲಾಗಿದ್ದರೂ ಕೂಡ ಅಂತಹ ಆಸ್ತಿಗಳನ್ನು ಕಂಪನಿಯ ಆಸ್ತಿ ಎಂದು ತೋರಿಸಿರುವದನ್ನು ಮುಂದುವರೆಸಿದ್ದು ಅಂತಹ ಆಸ್ತಿಗಳ ಮೇಲೆ ಸವಕಳಿಯನ್ನು ಕಳೆಯಲಾಗಿರುತ್ತದೆ. ಲೆಕ್ಕಪತ್ರಗಳ ಕೋಸ್ಟಕಗಳ ಮೇಲೆ ಇವುಗಳ ಪರಿಣಾಮವನ್ನು ಗುರುತಿಸಲಾಗುವುದಿಲ್ಲ.

f) ಟಿಪ್ಪಣಿ 31 ರ ಕ್ರ.ಸಂ. 14ರಲ್ಲಿ ತಿಳಿಸಿರುವಂತೆ ಕೆ.ಎಫ್.ಡಿ.ಸಿ. ಯಿಂದ ಪಡೆಯಲಾಗಿರುವ ಬೆಂಗಳೂರಿನ ಮಲ್ಲೇಶ್ವರಂನ "ವನವಿಕಾಸ"ದಲ್ಲಿ ಸ್ವಾಧೀನಕ್ಕೆ ಪಡೆದಿರುವ 9750 ಚದರ ಅಡಿ ವಿಸ್ತೀರ್ಣದ ಕಛೇರಿ ಸ್ಥಳಾವಕಾಶದ ಹಕ್ಕುಪತ್ರಗಳು ವರ್ಗಾವಣೆಯು ಬಾಕಿ ಇದ್ದರೂ ಕೂಡ ಇದರ ಮೇಲೆ ಹಣಕಾಸಿನ ವರ್ಷ 1990-91 ರಿಂದ ಸವಕಳಿಯನ್ನು ಕಳೆಯಲಾಗುತ್ತಿದೆ. ಮೇಲೆ ಉಲ್ಲೇಖಿಸಿರುವ ಮೂರ್ಕಲ್ ಆಸ್ತಿಯು ಸೇರಿದಂತೆ ಟಿಪ್ಪಣಿ 31 ರ ಕ್ರ. ಸಂ. 13ರಲ್ಲಿ ತಿಳಿಸಿರುವ ಆಸ್ತಿಗಳ ಹಕ್ಕುಪತ್ರ ವರ್ಗಾವಣೆ ಮತ್ತು ಈ ಬಗ್ಗೆ ಮಾಡಲಾಗಿರುವ ಪಾವತಿಗಳನ್ನು ಲೆಕ್ಕ ಹಾಕುವಿಕೆ ಮತ್ತು ಅವುಗಳ ಪುನರ್ ಪರಿಶೀಲನೆಯು ಬಹಳ ಸಮಯದಿಂದ ಬಾಕಿ ಇರುತ್ತದೆ. ಕಂಪನಿಯು ಈ ಸ್ವತ್ತುಗಳಿಗೆ ಆಸ್ತಿ ತೆರಿಗೆಗಳನ್ನು ಪಾವತಿಸುತ್ತಿದ್ದು, ಇವುಗಳ ಹಕ್ಕು ಪತ್ರಗಳನ್ನು ವರ್ಗಾಯಿಸಲು ಕೆ.ಎಫ್.ಡಿ.ಸಿ. ಗೆ ಮನವಿ ಮಾಡಿರುತ್ತದೆ. ಲೆಕ್ಕಪತ್ರಗಳ ಕೋಸ್ಟಕಗಳ ಮೇಲೆ ಇವುಗಳ ಪರಿಣಾಮವನ್ನು ಪ್ರಮಾಣೀಕರಿಸಲಾಗುವುದಿಲ್ಲ.

g) ಟಿಪ್ಪಣಿ 31 ರ ಕ್ರ.ಸಂ. 15ರಲ್ಲಿ ತಿಳಿಸಿರುವಂತೆ ಮಂಗಳೂರಿನ, ಮಂಗಳೂರು ಜಿಲ್ಲಾ ಪರಿಷತ್ತಿಗೆ 1993-94ರಲ್ಲಿ ವಾರ್ಷಿಕ ರೂ. 30,000/- ಗುತ್ತಿಗೆ ಬಾಡಿಗೆಯಂತೆ ಗುತ್ತಿಗೆಗೆ ನೀಡಿರುವ 15 ಸೆಂಟ್ ಜಮೀನಿನ ಬಾಡಿಗೆಯನ್ನು ಲೆಕ್ಕ ಹಾಕದೆ ಇರುವುದರಿಂದ ವರ್ಷದ ನಿವ್ವಳ ಆದಾಯವು ಆ ಮಟ್ಟಿಗೆ ಕಡಿಮೆ ದಾಖಲಿಸಿದಂತಾಗುತ್ತದೆ.

h) ಟಿಪ್ಪಣಿ 31 ರ ಕ್ರ.ಸಂ. 20ರಲ್ಲಿ ಉಲ್ಲೇಖಿಸಿದಂತೆ ರಜೇ ನಗಧೀಕರಣ ಮತ್ತು ಗ್ರಾಚ್ಯುಯಿಟಿಯನ್ನು ಆಸ್ತಿ ಹೊಣೆ ತಃಖ್ತೆಯ ದಿನಾಂಕದಂದು ಎಲ್‌ಐಸಿ ಯಲ್ಲಿ ಪಾವತಿಸುವ ಎಲ್‌ಐಸಿ ಯ ನಗದು ಸೇರಿಕೆ ಯೋಜನೆಯಂತೆ ನೈಜ ಮೌಲ್ಯಮಾಪನದ ಆಧಾರದ ಮೇಲೆ ಲೆಕ್ಕ ಹಾಕುವಿಕೆಗೆ ಸಂಬಂಧಿಸಿರುತ್ತದೆ. ಜಿಜಿಪಿ ಗೆ (ರೂ. 2,00,971) ಮತ್ತು ಜಿಎಲ್‌ಇಎಸ್‌ಗೆ (ರೂ. 14,68,087) ನ್ನು ನೈಜ ಮೌಲ್ಯ ಮಾಪನದ ಆಧಾರದ ಮೇಲೆ ಪಾವತಿಸಿರುವ ಪರಿಣಾಮವನ್ನು ಲೆಕ್ಕದ ಪುಸ್ತಕಗಳಲ್ಲಿ ತೋರಿಸದೆ ಇರುವುದರಿಂದ ಲಾಭವನ್ನು ರೂ. 16,69,058 ರಷ್ಟು ಕಡಿಮೆ ತೋರಿಸಿದಂತಾಗುತ್ತದೆ.

i) ಟಿಪ್ಪಣಿ 31 ರ ಕ್ರ.ಸಂ. 21ರಲ್ಲಿ ಉಲ್ಲೇಖಿಸಿದಂತೆ, ದಾಂಡೇಲಿ ಸಾ-ಮಿಲ್ಸ್‌ನ ವಸತಿ ಗೃಹದ ಬಾಡಿಗೆದಾರರಿಂದ ಸ್ವೀಕರಿಸಬೇಕಾಗಿರುವ ಬಾಡಿಗೆ ಆದಾಯವನ್ನು ಲೆಕ್ಕದ ಪುಸ್ತಕಗಳಲ್ಲಿ ಲೆಕ್ಕ ಹಾಕದೇ ಇರುವುದು. ಹಣಕಾಸಿನ ಕೋಸ್ಟಕಗಳಲ್ಲಿ ಇದರ ಪರಿಣಾಮವನ್ನು ಪರಿಮಾಣೀಕರಿಸಲು ನಾವು ಅಸಮರ್ಥರಾಗಿರುತ್ತೇವೆ.

j) ಟಿಪ್ಪಣಿ 31 ರ ಕ್ರ.ಸಂ. 28ರಲ್ಲಿ ಉಲ್ಲೇಖಿಸಿದಂತೆ, ಮೆ॥ ವೆಸ್ಟ್ ಕೋಸ್ಟ್ ಪೇಪರ್ ಮಿಲ್ ದಾಂಡೇಲಿ ಇವರು ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಲಯದಲ್ಲಿ ದಿನಾಂಕ: 21.03.2018 ರ ನಂತರ ಪೂರೈಕೆ ಮಾಡಲಾಗುತ್ತಿರುವ ಪಲ್ಪ್‌ವುಡ್ ಮೌಲ್ಯದ ಮೇಲೆ ಅರಣ್ಯ ಅಭಿವೃದ್ಧಿ ತೆರಿಗೆ ರೂ. 2,21,611/- ಸಂಗ್ರಹಣೆ ಮಾಡುವುದಕ್ಕೆ ತಡೆಯಾಜ್ಞೆ ಪಡೆದಿರುತ್ತದೆ. ಈ ಬಗ್ಗೆ ಟಿಪ್ಪಣಿಯಲ್ಲಿ ಕಂಪನಿಯ ಯಾವುದೇ ಹೊಣೆಗಾರಿಕೆಯಾಗಲೀ ಅಥವಾ ಅರಣ್ಯ ಇಲಾಖೆ ಸಂಗ್ರಹಿಸಿದ ಅರಣ್ಯ ಅಭಿವೃದ್ಧಿ ಶುಲ್ಕದ ಬಗ್ಗೆಯಾಗಲೀ ಖಚಿತಪಡಿಸಲಾಗಿಲ್ಲ ಅಥವಾ ಬಹಿರಂಗಪಡಿಸಲಾಗಿಲ್ಲ. ಲೆಕ್ಕಪತ್ರಗಳ ಕೋಷ್ಟಕಗಳ ಮೇಲೆ ಇವುಗಳ ಪರಿಣಾಮವನ್ನು ಗುರುತಿಸಲಾಗುವುದಿಲ್ಲ.

k) ಟಿಪ್ಪಣಿ 31 ರ ಕ್ರ.ಸಂ. 32ರಲ್ಲಿ ಉಲ್ಲೇಖಿಸಿದಂತೆ, ಕಂಪನಿ ಕಾಯ್ದೆ 2013ರ ಅನುಬಂಧ ll, ಪಾರ್ಟ್ ಸಿ ಪ್ರಕಾರ 2.1.D ಯಲ್ಲಿ ಬಹಿರಂಗಪಡಿಸಿದ ಲೆಕ್ಕಪತ್ರ ನೀತಿ ಪ್ರಕಾರ, ವರ್ಷದಲ್ಲಿ ಮಾಡಿದ ಸೇರ್ಪಡೆಗೆ ಸಂಬಂಧಿಸಿದಂತೆ, ಸವಕಳಿಗೆ ವಿಧಿಸಲಾಗುತ್ತದೆ ಎಂದು ಹೇಳಲಾಗಿದೆ ಸೇರ್ಪಡೆಯ ದಿನಾಂಕ ಮತ್ತು ಕಡಿತಗಳ (ಅಳಿಸುವಿಕೆಗಳ) ಸಂದರ್ಭದಲ್ಲಿ ಲೆಕ್ಕಿಸದೆ ವರ್ಷ ಪೂರ್ತಿ ಮಾಡಿದ, ವರ್ಷದಲ್ಲಿ, ಅಳಿಸುವಿಕೆಗೆ ದಿನಾಂಕವನ್ನು ಹೊರತುಪಡಿಸಿ, ಯಾವುದೇ ಸವಕಳಿ ವಿಧಿಸಲಾಗುವುದಿಲ್ಲ. 31.03.2018 ಅಂತ್ಯಕ್ಕೆ ಆಸ್ತಿಗಳ ಮೌಲ್ಯ ಮತ್ತು ಈ ವರ್ಷದಲ್ಲಿ ಸೇರ್ಪಡೆ ಮಾಡಲಾಗಿರುವುದನ್ನು ಸೇರಿಸಿ ಅವುಗಳ ಉಪಯುಕ್ತತೆ ಮತ್ತು ಬಾಳಿಕೆಯನ್ನಾಧರಿಸಿ ಸವಕಳಿಯನ್ನು ಲೆಕ್ಕಹಾಕಿ ತಿಳಿಸಲಾಗಿದೆ, ಇದು ಕಂಪನಿಯ ಕಾಯ್ದೆ 2013ರ ಅನುಬಂಧ ll ರ ಪಾರ್ಟ್-ಸಿ ಗೆ ಅನುಗುಣವಾಗಿಲ್ಲ. ಪರಿಣಾಮ ಖಚಿತವಾಗಿಲ್ಲ.

l) ಟಿಪ್ಪಣಿ 31 ರ ಕ್ರ.ಸಂ. 33ರಲ್ಲಿ ತಿಳಿಸಿರುವಂತೆ, ಕಂಪನಿಗಳ ಕಾಯ್ದೆ, 2013ರ ವಿಭಾಗ 135(1) ನಿಬಂಧನೆಗಳನುಸಾರ ನಿರ್ದೇಶಕರ ಮಂಡಳಿಯಿಂದ ಸಾಂಸ್ಥಿಕ ಸಮಾಜದ ಸಂವಿಧಾನ ಜವಾಬ್ದಾರಿ ಸಮಿತಿ ಇದೆ. 2017-18ರ ಅವಧಿಯ ಅಯ-ವ್ಯಯ ಪಟ್ಟಿಯಲ್ಲಿ ಸಿಎಸ್‌ಆರ್ ಚಟುವಟಿಕೆಗಳಿಗೆ ರೂ. 4,80,000/-ನ್ನು ನಿಯೋಜಿಸಲಾಗಿದೆ. ಇದರಲ್ಲಿ ರೂ. 2,98,602/-ನ್ನು ಸವಲತ್ತುಗಳ ಅಡಿಯಲ್ಲಿ ಸೊಸೈಟಿಯ ಉನ್ನತಿಗಾಗಿ, ಕಲ್ಯಾಣಕ್ಕಾಗಿ ಖರ್ಚು ಮಾಡಲಾಗಿದೆ. ಜೂನ್ 2018ರಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸಹ ವರದಿಯನ್ನು ಮಾಡಿರುತ್ತಾರೆ.

ಅರ್ಹ ಅಭಿಪ್ರಾಯ:

5. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಲಾಗಿರುವ ಮಾಹಿತಿಗಳು ಮತ್ತು ವಿವರಣೆಗಳಂತೆ ಮೇಲ್ಕಂಡ ಕಂಡಿಕೆಗಳಲ್ಲಿ ವಿವರಿಸುರವ ಅರ್ಹ ಅಭಿಪ್ರಾಯಗಳ ಆಧಾರದಲ್ಲಿ ವಿಷಯಗಳು ಬೀರುವ ಪರಿಣಾಮಗಳನ್ನು ಹೊರತುಪಡಿಸಿ, ಮೇಲೆ ಹೇಳಲ್ಪಟ್ಟ ಪ್ರತ್ಯೇಕ ಹಣಕಾಸಿನ ಕೋಷ್ಟಕಗಳು ಕಾಯ್ದೆಯ ಅಗತ್ಯತೆಗೆ ಅನುಸಾರವಾಗಿ ನೀಡಬೇಕಾಗಿರುವಂತಹ ಮಾಹಿತಿಗಳನ್ನು ನೀಡಿರುತ್ತದೆ ಮತ್ತು ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಲ್ಪಟ್ಟಿರುವ ಲೆಕ್ಕಪತ್ರ ನೀತಿಯ ಅನುಸಾರವಾಗಿ 31ನೇ ಮಾರ್ಚ್ 2018ರಲ್ಲಿ ಇರುವಂತೆ ಕಂಪನಿಯ ವ್ಯವಹಾರದ ಸ್ಥಿತಿಯ ಬಗ್ಗೆ ಅದರ ಲಾಭದ ಬಗ್ಗೆ ಮತ್ತು ಈ ದಿನಾಂಕಕ್ಕೆ ಕೊನೆಯಾದ ವರ್ಷದ ನಗದು ಹರಿವಿನ ಬಗ್ಗೆ ತೃಪ್ತಿಕರವಾದ ಅಭಿಪ್ರಾಯವನ್ನು ನೀಡಿರುತ್ತದೆ.

6. **ಪ್ರಮುಖ ವಿಚಾರಗಳು**

ಈ ಕೆಳಗಿನ ವಿಷಯಗಳಿಗೆ ಗಮನ ಸೆಳೆಯಲಾಗಿದೆ:

a) ಹಣಕಾಸಿನ ಕೋಷ್ಟಕದ ಟಿಪ್ಪಣಿ 1 ಮತ್ತು ಟಿಪ್ಪಣಿ 31 ರ ಕ್ರ. ಸಂ. 31ರಂತೆ, ದಿನಾಂಕ: 22.11.2004ರ ಆದೇಶದಂತೆ ಹಾಗೂ ಇತ್ತೀಚಿನ ಅಂದರೆ ದಿನಾಂಕ: 13.12.2014ರ ನಡವಳಿಯಂತೆ ಸರ್ಕಾರವು ಕಂಪನಿಯನ್ನು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದೊಂದಿಗೆ (ದಿ "ಕೆಎಫ್‌ಡಿಸಿ") ವಿಲೀನಗೊಳಿಸಲು ಒಪ್ಪಿಗೆಯನ್ನು ನೀಡಿರುತ್ತದೆ ಮತ್ತು ಫಾರೆಸ್ಟ್ ಇಕೋಲಜಿ & ಎನ್ವಿರಾನ್‌ಮೆಂಟ್‌ನ ಅಡಿಯಲ್ಲಿ ಬರುವ ಕಂಪನಿಗಳನ್ನು ವಿಲೀನಗೊಳಿಸಲು ಆದೇಶ ಹೊರಡಿಸಿರುತ್ತದೆ ಮತ್ತು ಕೆಎಫ್‌ಡಿಸಿಯ ರಬ್ಬರ್ ಘಟಕವನ್ನು ಕೆಸಿಡಿಸಿಯೊಂದಿಗೆ ಮತ್ತು ಕಂಪನಿಯನ್ನು ಕೆಎಫ್‌ಡಿಸಿಯೊಂದಿಗೆ ವಿಲೀನವಾಗಲು ಆದೇಶ ನೀಡಿರುತ್ತದೆ. ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಸಲುವಾಗಿ ಕೆಎಫ್‌ಡಿಸಿಯು ಮೌಲ್ಯಮಾಪಕರನ್ನು ಮತ್ತು ವಹಿವಾಟು ಸಲಹೆಗಾರರನ್ನು ನೇಮಿಸಿರುತ್ತದೆ. ಕಂಪನಿಯನ್ನು ಕೆಎಫ್‌ಡಿಸಿಯೊಂದಿಗೆ ವಿಲೀನಗೊಳಿಸುವ ವಿಚಾರವನ್ನು ದಿನಾಂಕ: 28.07.2015ರಂದು ನಡೆದ 234ನೇ ನಿರ್ದೇಶಕರ ಸಭೆಯ ಮುಂದೆ ಮಂಡಿಸಲಾಗಿದ್ದು, ನಿರ್ದೇಶಕರ ಮಂಡಳಿಯು ಈ ಬಗ್ಗೆ ಚರ್ಚೆಯ ನಂತರ ವಿಲೀನ ಪ್ರಕ್ರಿಯೆಗೆ ಕೈಗೊಳ್ಳಬೇಕಾಗಿರುವ ಕ್ರಮಗಳನ್ನು ಕೈಗೊಳ್ಳಲು ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಿತು. ನಂತರದಲ್ಲಿ, ಕಂಪನಿಯ ನಿರ್ದೇಶಕರ ಮಂಡಳಿಯು ತನ್ನ 242ನೇ ಸಭೆಯಲ್ಲಿ ಚರ್ಚಿಸಿದ ನಂತರ ವಿಲೀನ ಪ್ರಸ್ತಾವನೆಯನ್ನು ಕರ್ನಾಟಕದ ಉಚ್ಚ ನ್ಯಾಯಾಲಯಕ್ಕೆ ಬದಲಾಗಿ ಎನ್‌ಸಿಎಲ್‌ಟಿಯಲ್ಲಿ ಹೂಡಬೇಕಾಗಿರುವ ಕಾರಣದಿಂದ ಪರಿಷ್ಕೃತ ಅಮಾಲ್ಗಮೇಷನ್ ಯೋಜನೆಗೆ ಒಪ್ಪಿಗೆ ನೀಡಿತು ಮತ್ತು ಮಂಡಳಿಯು ತೀರ್ಮಾನಿಸಿರುವಂತೆ ವಿಲೀನಿಕರಣ ಯೋಜನೆಯನ್ನು ಪುನರ್‌ಪರಿಶೀಲಿಸಲು ಸರ್ಕಾರಕ್ಕ ಮನವಿ ಸಲ್ಲಿಸಲು ಠರಾವು ಅಂಗೀಕರಿಸಿತು ಮತ್ತು ಇದನ್ನು ಮೇ 2017ರಲ್ಲಿ ತಿಳಿಸಲಾಯಿತು. ಈ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯವು ಕ್ವಾಲಿಫೈ ಆಗಿರುವುದಿಲ್ಲ.

b) ಟಿಪ್ಪಣಿ 31ರ ಕ್ರ.ಸಂ. 9ರಲ್ಲಿ ವಿವರಿಸಿರುವಂತೆ ಕರ್ನಾಟಕ ಸರ್ಕಾರವು ಮಂಜೂರು ಮಾಡಿರುವ ಸಾಲಕ್ಕೆ 2001ರ ಏಪ್ರಿಲ್‌ನಿಂದ ಅಕ್ಟೋಬರ್ ವರೆಗಿನ ಬಡ್ಡಿ ಮೊಬಲಗು ರೂ. 8.17 ಲಕ್ಷಕ್ಕೆ ಸಂಬಂಧಿಸಿದಂತೆ ಬಡ್ಡಿ ಮನ್ನಾ ಮಾಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿರುವ ಹಿನ್ನಲೆಯಲ್ಲಿ ಈ ಮೊಬಲಗಿಗೆ ಉಪಬಂಧ ಕಲ್ಪಿಸಿರುವುದಿಲ್ಲ. ಬಡ್ಡಿ ಮನ್ನಾ ಮಾಡುವ ಆದೇಶವು ಬಹಳ ಸಮಯದಿಂದ ಬಾಕಿ ಇರುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯವು ಕ್ವಾಲಿಫೈ ಆಗಿರುವುದಿಲ್ಲ.

c) ಟಿಪ್ಪಣಿ 31ರ ಕ್ರ.ಸಂ. 11ರಲ್ಲಿ ವಿವರಿಸಿರುವಂತೆ, ಸರ್ಕಾರವು ದಿನಾಂಕ: 14.11.2014ರ ಆದೇಶದಂತೆ ಕಂಪನಿಯ 5.89 ಎಕರೆ ಜಮೀನನ್ನು ಜಿಲ್ಲಾ ಕಛೇರಿ ಸಮುಚ್ಚಯಗಳ ನಿರ್ಮಾಣದ ಉದ್ದೇಶದಿಂದ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳೊಂದಿಗೆ ವಿನಿಮಯ ಮಾಡಿಕೊಂಡು ಅದರ ಬದಲಿಗೆ ಮಂಗಳೂರು ಜಿಲ್ಲಾಧಿಕಾರಿಯವರು ಕೆಲವೊಂದು ನಿಯಮ ಮತ್ತು ನಿಬಂಧನೆಗಳಿಗೆ ಒಳಪಟ್ಟು ಕಂಪನಿಗೆ 4.50 ಎಕರೆ ಜಮೀನನ್ನು ವರ್ಗಾವಣೆ ಮಾಡಬೇಕಾಗಿರುತ್ತದೆ. ನಿಯಮಗಳು ಮತ್ತು ನಿಬಂಧನೆಗಳ ಅನುಸರಣೆಯು ಬಾಕಿ ಇರುವ ಕಾರಣದಿಂದ ಜಮೀನನ್ನು ಭೌತಿಕವಾಗಿ ಸರ್ಕಾರಕ್ಕೆ ಹಸ್ತಾಂತರಿಸಲಾಗಿರುವುದಿಲ್ಲ ಮತ್ತು ಲೆಕ್ಕದ ಪುಸ್ತಕಗಳಲ್ಲಿ ಈ ಬಗ್ಗೆ ಯಾವುದೇ ದಾಖಲಾತಿಗಳನ್ನು ಮಾಡಿರುವುದಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯವು ಅರ್ಹತೆ ಆಗಿರುವುದಿಲ್ಲ.

d) ಟಿಪ್ಪಣಿ 31ರ ಕ್ರ.ಸಂ. 17ಕ್ಕೆ ಸಂಬಂಧಿಸಿದಂತೆ, 2001ರ ಡಿಸೆಂಬರ್‌ನಲ್ಲಿ ಕರ್ನಾಟಕ ಸರ್ಕಾರವು, ಕಂಪನಿಯ ಅಂಗಸಂಸ್ಥೆಯಾಗಿರುವ ಮೈಸೂರು ಮ್ಯಾಚ್ ಕಂಪನಿಯ ಹಣಕಾಸಿನ ನೆರವಿನ ಬೇಡಿಕೆಗೆ ಅನುಸಾರವಾಗಿ ಸ್ವಯಂ ನಿವೃತ್ತಿ ಯೋಜನೆಯ ಪಾವತಿಗಳಿಗಾಗಿ ರೂ. 8.00 ಲಕ್ಷಗಳ ಸಾಲ ಮಂಜೂರು ಮಾಡಿದ್ದು, ಅದರ ಆಸ್ತಿಗಳ ಮಾರಾಟದ ನಂತರ ಅಸಲು ಮೊಬಲಗನ್ನು ಮರು ಪಾವತಿ ಮಾಡಬೇಕಾಗಿರುತ್ತದೆ. ಅಲ್ಲದೆ ಸರ್ಕಾರವು ಅಂಗಸಂಸ್ಥೆಗೆ ಸಂಬಂಧಿಸಿದ ಧಾವೆಯ ಇತ್ಯರ್ಥದ ಕಾರಣದಿಂದಾಗಿ ನಿಗಮದ ಮುಖಾಂತರ ಹಣಕಾಸಿನ ನೆರವನ್ನು ನೀಡಿರುತ್ತದೆ. ಕರ್ನಾಟಕ ಸರ್ಕಾರವು ಬಡ್ಡಿಯ ದರವನ್ನು ನಿಗಧಿಪಡಿಸದೆ ಇರುವುದರಿಂದ ಕಂಪನಿಯು ಸಾಲಗಳ ಮೇಲೆ ಬಡ್ಡಿಗೆ ಉಪಬಂಧವನ್ನು ಕಲ್ಪಿಸಿರುವುದಿಲ್ಲ. ಆದರೆ, ಕರ್ನಾಟಕ ಫೈನಾನ್ಷಿಯಲ್ ಕೋಡ್, 1958 ರ ಕಂಡಿಕೆ 190ರಂತೆ ಬಡ್ಡಿಯ ದರವನ್ನು ನಿಗಧಿಪಡಿಸಲಾಗಿರುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯವು ಕ್ವಾಲಿಫೈ ಆಗಿರುವುದಿಲ್ಲ.

e) ಟಿಪ್ಪಣಿ 31ರ ಕ್ರ.ಸಂ. 24ಕ್ಕೆ ಸಂಬಂಧಿಸಿದಂತೆ,

i) ದಿನಾಂಕ: 08.10.2010ರ ಆದೇಶದಂತೆ 16.05.2005ರಿಂದ 31.03.2009ರ ವರೆಗಿನ ಅವಧಿಗೆ ಒಟ್ಟು ರೂ. 46,00,796 ಸೇವಾ ತೆರಿಗೆಗೆ ಡಿಮ್ಯಾಂಡ್ ಮಾಡಲಾಗಿದೆ. ಸೇವಾ ತೆರಿಗೆ ರೂ. 22,97,898, ದಂಡ ರೂ.22,97,898 ಮತ್ತು ಬಡ್ಡಿ ರೂ. 5,000ಕ್ಕೆ ಸಂಬಂಧಿಸಿದಂತೆ ವಿವಿಧ ಹಂತಗಳಲ್ಲಿ ಮನವಿಯನ್ನು ಸಲ್ಲಿಸಲಾಗಿದ್ದು, ವಿವಿಧ ದಿನಾಂಕಗಳಂದು ತಡೆಯಾಜ್ಞೆಯ ಅರ್ಜಿಯನ್ನೂ ಸಲ್ಲಿಸಲಾಗಿರುತ್ತದೆ. ಸೇವಾ ತೆರಿಗೆ ಪ್ರಾಧಿಕಾರವು ನಂತರದ ಅವಧಿಗೆ ಡಿಮಾಂಡ್ ಮಾಡಿರುವ ಸೇವಾ ತೆರಿಗೆ ಮೊಬಲಗು ರೂ. 7,23,481ರ ವಿರುದ್ಧ ಕಂಪನಿಯು ಅಪೀಲನ್ನೂ ಸಲ್ಲಿಸಿರುತ್ತದೆ ಮತ್ತು ಮೂಲ ಅಪೀಲಿನ ಅಂತಿಮ ಆದೇಶದ ನಿರೀಕ್ಷೆಯಲ್ಲಿ ಕಂಪನಿಯು ತೆರಿಗೆ ಡಿಮಾಂಡ್ ಮೊಬಲಗನ್ನು ಮುಂಗಡವಾಗಿ ಠೇವಣಿ ಇಟ್ಟಿರುತ್ತದೆ. ಮೂಲ ಅಪೀಲಿಗೆ ತಡೆ ಬಂದಿರುವುದರಿಂದ ಮತ್ತು ದಿನಾಂಕ 04.09.2015ರ ಆದೇಶದಂತೆ ಫೈನಲ್ ಅಪೀಲನ್ನು ಮೂಲ ಪ್ರಾಧಿಕಾರದ ವ್ಯಾಪ್ತಿಗೆ ಹೊಸದಾಗಿ ಪರಿಶೀಲನೆ ನಡೆಸಲು ಕಳುಹಿಸಿರುವುದರಿಂದ ಲೆಕ್ಕದ ಪುಸ್ತಕಗಳಲ್ಲಿ ಮೇಲ್ಕಂಡ ಠೇವಣಿಗೆ ಯಾವುದೇ ಉಪಬಂಧವನ್ನೂ ಕಲ್ಪಿಸಿರುವುದಿಲ್ಲ. ಸೇವಾ ತೆರಿಗೆ ಪ್ರಾಧಿಕಾರವು ದಿನಾಂಕ 08.12.2016ರ ಆದೇಶದಂತೆ ರೂ. 12,42,132ನ್ನು ಮತ್ತು ಸಾಮಾನ್ಯ ದರದಲ್ಲಿ ಬಡ್ಡಿಯನ್ನು ಪಾವತಿಸಲು ಡಿಮ್ಯಾಂಡ್ ಮಾಡಿದ್ದು, ಇದಕ್ಕೂ ಕೂಡಾ ಕಂಪನಿಯು ಅಪೀಲನ್ನು ಸಲ್ಲಿಸಿರುತ್ತದೆ. ಸೇವಾತೆರಿಗೆ ಪ್ರಾಧಿಕಾರವು ದಿನಾಂಕ 29.07.2016ರ ಆದೇಶದಂತೆ ಶಿವಮೊಗ್ಗ ವಲಯದ ವರ್ಷಾವಧಿಯಲ್ಲಿನ ನಾಟಾ ಚಟುವಟಿಕೆಯ ಮೇಲೆ ಸೇವಾತೆರಿಗೆಯಾಗಿ ರೂ 26,93,378 ರ ಪಾವತಿಗಾಗಿಯೂ ಡಿಮ್ಯಾಂಡನ್ನು ಮಾಡಿದ್ದು, ಇದಕ್ಕೆ ಎದುರಾಗಿ ಕಂಪನಿಯು ಜಂಟೀ ಆಯುಕ್ತರು, ಮೈಸೂರು ಇವರಿಗೆ ಜೂನ್ 2017 ಮತ್ತು ಅಕ್ಟೋಬರ್ 2017ರಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆ ಅದರಂತೆ ಮನವಿಯನ್ನು ಅನುಮತಿಸಲಾಗಿದೆ. ರೂ. 2,65,688 ರಷ್ಟು ಪೂರ್ವ ಠೇವಣಿ ಮಾಡಲಾಗಿದೆ. ಸೇವಾ ತೆರಿಗೆ ಪ್ರಾಧಿಕಾರವು ಬೇಡಿಕೆ ಇರುವ ಸೇವಾ ತೆರಿಗೆಗೆ ಯಾವುದೇ ಅವಕಾಶಗಳನ್ನು ಕಂಪನಿ ಮಾಡಿಲ್ಲ.

ii) ಸೇವಾತೆರಿಗೆ ಅಧಿಕಾರಿಗಳು ಸೇವಾ ತೆರಿಗೆ ಬೇಡಿಕೆ ರೂ. 3,74,741 ಮತ್ತು ರೂ. 16,26,100ಯನ್ನು ದಿನಾಂಕ: 31.07.2017 ಮತ್ತು ದಿನಾಂಕ: 28.09.2017ರಲ್ಲಿ ಕ್ರಮವಾಗಿ, ಸೇವಾತೆರಿಗೆ ಅಕ್ಟೋಬರ್ 2011 ರಿಂದ ಮಾರ್ಚ್ 2016ರ ವರೆಗಿನ ಅವಧಿಯಲ್ಲಿ, ಕಂಪನಿಯು ಇದನ್ನು ಪ್ರತಿವಾದ ಮಾಡಿದ್ದು ಮತ್ತು ಕಸ್ಟಮ್ಸ್ ಎಕ್ಸೈಸ್ ಸರ್ವೀಸ್ ಟ್ಯಾಕ್ಸ್

ಮೇಲ್ಮನವಿ ನ್ಯಾಯಮಂಡಳಿ, ಬೆಂಗಳೂರು ಇವರ ಮುಂದೆ ಬಾಕಿ ಇದೆ ಮತ್ತು ಈ ಬೇಡಿಕೆಯ ಬಾಬ್ತು ಒಟ್ಟು ಮೊತ್ತ ರೂ. 2,39,226ವನ್ನು ದಿನಾಂಕ: 30.10.2017 ಮತ್ತು 11.12.2017 ರಂದು ಅನುಕ್ರಮವಾಗಿ ಪಾವತಿಸಲಾಗಿರುತ್ತದೆ ಮತ್ತು ಮನವಿ ವಿಲೇವಾರಿಗಾಗಿ ಬಾಕಿ ಉಳಿದಿದೆ

iii) ಸೇವಾ ತೆರಿಗೆಯ ಸಹಾಯಕ ಆಯುಕ್ತರು ದಿನಾಂಕ: 05.06.2018ರಂದು ಸೇವಾ ತೆರಿಗೆ ಅವಧಿ ಏಪ್ರಿಲ್ 2015 ರಿಂದ ಮಾರ್ಚ್ 2016ರವರೆಗೆ ಬಾಕಿ ಸೇವಾತೆರಿಗೆ ರೂ. 6,88,533ಕ್ಕೆ ಬೇಡಿಕೆ ಆದೇಶವನ್ನು ಹೊರಡಿಸಲಾಗಿದ್ದು ಇದನ್ನು ಕಂಪನಿಯು ದಿನಾಂಕ: 02.06.2018 ರಂದು ಮೇಲ್ಮನವಿ ಪ್ರಾದಿಕಾರಿಗಳ ಮುಂದೆ ಪ್ರತಿವಾದವನ್ನು ಮಂಡಿಸಿದ್ದು, ಇದು ವಿಲೇವಾರಿಗೆ ಬಾಕಿ ಉಳಿದಿದೆ.

iv) ಈ ಮೇಲೆ ತಿಳಿಸಿರುವ ವಿಷಯದ ಬಗ್ಗೆ ಲೆಕ್ಕದ ಪುಸ್ತಕದಲ್ಲಿ ಯಾವುದೇ ಅವಕಾಶಗಳನ್ನು ಮಾಡಿರುವುದಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯವು ಅರ್ಹತೆ ಆಗಿರುವುದಿಲ್ಲ

f) ಟಿಪ್ಪಣಿ 31ರ ಕ್ರ.ಸಂ. 25ರಲ್ಲಿ ತಿಳಿಸಿರುವಂತೆ, ಕರ್ನಾಟಕ ಹೌಸಿಂಗ್ ಬೋರ್ಡ್, ಯಲಹಂಕ ಇವರಿಂದ ಸ್ವೀಕರಿಸಬೇಕಾಗಿರುವ ರೂ. 3.33 ಲಕ್ಷಕ್ಕೆ ಸಂಬಂಧಿಸಿರುತ್ತದೆ. ಈ ವಿಚಾರವು 4 ವರ್ಷಗಳಿಗಿಂತಲೂ ಹೆಚ್ಚಿನ ಸಮಯದಿಂದ ಇತ್ಯರ್ಥಕ್ಕೆ ಬಾಕಿ ಇದೆ ಮತ್ತು ಕಂಪನಿಯ ಅಂತಿಮ ಬಿಲ್‌ನ ಇತ್ಯರ್ಥವನ್ನು ಕರ್ನಾಟಕ ಹೌಸಿಂಗ್ ಬೋರ್ಡ್, ಯಲಹಂಕ ಇಲ್ಲಿಯವರೆಗೂ ಮಾಡಿರುವುದಿಲ್ಲ. ಈ ವಿಷಯವು ತುಂಬಾ ದಿನಗಳಿಂದ ಬಾಕಿ ಉಳಿದಿರುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯವು ಅರ್ಹತೆ ಆಗಿರುವುದಿಲ್ಲ.

g) ಟಿಪ್ಪಣಿ 31ರ ಕ್ರ.ಸಂ. 27ರಲ್ಲಿ ತಿಳಿಸಿರುವಂತೆ, ಪಲ್ಪ್‌ವುಡ್‌ನ ಮಾರಾಟದ ಮೇಲೆ ಕಂಪನಿಯು ಅರಣ್ಯ ಅಭಿವೃದ್ಧಿ ತೆರಿಗೆಯನ್ನು (ದಿ "ಎಫ್‌ಡಿಟಿ") ವಿಧಿಸಿ ವಸೂಲು ಮಾಡುವುದಕ್ಕೆ ಸಂಬಂಧಿಸಿದಂತೆ ಕಂಪನಿಯು ಎಫ್‌ಡಿಟಿ ಯನ್ನು ಸೀನಿಯರೇಜ್ ದರದಲ್ಲಿ ಖರೀದಿ ದರದ ಮೇಲೆ ಮಾತ್ರ ಪಾವತಿಸುತ್ತಿರುವುದರಿಂದ ಎಫ್‌ಡಿಟಿ ಯನ್ನು ವಿಧಿಸದೆ ಇರುವುದು ಮತ್ತು ಅರಣ್ಯ ಇಲಾಖೆಗೆ ಕಡಿಮೆ ಪಾವತಿಸಿರುವ ಮೊಬಲಗು ರೂ. 2.20 ಕೋಟಿ ಆಗಿರುತ್ತದೆ. ಈ ವಿಚಾರವು ವಿವಿಧ ಪ್ರಾಧಿಕಾರದಲ್ಲಿ ಪರಿಶೀಲನೆಯಲ್ಲಿದ್ದು, ತೀರ್ಮಾನವು ಬಾಕಿ ಇದ್ದು, ಕಂಪನಿಯು 2013-14 ರಿಂದ ಪಲ್ಪ್‌ವುಡ್‌ನ ಮಾರಾಟದ ಮೇಲೆ ಎಫ್‌ಡಿಟಿ ಯನ್ನು ವಸೂಲಿ ಮಾಡಿದೆ ಮತ್ತು ಮಾರಾಟದ ಮೌಲ್ಯ ಮತ್ತು ಖರೀದಿ ಮೌಲ್ಯದ ನಡುವಿನ ವ್ಯತ್ಯಾಸದ ಮೊಬಲಗು ರೂ. 7,64,38,186ನ್ನು (ಹಿಂದಿನ ವರ್ಷ ರೂ. 6,30,72,086) (ನಿವ್ವಳ) ನ್ನು ಈ ವಿಚಾರದಲ್ಲಿ ಮುಂದಿನ ತೀರ್ಮಾನವನ್ನು ಕೈಗೊಳ್ಳುವವರೆಗೂ ಇತರೆ ಚಾಲ್ತಿ ಹೊಣೆಗಾರಿಕೆಯ ಅಡಿಯಲ್ಲಿ ಸೇರಿಸಲಾಗಿರುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯವು ಅರ್ಹತೆ ಆಗಿರುವುದಿಲ್ಲ.

m) ಟಿಪ್ಪಣಿ 31ರ ಕ್ರ.ಸಂ. 30ರಲ್ಲಿ ತಿಳಿಸಿರುವಂತೆ, ವಾಣಿಜ್ಯ ತೆರಿಗೆ ಪ್ರಾಧಿಕಾರವು 2010-11ರ ವರ್ಷದಲ್ಲಿ ವ್ಯಾಟ್ ಮೊಬಲಗು ರೂ. 9,35,26,331ರ ಪಾವತಿಗಾಗಿ ಡಿಮ್ಯಾಂಡ್ ಮಾಡಿರುತ್ತದೆ. ಈ ಡಿಮ್ಯಾಂಡ್ ಮೊಬಲಗು ತಪ್ಪಾಗಿ ಇರುವುದೆಂಬ ಆಧಾರದ ಮೇಲೆ ಕಂಪನಿಯು ಕರ್ನಾಟಕ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಅಪೀಲನ್ನು ದಾಖಲಿಸಿರುತ್ತದೆ ಮತ್ತು ಗೌರವಾನ್ವಿತ ಉಚ್ಚ ನ್ಯಾಯಾಲಯವು ದಿನಾಂಕ: 09.06.2017ರ ಮಧ್ಯಂತರ ಆದೇಶದಂತೆ ವಾಣಿಜ್ಯ ತೆರಿಗೆ ಪ್ರಾಧಿಕಾರಕ್ಕೆ ಆದೇಶವನ್ನು ತಿದ್ದುಪಡಿ ಮಾಡಲು ನಿರ್ದೇಶನ ನೀಡಿ, ತೆರಿಗೆ ಹೊಣೆಗಾರಿಕೆಯ ಶೇ. 50ರಷ್ಟು ಮೊಬಲಗು ರೂ. 1,89,09,362ನ್ನು ಪಾವತಿಸಲು ಕಂಪನಿಗೆ ನಿರ್ದೇಶನ ನೀಡಿದ್ದು, ಇದಕ್ಕೆ ಎದುರಾಗಿ ಕಂಪನಿಯು ರೂ. 42,54,799ನ್ನು ಪಾವತಿಸಿರುತ್ತದೆ ಮತ್ತು ಅಪೀಲಿನ ಇತ್ಯರ್ಥವನ್ನು ಬಾಕಿ ಇರುವುದರಿಂದ ಕಂಪನಿಯ ಲೆಕ್ಕಪತ್ರಗಳಲ್ಲಿ ಯಾವುದೇ ಉಪಬಂದವನ್ನು ಕಲ್ಪಿಸಿರುವುದಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯವು ಅರ್ಹತೆ ಆಗಿರುವುದಿಲ್ಲ.

n) ಸಾಂಸ್ಥಿಕ ವ್ಯವಹಾರಗಳ ಸಚಿವಾಲಯವು ನಿರ್ವಹಿಸಿದ ಮಾಸ್ಟರ್ ಡೇಟಾವನ್ನು ಅನುಸರಿಸುವಾಗ ದಿನಾಂಕ: 11.02.1994ರಂದು ವೆಚ್ಚ ರಚಿಸಿದಂತೆ ರೂ. 25.00 ಲಕ್ಷಗಳ ವೆಚ್ಚ' ತೋರಿಸಲಾಗಿದೆ. ವೆಚ್ಚಗಳ ಸ್ಥಿತಿಯನ್ನು ಯಥಾವತ್ತಾಗಿ ತೋರಿಸಲಾಗಿದೆ ಇದರಲ್ಲಿ ಯಾವುದೇ ಆಸ್ತಿಗಳಿರುವುದಿಲ್ಲ. ಕಂಪನಿಯು ತನ್ನ ಮಾಸ್ಟರ್ ಡಾಟಾವನ್ನು ನವೀಕರಿಸಿರುವುದಿಲ್ಲ. ಈ ವಿಷಯದಲ್ಲಿ ನಮ್ಮ ಅಭಿಪ್ರಾಯವು ಅರ್ಹತೆ ಆಗಿರುವುದಿಲ್ಲ.

7. **ಇತರೆ ವಿಷಯಗಳು**

ಭಾರತದಲ್ಲಿ ಸ್ಥಾಪಿಸಲ್ಪಟ್ಟಿರುವ ಮೇಲ್ಕಂಡ ಅಂಗಸಂಸ್ಥೆಯ ಹಣಕಾಸಿನ ಕೋಷ್ಟಕಗಳು 31.03.2018ರಲ್ಲಿ ಇರುವಂತೆ ಒಟ್ಟು ಆಸ್ತಿಗಳು ಮತ್ತು ಹೊಣೆಗಾರಿಕೆ ರೂ45,44,235 ಆಗಿದ್ದು, ಒಟ್ಟು ವರಮಾನವು ರೂ. 3.59 ಮತ್ತು ಆ ದಿನಾಂಕದಂದು ಇರುವ ನಿವ್ವಳ ನಗದು ಹರಿವು ಮೊಬಲಗು ರೂ. 2,073.41ನ್ನು ಪ್ರತಿನಿಧಿಸುತ್ತಿರುವುದನ್ನು ಕ್ರೋಢೀಕೃತ ಹಣಕಾಸಿನ ಕೋಷ್ಟಕದಲ್ಲಿ ಪರಿಗಣಿಸಲಾಗಿದ್ದು, ಈ ಹಣಕಾಸಿನ ಕೋಷ್ಟಕದ ಲೆಕ್ಕಪರಿಶೋಧನೆಯನ್ನು ನಾವು ನಡೆಸಿರುವುದಿಲ್ಲ.

ಈ ಹಣಕಾಸಿನ ಕೋಷ್ಟಕಗಳನ್ನು ಬೇರೆ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ನಡೆಸಿದ್ದು, ಅವರ ಲೆಕ್ಕಪರಿಶೋಧನಾ ವರದಿಯನ್ನು ಆಡಳಿತ ಮಂಡಳಿಯು ನಮಗೆ ಒಪ್ಪಿಸಿದ್ದು, ಈ ಕ್ರೋಢೀಕೃತ ಹಣಕಾಸಿನ ಕೋಷ್ಟಕದ ಮೇಲೆ ನಮ್ಮ ಅಭಿಪ್ರಾಯದಲ್ಲಿ ಇದು ಈ ಅಂಗಸಂಸ್ಥೆಗಳಿಗೆ ಸಂಬಂಧಿಸಿದಂತೆ ಮೊಬಲಗು ಮತ್ತು ಘೋಷಣೆಗಳನ್ನು ಒಳಗೊಂಡಿದ್ದು, ಕಾಯ್ದೆಯ ಕಂಡಿಕೆ 143(3) ರಂತೆ ಬೇರೆ ಲೆಕ್ಕಪರಿಶೋಧಕ ವರದಿಯ ಆಧಾರದ ಮೇಲೆ ಮಾತ್ರ ನಮ್ಮ ಹೇಳಿಕೆಗಳನ್ನು ನೀಡಿರುತ್ತೇವೆ.

ಮೇಲ್ಕಂಡಂತೆ ಕ್ರೋಢೀಕೃತ ಹಣಕಾಸಿನ ಕೋಷ್ಟಕದ ಮೇಲೆ ನಮ್ಮ ಅಭಿಪ್ರಾಯದಂತೆ, ಮತ್ತು ಈ ಕೆಳಗೆ ತಿಳಿಸಿರುವ ಕಾನೂನಾತ್ಮಕ ಮತ್ತು ನಿಯಮಾನುಸಾರ ಇತರೆ ಅಗತ್ಯತೆಗಳು ಮೇಲ್ಕಂಡ ಎಲ್ಲಾ ವಿಷಯಗಳ ಬಗ್ಗೆ ಹಣಕಾಸಿನ ಕೋಷ್ಟಕಗಳ ಮೇಲೆ ಆಡಳಿತ ಮಂಡಳಿಯು ದೃಢೀಕರಿಸಿರುವ ಬೇರೆ ಲೆಕ್ಕಪರಿಶೋಧಕರ ವರದಿಯ ಮೇಲೆ ನಮ್ಮ ಅವಲಂಬನೆಯು ಮಾರ್ಪಾಟಾಗಿರುವುದಿಲ್ಲ.

ಕಾನೂನಾತ್ಮಕ ಮತ್ತು ನಿಯಮಾನುಸಾರ ಇತರೆ ಅಗತ್ಯತೆಗಳ ಬಗ್ಗೆ ವರದಿ

8. ಬೇರೆ ಲೆಕ್ಕಪರಿಶೋಧಕರ ವರದಿಯ ಆಧಾರದ ಮೇಲೆ ಕಾಯ್ದೆ 143 (3) ಪ್ರಕಾರ ಪ್ರತ್ಯೇಕ ಹಣಕಾಸು ಹೇಳಿಕೆಗಳು ಮತ್ತು ಅಂಗಸಂಸ್ಥೆ ಕಂಪನಿಯ ಇತರೆ ಹೇಳಿಕೆಗಳು ಪ್ಯಾರಾ 7ರ ಅಡಿಯಲ್ಲಿ ಇತರೆ ವರದಿಯಲ್ಲಿ ನಾವು ವರದಿ ಮಾಡಿದ ಮೇಲೆ ಅನ್ವಯವಾಗುವ ಮಟ್ಟಿಗೆ:

a) ನಮ್ಮ ಸಂಪೂರ್ಣ ತಿಳುವಳಿಕೆ ಹಾಗೂ ನಂಬಿಕೆಯಂತೆ ಲೆಕ್ಕ ಪರಿಶೋಧನಾ ಪ್ರಕ್ರಿಯೆಗೆ ಅವಶ್ಯಕವಾದ ಎಲ್ಲಾ ಮಾಹಿತಿಗಳನ್ನು ಹಾಗೂ ವಿಚಾರಣೆಗಳನ್ನು ಪಡೆದಿರುತ್ತೇವೆ:

b) ನಮ್ಮ ಅಭಿಪ್ರಾಯದಂತೆ, ಮೇಲಿನ ಕಂಡಿಕೆ ಸಂಖ್ಯೆ. 4ರಲ್ಲಿ ಲೆಕ್ಕಪತ್ರ ಪುಸ್ತಕಗಳಲ್ಲಿ ಗಮನಿಸಿರವಂತೆ ಪರಿಣಾಮಗಳನ್ನು ಹೊರತುಪಡಿಸಿ ಕಂಪನಿಯು ನಿಯಮಾನುಸಾರ ಅಗತ್ಯವಿರುವ ಸಮರ್ಪಕ ಲೆಕ್ಕಪತ್ರ ದಾಖಲೆಗಳನ್ನು ಇಟ್ಟಿರುತ್ತದೆ:

c) ಆಸ್ತಿ ಹೊಣೆ ತಃಖ್ತೆಗಳನ್ನು, ಲಾಭ ಮತ್ತು ನಷ್ಟಗಳ ತಃಖ್ತೆಗಳನ್ನು ಮತ್ತು ಈ ವರದಿಯಲ್ಲಿ ನಾವು ನಿರ್ವಹಿಸಿರುವ ನಗದು ಹರಿವು ಪಟ್ಟಿಗಳು ಲೆಕ್ಕಪತ್ರ ಪುಸ್ತಕಗಳೊಂದಿಗೆ ಹೊಂದಾಣಿಕೆಯಾಗುತ್ತದೆ.

d) ಮೇಲ್ಕಂಡಂತೆ ಕಂಡಿಕೆ 4ರಲ್ಲಿ ನಾವು ನೀಡಿರುವ ಅರ್ಹ ಅಭಿಪ್ರಾಯಕ್ಕೆ ಆಧಾರಗಳನ್ನು ಹೊರತುಪಡಿಸಿ, ನಮ್ಮ ಅಭಿಪ್ರಾಯದಲ್ಲಿ, ಮೇಲೆ ಹೇಳಿದ ಹಣಕಾಸಿನ ಕೋಸ್ಟಕಗಳು ಕಾಯ್ದೆಯ ಕಂಡಿಕೆ 133 ಹಾಗೂ ಕಂಪನಿಗಳ (ಲೆಕ್ಕಪತ್ರಗಳು) ನಿಯಮ, 2014ರ ನಿಯಮ 7ನ್ನು ಓದಿಕೊಂಡಂತೆ ಅದರಲ್ಲಿ ಉಲ್ಲೇಖಿಸಿರುವ ಲೆಕ್ಕಪತ್ರ ಮಾನಕಗಳ ಅನುಸಾರವಾಗಿರುತ್ತದೆ:

e) ನಮಗೆ ನೀಡಲಾಗಿರುವ ಮಾಹಿತಿಗಳು ಮತ್ತು ವಿವರಣೆಗಳಂತೆ, ಕಂಪನಿಯು ಸರ್ಕಾರದ ಕಂಪನಿಯಾಗಿರುತ್ತದೆ: ಆದ್ದರಿಂದ ಭಾರತ ಸರ್ಕಾರವು ದಿನಾಂಕ: 21.10.2013 ರಂದು ಹೊರಡಿಸಿರುವ ಗೆಜೆಟ್ ಅಧಿಸೂಚನೆ ಸಂಖ್ಯೆ, ಜಿಎಸ್‌ಆರ್ 829(ಇ)ಯಂತೆ ಕಂಪನಿಗಳ ಕಾಯ್ದೆ, 2013ರ ಕಂಡಿಕೆ 164(2)ರ ಉಪಬಂದಗಳು ಕಂಪನಿಗೆ ಅನ್ವಯವಾಗುವುದಿಲ್ಲ:

f) ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಯ ಸಮರ್ಪಕತೆಗೆ ಸಂಬಂಧಿಸಿದಂತೆ ಮತ್ತು ಅಂತಹ ನಿಯಂತ್ರಣಗಳ ಕಾರ್ಯ ನಿರ್ವಾಹಣಾ ಪರಿಣಾಮದ ವಿವರಗಳ ಬಗ್ಗೆ ನಮ್ಮ ಪ್ರತ್ಯೇಕ ವರದಿ "ಅನುಬಂಧ-ಎ" ಯನ್ನು ಗಮನಿಸಿ. ಇದು ವರದಿ ಮಾಡುವ ಕಂಪನಿಯ ಅಂಗಸಂಸ್ಥೆಯ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಆಧಾರದ ಮೇಲೆ ಇರುತ್ತದೆ. ಆಂತರಿಕ ಹಣಕಾಸು ನಿಯಂತ್ರಣದ ಮೇಲೆ ಆಂತರಿಕ ನಿಯಂತ್ರನ ವ್ಯವಸ್ಥೆಯ ಸಮರ್ಪಕತೆ ಮತ್ತು ನಿರ್ವಹಣಾ ಪರಿಣಾಮದ ಮೇಲೆ ನಮ್ಮ ಪರಿಷ್ಕರಣೆಗೊಳ್ಳುವುದಿಲ್ಲ ಮತ್ತು

g) ಲೆಕ್ಕ ಪರಿಶೋಧಕರ ವರದಿಯಲ್ಲಿ ಸೇರಿರುವ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಕಂಪನೀಸ್ (ಆಡಿಟ್ ಮತ್ತು ಆಡಿಟರ್ಸ್) ನಿಯಮ, 2014ರಂತೆ, ನಮ್ಮ ಅಭಿಪ್ರಾಯದಂತೆ ಹಾಗೂ ನಮ್ಮ ಗರಿಷ್ಟ ಮಾಹಿತಿಯಂತೆ ಮತ್ತು ನಮಗೆ ನೀಡಲಾಗಿರುವ ವಿವರಣೆಗಳಂತೆ, ಮತ್ತು ಪ್ರತ್ಯೇಕ ಹಣಕಾಸಿನ ಕೋಷ್ಟಕಗಳ ಮೇಲೆ ಮತ್ತು ಅಂಗಸಂಸ್ಥೆಯ ಇತರೆ ಹಣಕಾಸಿನ ಮಾಹಿತಿಗಳ ಮೇಲೆ ಬೇರೆ ಲೆಕ್ಕಪರಿಶೋಧಕರು ನೀಡಿರುವ ವರದಿಯನ್ನು ಪರಿಗಣಿಸಿ ಹಾಗೂ "ಇತರೆ ವಿಷಯಗಳು" ಕಂಡಿಕೆಗಳಲ್ಲಿ ತಿಳಿಸಿರುವುದನ್ನು ಗಮನಿಸಿ ನಾವು ವರದಿ ಮಾಡುವುದೇನೆಂದರೆ:

(i) ಕಂಪನಿಯ ಹಣಕಾಸಿನ ಸ್ಥಿತಿಯ ಮೇಲೆ ಪರಿಣಾಮ ಬೀರಬಲ್ಲಂತಹ ಯಾವುದೇ ತಕರಾರುಗಳೂ ಕಂಪನಿಯಲ್ಲಿ ಬಾಕಿ ಇರುವ ಬಗ್ಗೆ ಕ್ರೊಡೀಕೃತ ಆರ್ಥಿಕ ವಿವರಣಾ ಪಟ್ಟಿಯಲ್ಲಿ ತಿಳಿಸಿದೆ.

(ii) ಉತ್ಪನ್ನದ ಒಪ್ಪಂದಗಳು ಸೇರಿದಂತೆ ನೈಜ ಮುನ್ನೋಟದ ನಷ್ಟಗಳಿಗೆ ಕಾರಣವಾಗುವಂತಹ ಯಾವುದೇ ರೀತಿಯ ದೀರ್ಘಾವಧಿ ಒಪ್ಪಂದಗಳನ್ನು ಕಂಪನಿಯು ಮಾಡಿಕೊಂಡಿರುವುದಿಲ್ಲ.

(iii) ಕಂಪನಿಯು ಹೂಡಿಕೆದಾರರ ವಿದ್ಯಾಭ್ಯಾಸ ಮತ್ತು ಸಂರಕ್ಷಣಾ ನಿಧಿಗೆ ಯಾವುದೇ ಮೊಬಲಗನ್ನು ವರ್ಗಾವಣೆ ಮಾಡಿರುವ ಸಂದರ್ಭಗಳು ಹಿಡುವಳಿ ಮತ್ತು ಅಂಗಸಂಸ್ಥೆಯಲ್ಲಿ ದಿನಾಂಕ: 31.03.2018ಕ್ಕೆ ಕಂಡು ಬಂದಿಲ್ಲ.

h) ಕಂಪನಿಗಳ ಕಾಯ್ದೆ, 2013ರ ಕಂಡಿಕೆ 143ರ ಉಪ-ಕಂಡಿಕೆ (5)ರ ಅಡಿಯಲ್ಲಿ ನಿಬಂಧನೆಯಂತೆ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ ರವರು ಹೊರಡಿಸಿರುವ ನಿರ್ದೇಶನದಲ್ಲಿ ಸ್ಪಷ್ಟಪಡಿಸಿರುವಂತೆ ಪರಿಶೀಲಿಸಬೇಕಾಗಿರುವ ಪ್ರದೇಶದ ವಿವರಣೆಯಂತೆ ನಾವು ಅನುಬಂಧ- B ಯಲ್ಲಿರುವಂತೆ ಪಟ್ಟಿಯನ್ನು ನೀಡಿರುತ್ತೇವೆ.

ದಿನಾಂಕ: 07.12.2018
ಸ್ಥಳ : ಬೆಂಗಳೂರು

ಪಿಎನ್‌ಆರ್ & ಕಂ.,
ಸನ್ನದು ಲೆಕ್ಕಿಗರ ಪರವಾಗಿ
ಸಂಸ್ಥೆ ನೋಂದಣಿ ಸಂಖ್ಯೆ : 002495S
ಸಹಿ/-
(ಗುರುಪ್ರಸಾದ್ ಭಾದ್ಯ)
ಪಾಲುದಾರರು
ಸದಸ್ಯತ್ವದ ಸಂಖ್ಯೆ: 234052

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ-A

(ನಮ್ಮ ಇದೇ ದಿನಾಂಕದ ವರದಿಯ ಕಂಡಿಕೆ 8(f)ರಲ್ಲಿ ಉಲ್ಲೇಖಿಸಿರುವಂತೆ)

ಕಂಪನಿಗಳ ಕಾಯ್ದೆ 2013ರ ("ದಿ ಆಕ್ಟ್") ಕಂಡಿಕೆ 143, ಉಪ ಕಂಡಿಕೆ 3(i) ರಂತೆ ಆಂತರಿಕ ಹಣಕಾಸಿನ ನಿಯಂತ್ರಣದ ಮೇಲೆ ವರದಿ

1. ನಾವು, 31 ನೇ ಮಾರ್ಚ್ 2018ರಲ್ಲಿ ಇರುವಂತೆ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತದ ("ದಿ ಕಂಪನಿ") ಹಣಕಾಸಿನ ವರದಿ ಮಾಡುವಿಕೆಯ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಬಗ್ಗೆ ಆ ದಿನಾಂಕದಂದು ಕೊನೆಯಾಗುವ ವರ್ಷದ ಉಪಸಂಸ್ಥೆಯ ಕೋಷ್ಟಕದ ಸಂಯೋಗದೊಂದಿಗೆ ಮತ್ತು ಭಾರತದಲ್ಲಿ ಸ್ಥಾಪಿತಗೊಂಡ, ಆ ದಿನಕ್ಕನುಗುಣವಾಗಿ ಲೆಕ್ಕಪರಿಶೋಧನೆ ಮಾಡಿರುತ್ತೇವೆ.

ಆಂತರಿಕ ಹಣಕಾಸಿನ ನಿಯಂತ್ರಣಗಳಿಗೆ ಆಡಳಿತ ವರ್ಗದ ಜವಾಬ್ದಾರಿ

2. ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣ ವರದಿಗಳಿಗೆ ಸಂಬಂಧಿಸಿದಂತೆ ಇನ್‌ಸ್ಟಿಟ್ಯೂಟ್ ಆಫ್ ಚಾಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಇವರು ಹೊರಡಿಸಿರುವ ಮಾರ್ಗದರ್ಶಿ ಟಿಪ್ಪಣಿಯಂತೆ ಕಂಪನಿಯ ಹಣಕಾಸಿನ ವರದಿ ಮಾಡುವಿಕೆ ನೀತಿಯ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಯನ್ನು ಸ್ಥಾಪಿಸಿ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣವನ್ನು ಕಾಪಾಡಿಕೊಂಡು ಬರುವುದು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿರುತ್ತದೆ. ಕಂಪನಿಯ ಕಾರ್ಯನೀತಿಯನ್ನು ಪಾಲಿಸಿಕೊಂಡು ಹೋಗುವುದು, ವಂಚನೆಗಳು ಮತ್ತು ಲೋಪಗಳನ್ನು ತಡೆಗಟ್ಟುವುದು ಮತ್ತು ಕಂಡುಹಿಡಿಯುವುದು, ಲೆಕ್ಕಪತ್ರಗಳ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ ಮತ್ತು ಕಂಪನಿಗಳ ಕಾಯ್ದೆ 2013ರ ಪ್ರಕಾರ ಕೇಳಿರುವಂತೆ ಕ್ಲುಪ್ತ ಸಮಯದಲ್ಲಿ ನಂಬಲರ್ಹ ಹಣಕಾಸಿನ ಕೋಷ್ಟಕಗಳನ್ನು ಸಿದ್ದಪಡಿಸುವುದು ಈ ಜವಾಬ್ದಾರಿಗಳಲ್ಲಿ ಸೇರಿರುತ್ತದೆ.

ಲೆಕ್ಕಪರಿಶೋಧಕರ ಜವಾಬ್ದಾರಿ

3. ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಕಂಪನಿಯ ಹಣಕಾಸಿನ ಪಟ್ಟಿಯ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಮೇಲೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಇನ್‌ಸ್ಟಿಟ್ಯೂಟ್ ಆಫ್ ಚಾಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಇವರು ಹೊರಡಿಸಿರುವ ಮಾರ್ಗದರ್ಶಿ ಟಿಪ್ಪಣಿ ಆಡಿಟ್ ಆಫ್ ಇಂಟರ್ನಲ್ ಫೈನಾನ್ಷಿಯಲ್ ಕಂಟ್ರೋಲ್ಸ್ ಓವರ್ ಫೈನಾನ್ಷಿಯಲ್ ರಿಪೋರ್ಟಿಂಗ್ ("ದಿ ಗೈಡೆನ್ಸ್ ನೋಟ್") ಮತ್ತು ಐಸಿಎಐ ಅವರು ಹೊರಡಿಸಿರುವ ಲೆಕ್ಕಪರಿಶೋಧನಾ ಮಾನಕಗಳು ಎರಡನ್ನೂ ಸೇರಿಸಿ ಮತ್ತು ಕಂಪನಿಗಳ ಕಾಯ್ದೆ 2013ರ ಕಂಡಿಕೆ 143(10)ನ್ನು ಆಂತರಿಕ ಹಣಕಾಸಿನ ನಿಯಂತ್ರಣ ಲೆಕ್ಕಪರಿಶೋಧನೆಗೆ ಅನ್ವಯಿಸುವಷ್ಟು ಪರಿಗಣಿಸಿ ನಿರ್ಧಿಷ್ಟವಾಗಿ ನಿಗಧಿಪಡಿಸಿರುವಂತೆ ಮತ್ತು ಲೆಕ್ಕಪರಿಶೋಧನಾ ಮಾನಕಗಳಿಗೆ ಅನುಸಾರವಾಗಿ ನಾವು ಲೆಕ್ಕಪರಿಶೋಧನೆಯನ್ನು ನಿರ್ವಹಿಸುವುದು ನಮ್ಮ ಜವಾಬ್ದಾರಿಯಾಗುತ್ತದೆ. ಅಂತಹ ಮಾನಕಗಳು ಮತ್ತು ಮಾರ್ಗದರ್ಶಿ ಟಿಪ್ಪಣಿಗಳ ಅನ್ವಯ ನೈತಿಕ ಅಗತ್ಯತೆಗಳು ಮತ್ತು ಯೋಜನೆ ಮತ್ತು ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಧಿಸಲ್ಪಟ್ಟಿವೆಯೇ ಮತ್ತು ಮುಂದುವರಿಸಿಕೊಂಡು ಹೋಗಲಾಗಿದೆಯೇ ಎಂಬ ಬಗ್ಗೆ ಸಮಂಜಸವಾದ ಭರವಸೆಯನ್ನು ಹೊಂದುವುದರ ಜೊತೆಗೆ ಎಲ್ಲ ಭೌತಿಕ ಅಂಶಗಳಲ್ಲೂ ಅಂತಹ ಆಂತರಿಕ ನಿಯಂತ್ರಣ ವ್ಯವಸ್ಥೆಯು ಕಾರ್ಯ ನಿರ್ವಹಿಸಲ್ಪಡುತ್ತದೆಯೋ ಎಂಬ ಬಗ್ಗೆ ಕೂಡಾ ಖಚಿತಪಡಿಸಿಕೊಳ್ಳುವುದು ಅಗತ್ಯವಾಗಿರುತ್ತದೆ.

4. ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಯ ಸಮರ್ಪಕತೆ ಬಗ್ಗೆ ಲೆಕ್ಕಪರಿಶೋಧನಾ ಸಾಕ್ಷ್ಯಗಳನ್ನು ಪಡೆಯುವುದು ಮತ್ತು ಅವುಗಳ ಪರಿಣಾಮಕಾರೀ ಕಾರ್ಯ ನಿರ್ವಹಣೆಯನ್ನು ದೃಢೀಕರಿಸುವುದು ನಮ್ಮ ಲೆಕ್ಕಪರಿಶೋಧನೆಯಲ್ಲಿ ಸೇರಿದೆ. ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಲೆಕ್ಕ ಪರಿಶೋಧನೆಯಲ್ಲಿ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣವನ್ನು ಸಾಧಿಸುವುದು ಮತ್ತು ಅರ್ಥಮಾಡಿಕೊಳ್ಳುವುದು, ಇರಬಹುದಾದ ಭೌತಿಕ ದೌರ್ಬಲ್ಯಗಳ ಅಪಾಯಗಳನ್ನು ನಿರ್ಣಯಿಸುವುದು, ನಿರ್ಣಯಿಸಲ್ಪಟ್ಟ ದೌರ್ಬಲ್ಯಗಳನ್ನು ಪರೀಕ್ಷಿಸಿ ವಿನ್ಯಾಸದ ಮೌಲ್ಯಮಾಪನ ಮಾಡಿ ಪರಿಣಾಮಕಾರೀ ಕಾರ್ಯ ನಿರ್ವಹಣೆಯು ಆಂತರಿಕ ನಿಯಂತ್ರಣ ವ್ಯವಸ್ಥೆಯು ನಮ್ಮ ಲೆಕ್ಕಪರಿಶೋಧನೆಯಲ್ಲಿ ಸೇರಿದೆ. ಆಯ್ಕೆ ಮಾಡಲ್ಪಟ್ಟ ಈ ಪದ್ದತಿಯು ವಂಚನೆಯ ಅಥವಾ ತಪ್ಪಿನ ಕಾರಣದಿಂದ ಹಣಕಾಸಿನ ತಪ್ಪು ಹೇಳಿಕೆಗಳ ಮೌಲ್ಯಮಾಪನದ ಅಪಾಯವನ್ನು ಅಂದಾಜಿಸುವುದೂ ಸೇರಿದಂತೆ ಲೆಕ್ಕಪರಿಶೋಧಕರ ತೀರ್ಮಾನವನ್ನು ಅವಲಂಭಿಸಿರುತ್ತದೆ.

5. ನಾವು ಪಡೆದಿರುವ ಲೆಕ್ಕಪರಿಶೋಧನಾ ಸಾಕ್ಷ್ಯಗಳು, ಕಂಪನಿಯ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಬಗ್ಗೆ ಲೆಕ್ಕಪರಿಶೋಧನಾ ಅಭಿಪ್ರಾಯ ನೀಡಲು ಸಾಕಷ್ಟು ಸೂಕ್ತ ಆಧಾರ ನೀಡುತ್ತದೆ ಎಂದು ನಾವು ನಂಬುತ್ತೇವೆ.

ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಅರ್ಥ

6. ಒಂದು ಕಂಪನಿಯ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣವು ಹಣಕಾಸಿನ ಸ್ಥಿತಿಯ ಬಗ್ಗೆ ವಿಶ್ವಾಸಾರ್ಹ ವರದಿ ಮಾಡುವಿಕೆಯ ಬಗ್ಗೆ ಯೋಗ್ಯವಾದ ಭರವಸೆಯನ್ನು ಒದಗಿಸುವುದು ಮತ್ತು ಸಾಮಾನ್ಯವಾಗಿ ಒಪ್ಪಲ್ಪಟ್ಟ ಲೆಕ್ಕಪತ್ರ ಸಿದ್ಧಾಂತಗಳಂತೆ ಬಾಹ್ಯ ಉದ್ದೇಶಗಳಾಗಾಗಿ ಹಣಕಾಸಿನ ಕೋಷ್ಟಕಗಳನ್ನು ಸಿದ್ದಪಡಿಸಲು ವಿನ್ಯಾಸಗೊಳಿಸಲಾಗಿರುವ ಕಾರ್ಯ ವಿಧಾನವಾಗಿರುತ್ತದೆ. ಕಂಪನಿಯ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದಲ್ಲಿ ಈ ಕೆಳಕಂಡ ನೀತಿ ಮತ್ತು ವಿಧಾನಗಳನ್ನು ಒಳಗೊಂಡಿದ್ದು, ಅವುಗಳು: (1) ಕಂಪನಿಯ ಆಸ್ತಿಗಳ ವ್ಯವಹಾರ ಮತ್ತು ವಿಲೇವಾರಿಯನ್ನು ನಿಖರವಾಗಿ ಮತ್ತು ನ್ಯಾಯಯುತವಾಗಿ ಪ್ರತಿಬಿಂಬಿಸಲು ಪೂರಕವಾದ, ಸಾಕಷ್ಟು ವಿವರವಾದ ದಾಖಲೆ ಪತ್ರಗಳನ್ನು ನಿರ್ವಹಿಸುವುದು: (2) ಸಾಮಾನ್ಯವಾಗಿ ಒಪ್ಪಲ್ಪಟ್ಟ ಲೆಕ್ಕಪತ್ರ ಮಾನಕಗಳಿಗೆ ಅನುಸಾರವಾಗಿ ಹಣಕಾಸಿನ ಕೋಷ್ಟಕಗಳನ್ನು ಸಿದ್ಧಪಡಿಸಲು ಅನುವಾಗುವಂತೆ ವ್ಯವಹಾರಗಳನ್ನು ದಾಖಲಿಸುವ ಸೂಕ್ತ ಭರವಸೆ ನೀಡುವುದೂ ಅಲ್ಲದೆ, ಕಂಪನಿಯ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ಕಂಪನಿಯ ಆಡಳಿತ ಮಂಡಳಿ ಮತ್ತು ನಿರ್ದೇಶಕರ ಒಪ್ಪಿಗೆಯ ಅನುಸಾರ ಮಾತ್ರ ಮಾಡುವ ವ್ಯವಸ್ಥೆ ಹೊಂದಿರುವುದು ಮತ್ತು (3) ಕಂಪನಿಯ ಹಣಕಾಸಿನ ಕೋಷ್ಟಕಗಳ ಮೇಲೆ ಪರಿಣಾಮ ಬೀರುವಂತಹ ಕಂಪನಿಗಳ ಆಸ್ತಿಗಳನ್ನು ಅನಧಿಕೃತವಾಗಿ ಸ್ವಾಧೀನಪಡಿಸಿಕೊಳ್ಳುವಿಕೆ, ಉಪಯೋಗಿಸಿಕೊಳ್ಳುವಿಕೆ, ಅಥವಾ ವಿಲೇವಾರಿಯನ್ನು ತಡೆಯುವುದು ಮತ್ತು ಸಕಾಲದಲ್ಲಿ ಕಂಡುಹಿಡಿಯುವ ಬಗ್ಗೆ ವಿವೇಚನಾಯುಕ್ತ ಭರವಸೆಯನ್ನು ನೀಡುವುದು.

ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಅಂತರ್ಗತ ಮಿತಿಗಳು

7. ಒಳಸಂಚೂ ಸೇರಿದಂತೆ ಅಥವಾ ನಿಯಂತ್ರಣಗಳ ಮೇಲೆ ಅಸಮರ್ಪಕ ಆಡಳಿತ ವ್ಯವಸ್ಥೆ ಸವಾರಿ ಮಾಡುವುದು, ದೋಷಗಳಿಂದಾಗಿ ಅಥವಾ ವಂಚನೆಗಳಿಂದಾಗಿ ಭೌತಿಕ ತಪ್ಪು ಹೇಳಿಕೆಗಳು ಕಾಣಿಸಿಕೊಂಡು ಪತ್ತೆ ಮಾಡಲಾಗದೇ ಇರುವುದು, ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಅಂತರ್ಗತ ಮಿತಿಗಳಾಗಿರುತ್ತವೆ. ಅಲ್ಲದೆ, ಭವಿಷ್ಯದ ಅವಧಿಗಳಿಗೆ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಭವಿಷ್ಯದ ಅಂದಾಜು ಮೌಲ್ಯಮಾಪನವು ಅಪಾಯಕ್ಕೆ ಸಿಲುಕುವ ಸಾಧ್ಯತೆ ಇರುತ್ತದೆ. ಏಕೆಂದರೆ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣವು ಪರಿಸ್ಥಿತಿಯ ಬದಲಾವಣೆಗಳಿಂದಾಗಿ ಅಸಮರ್ಪಕವಾಗಬಹುದು ಅಥವಾ ನೀತಿ ಅಥವಾ ಪದ್ಧತಿಗಳು ಅನುಸರಿಸುವಿಕೆಯ ಮಟ್ಟವು ಕ್ಷೀಣಿಸುವ ಸಾಧ್ಯತೆಯೂ ಇರುತ್ತದೆ.

ಪರಿಣಿತ ಅಭಿಪ್ರಾಯ

8. ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಂತೆ ಮತ್ತು ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ 31.03.2018ರಲ್ಲಿ ಇರುವಂತೆ ಈ ಕೆಳಕಂಡ ವಾಸ್ತವಿಕ ದೌರ್ಬಲ್ಯಗಳನ್ನು ನಾವು ಗುರುತಿಸಿರುತ್ತೇವೆ.

a) ಈ ಕೆಳಕಂಡ ವಿಷಯಗಳಲ್ಲಿ ಲೆಕ್ಕಪತ್ರಗಳಲ್ಲಿನ ಶಿಲ್ಕುಗಳಿಗೆ ದೃಢೀಕರಣವನ್ನು ಕಾಲಕಾಲಕ್ಕೆ ಪಡೆಯುವ ಮತ್ತು ಅವುಗಳ ಪುನರ್ ಪರಿಶೀಲನೆಯನ್ನು ಮಾಡುವ ವ್ಯವಸ್ಥೆ ಇರುವುದಿಲ್ಲ.

1. ಬ್ಯಾಂಕ್ ಶಿಲ್ಕುಗಳು
2. ವ್ಯವಹಾರಿಕ ಸ್ವೀಕಾರಾರ್ಹವಾದವುಗಳು
3. ವ್ಯಾವಹಾರಿಕ ಪಾವತಿಸತಕ್ಕವುಗಳು
4. ಗ್ರಾಹಕರಿಂದ ಮುಂಗಡ
5. ಸಾಲಗಳು ಮತ್ತು ಮುಂಗಡಗಳು
6. ಅಂತರ್‌ಘಟಕ ವಹಿವಾಟುಗಳು

b) ಬಿಲ್ಲುಗಳನ್ನು ಗಣನೆಗೆ ತೆಗೆದುಕೊಳ್ಳುವ ವ್ಯವಸ್ಥೆ ಇಲ್ಲ ಮತ್ತು ಸ್ವೀಕರಿಸಿದಾಗ ಮತ್ತು ಅನೇಕ ಸಂದರ್ಭಗಳಲ್ಲಿ, ಬಿಲ್ಲುಗಳನ್ನು ಲೆಕ್ಕಹಾಕುವಲ್ಲಿ ವಿಳಂಬವಾಗಿದ್ದವು, ಪ್ರಸ್ತುತ ಬಿಲ್ಲುಗಳನ್ನು ಸ್ವೀಕರಿಸಿದ ನಂತರ ಮತ್ತು ಹೊಣೆಗಾರಿಕೆಯನ್ನು ಸ್ಥಾಪಿಸುವ ಬದಲು, ಅನುಮೋದನೆಯನ್ನು ಸಲ್ಲಿಸುವ ಮತ್ತು ಪಡೆದುಕೊಳ್ಳುವಲ್ಲಿ ಪ್ರಕ್ರಿಯೆಗೊಳಿಸಿದ ನಂತರ ಬಿಲ್ಲುಗಳನ್ನು ಗಣನೆಗೆ ತೆಗೆದಕೊಳ್ಳಲ್ಪಡುತ್ತವೆ. ಪರಿಣಾಮವಾಗಿ, ಅಂಗೀಕಾರಗಳು ಎಲ್ಲಿಯವರೆಗೆ ದೊರೆಯದಿದ್ದಲ್ಲಿ, ಈ ಬಿಲ್ಲುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗಲಿಲ್ಲ. ಇದರಿಂದಾಗಿ ಅದು ಮುಂಚಿನ ಅವಧಿಗೆ ಖರ್ಚು ಎಂದಾಗುತ್ತದೆ.

c) ಕ್ರೀಡಾ ಬಿಲ್ಲುಗಳಿಗೆ ಸಮರ್ಥ ಅಧಿಕಾರಿಯ ಅನುಮೋದನೆ ಇರುವ ಬಗ್ಗೆ ಲಭ್ಯಪಡಿಸಿರುವುದಿಲ್ಲ

d) ಮೈಸೂರು ಘಟಕದಲ್ಲಿ ಜರ್ನಲ್ ವೋಚರಗಳನ್ನು (Journal Vouchers) ನಗದು ವಹಿವಾಟುಗಳಿಗೆ ಪೋಸ್ಟ್ ಮಾಡಲು ಬಳಸಲಾಗುತ್ತಿದೆ.

e) ಮಂಗಳೂರು ಘಟಕದಲ್ಲಿ ದಿನಾಂಕ: 17.03.2018 ರಂದು ಪೀಠೋಪಕರಣಗಳಿಗಾಗಿ ಪಡೆದ ಮುಂಗಡ ರೂ. 2,16,900 ಅನ್ನು ಆಧರಿಸಿ ಪೀಠೋಪಕರಣಗಳು ಮಾರಾಟವಾಗಿದೆ ಎಂದು ಗುರುತಿಸಲಾಗಿದೆ. ಪೀಠೋಪಕರಣಗಳ ಖರೀದಿ ಇಲ್ಲದಿದ್ದರೂ ಈ ರೀತಿ ಮಾರಾಟವನ್ನು ತೋರಿಸಿರುವ ಬಗ್ಗೆ ಗಮನಕ್ಕೆ ತಂದಾಗ ಪೀಠೋಪಕರಣಗಳ ಖರೀದಿ ಮಾಡಲಾಗಿದೆ ಎಂದು ತೋರಿಸಲಾಗಿದೆ.

f) ಹಿಂದಿನ ವರ್ಷದಂತೆ ಪಟ್ಟಿಗಳನ್ನು ಸ್ಥಿರವಾಗಿ ಮೌಲೀಕರಿಸಲಾಗಿದ್ದರೂ ಸಹ, ಕಾರ್ಯ ನಿರ್ವಾಹಕ ಮಂಡಳಿಯು ಪಲ್ಪ್‌ವುಡ್ ಮತ್ತು ಉರುವಲು ಕಟ್ಟಿಗೆಯ ಮೌಲ್ಯಮಾಪನಕ್ಕೆ ಸ್ಪಷ್ಟವಾದ ನೀತಿಯನ್ನು ಹೊಂದಿರಬೇಕಾಗುತ್ತದೆ ಏಕೆಂದರೆ ರಾಯಲ್ಟಿಯನ್ನು ಘನ ಮೀಟರ್‌ನ ಆಧಾರದ ಮೇಲೆ ಪರಿಗಣಿಸಿ ಮಾರಾಟವನ್ನು ಮೆಟ್ರಿಕ್ ಟನ್ ಆಧಾರದ ಮೇಲೆ ಪರಿಗಣಿಸಿ ಅಂತಿಮ ದಾಸ್ತಾನಿನ ಮೌಲ್ಯಮಾಪನಕ್ಕೆ ಕಾರಣವಾಗಿದ್ದರೆ, ಉಳಿತಾಯವು ನಿಶ್ಚಿತ ವೆಚ್ಚಕ್ಕೆ ನಿಯೋಜಿಸಲಾಗುವುದಿಲ್ಲ. ತಯಾರಿಕಾ ವೆಚ್ಚಗಳನ್ನು ನಿಜವಾಗಿ ಮಾರಾಟವಾದ ಪರಿಮಾಣಕ್ಕೆ ಪರಿಗಣಿಸುವ ಬದಲು ಘನ ಮೀಟರ್ ನಿಂದ ಮೆಟ್ರಿಕ್ ಟನ್‌ಗೆ ಪರಿವರ್ತಿಸಿದ ಪರಿಮಾಣದಂತೆ ಪಾವತಿಸಲು ಪ್ರಾದೇಶಿಕ ವ್ಯವಸ್ಥಾಪಕರು, ಬೆಂಗಳೂರಿನಲ್ಲಿ ಪಾಲಿಸಿದಂತೆ, ಅಂತೆಯೇ ನೀತಿಯಲ್ಲಿ ವಿಕಸಿಗೊಳ್ಳಬೇಕಾಗಿರುತ್ತದೆ.

g) ಸ್ಥಿರ ಠೇವಣಿಗಳ ರಿಜಿಸ್ಟರನ್ನು ನಿರ್ವಹಿಸಿರುವುದಿಲ್ಲ

h) ಲೆಕ್ಕಪತ್ರಗಳ ಶಿಲ್ಕುಗಳನ್ನು ಕಾಲಕಾಲಕ್ಕೆ ಪರಿಶೀಲನೆ ನಡೆಸದೇ ಇರುವುದರಿಂದ ಲೆಕ್ಕದ ಪುಸ್ತಕಗಳಲ್ಲಿ ಬಹಳ ಕಾಲದಿಂದ ಬಾಕಿ ಇರುವ ಹಲವಾರು ವಿಷಯಗಳನ್ನು ಹಣಕಾಸಿನ ಕೋಷ್ಟಕಗಳಲ್ಲಿ ಪ್ರತೀ ವರ್ಷವೂ ಸತತವಾಗಿ ಪುನರಾವರ್ತನೆಯೊಂದಿಗೆ ಘೋಷಿಸಲ್ಪಟ್ಟಿರುತ್ತದೆ.

i) ದೀರ್ಘಕಾಲದಿಂದ ಬಾಕಿ ನಿಂತಿರುವ ಬಾಕಿಗಳ ವಸೂಲಿಗೆ ಅನುಗುಣವಾಗುವಂತೆ, ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಯನ್ನು ಬಲಪಡಿಸಬೇಕಾಗಿದ್ದು, ಅಂತಹ ಬಾಕಿಗಳ ವಸೂಲಿಗೆ ಕೈಗೊಳ್ಳಲಾಗಿರುವ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಬೇಕಾಗಿರುತ್ತದೆ.

j) ಟ್ಯಾಲಿ ಲೆಕ್ಕಹಾಕುವಿಕೆಗೆ ಸಂಬಂಧಿಸಿದಂತೆ ಮಾಹಿತಿ ಪಡೆಯುವ ಹಕ್ಕುಗಳನ್ನು ವಿವರಿಸಿರುವುದಿಲ್ಲ ಮತ್ತು ಸರಿಯಾದ ಕ್ರಮದಲ್ಲಿ ಇಟ್ಟಿರುವುದಿಲ್ಲ. ಟ್ಯಾಲಿ ಅಕೌಂಟಿಂಗ್ ಸಾಫ್ಟ್‌ವೇರ್‌ನ್ನು ಹಣಕಾಸಿನ ಲೆಕ್ಕಹಾಕುವಿಕೆಗಾಗಿ ನಿರ್ವಹಿಸಲಾಗುತ್ತದೆ. (ಪ್ರಮಾಣದ ಆಧಾರದ ಮೇಲೆ) ಆದಾಗ್ಯೂ, ಮಂಗಳೂರು ಮತ್ತು ಧಾರವಾಡ ಘಟಕಗಳಲ್ಲಿ ಟ್ಯಾಲಿ ಅಕೌಂಟಿಂಗ್ ಸಾಫ್ಟ್‌ವೇರ್ ಸಾಮಗ್ರಿಗಳ ಲೆಕ್ಕಹಾಕುವಿಕೆಗೂ ಸಂಯೋಜಿತವಾಗಿರುವುದಿಲ್ಲ.

k) ವ್ಯವಹಾರಿಕ ಸಾಲ ನೀಡಿರುವವರಿಗೆ ಸಂಬಂಧಿಸಿದಂತೆ, ವಿಶೇಷವಾಗಿ ದೀರ್ಘ ಸಮಯದಿಂದ ಪಾವತಿಸಬೇಕಾಗಿರುವ ಬಾಕಿಗಳು, ಟೆಂಡರುಗಳನ್ನು ಅಂತಿಮಗೊಳಿಸಲಾಗಿದ್ದರೂ ಕೂಡ ಹಿಂದಿಟ್ಟುಕೊಳ್ಳಲಾಗಿರುವ ಸಂಚಕಾರ ಠೇವಣಿಗಳು ಮತ್ತು ಇತರ ಹೊಣೆಗಾರಿಕೆಗಳಿಗೆ ಸಂಬಂಧಿಸಿದಂತೆ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಈಗ ಬಲಪಡಿಸಬೇಕಾಗಿರುತ್ತದೆ.

l) ಗ್ರಾಹಕರ ಸಾಲದ ಮಿತಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣವನ್ನು ಇನ್ನೂ ಉತ್ತಮವಾಗಿ ವ್ಯಾಖ್ಯಾನಿಸಿ, ಕಾಲಕಾಲಕ್ಕೆ ವಿಮರ್ಶಿಸಬೇಕಾಗಿರುತ್ತದೆ ಮತ್ತು ಬ್ಯಾಂಕ್ ಠೇವಣಿ/ಬ್ಯಾಂಕ್ ಖಾತರಿಗೆ ಅನುಸಾರವಾಗಿ ಸಾಲದ ಮಿತಿಗಳನ್ನು ನಿಯಂತ್ರಿಸಬೇಕಾಗಿರುತ್ತದೆ.

m) ಸಾಗಾಣಿಕೆ ಗುತ್ತಿಗೆದಾರರಿಂದ ಸೌದೆ ಮತ್ತು ಮರದ ತೊಗಟೆಗಳ ಸಾಗಾಟದ ಸಮಯದಲ್ಲಿ ಕಂಡುಬರುವ ಕೊರತೆಗಳ ಮೌಲ್ಯವನ್ನು ಕಂಡುಹಿಡಿಯುವ ಬಗ್ಗೆ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಸ್ಪಷ್ಟವಾಗಿ ನಿರ್ಧರಿಸಬೇಕಾಗಿರುತ್ತದೆ ಮತ್ತು ಸರಿಯಾದ ಸ್ಥಳದಲ್ಲಿ ಇರಿಸಬೇಕಾಗಿರುತ್ತದೆ. ಸಧ್ಯದಲ್ಲಿ, ಕೊರತೆಗಳ ಮೌಲ್ಯವನ್ನು ಮಾರಾಟದ ಬೆಲೆಯ ಮೇಲೆ ವಸೂಲಿಯನ್ನು ಜಾರಿಗೊಳಿಸುವ ಬದಲು ವಸ್ತುವಿನ ಅಸಲಿನ ಬೆಲೆಯ ಲಾಭದ ಅಂಶದ ಮೇಲೆ ಗುರುತಿಸಲಾಗುತ್ತಿದೆ. ಸಾಗಾಣಿಕೆ ಗುತ್ತಿಗೆದಾರರ ಜೊತೆ ಮಾಡಿಕೊಂಡಿರುವ ಒಪ್ಪಂದದಲ್ಲಿ ಕೊರತೆಯಾಗಿರುವ ಸಾಮಗ್ರಿಗಳ ಮೌಲ್ಯವನ್ನು ವಸೂಲು ಮಾಡುವ ಬಗ್ಗೆ ಯಾವುದೇ ಅವಕಾಶಗಳೂ ಇರುವುದಿಲ್ಲ.

n) ದಾಂಡೇಲಿ ಮತ್ತು ಶಿವಮೊಗ್ಗದಲ್ಲಿ ಇರುವ ಜಮೀನಿಗೆ ಸಂಬಂಧಿಸಿದಂತೆ ಕೆಎಸ್‌ಎಫ್‌ಐಸಿ ಯ ಪರವಾಗಿ ಹಕ್ಕುಪತ್ರಗಳ ಲಭಿಸಿರುವುದಿಲ್ಲ. ಗೊಟ್ಟಿಪುರ ಮತ್ತು ಟಿಂಬರ್‌ಯಾರ್ಡ್ ಬಡಾವಣೆಯಲ್ಲಿರುವ ಜಮೀನಿನ ಮೌಲ್ಯವನ್ನು ಇನ್ನೂ ಅಂತಿಮಗೊಳಿಸಬೇಕಾಗಿರುತ್ತದೆ ಮತ್ತು ಲೆಕ್ಕದ ಪುಸ್ತಕಗಳಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗಿರುತ್ತದೆ.

o) ಕಂಪನಿಯ ನಿರ್ದೇಶಕರ ಮಂಡಳಿಯು ಹಣಕಾಸಿನ ವರದಿ ಮಾಡುವಿಕೆಯ ಮೇಲೆ ನಿಯಂತ್ರಣ ಪ್ರಾರಂಭಿಕ ಹಂತದಲ್ಲಿನ ನಿಯಂತ್ರಣಗಳನ್ನು ಗುರುತಿಸಿ ದಾಖಲೆಗೊಳಪಡಿಸುವುದು, ದಾಖಲೆ ಪತ್ರಗಳ ನಿರ್ವಹಣೆಯನ್ನು ಮುಂದುವರೆಸುವುದು ಮತ್ತು ಪ್ರಮುಖ ಹಣಕಾಸಿನ ಪ್ರತಿಕ್ರಿಯೆಯಲ್ಲಿ ವಿವರಣೆಗಳು, ದಾಖಲೆ ಪತ್ರಗಳಲ್ಲಿ ಮೋಸದ ಸಂಭಾವ್ಯತೆಯ ನಿಯಂತ್ರಣ, ನಿರ್ವಹಣೆಯ ಮಟ್ಟದಲ್ಲಿಯೇ ನಿಯಂತ್ರಣ ಸಾಧಿಸುವುದು ಮತ್ತು ಈ ಎಲ್ಲಾ ಪ್ರತಿಕ್ರಿಯೆಗಳಿಗೂ ರಿಸ್ಕ್ ಕಂಟ್ರೋಲ್ ಮ್ಯಾಟ್ರಿಸಸ್‌ನಲ್ಲಿ (ಆರ್‌ಸಿಎಂ) ಆದಾಯ ತೆರಿಗೆ ಸಾಮಾನ್ಯ ನಿಯಂತ್ರಣ, ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಸೇರಿದಂತೆ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಸುಗಮಗೊಳಿಸಿ ಮತ್ತು ಬಲಪಡಿಸುವ ಉದ್ದೇಶದಿಂದ ಕಂಪನಿಯ ನಿರ್ದೇಶಕರ ಮಂಡಳಿಯು ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಇನ್ನೂ ಸಿದ್ದಪಡಿಸಬೇಕಾಗಿರುತ್ತದೆ.

p) ಕಂಪನಿಯು ಆಂತರಿಕ ಲೆಕ್ಕಪರಿಶೋಧಕರನ್ನು ಹೊಂದಿದ್ದರೂ ಕೂಡ, ಆಕ್ಷೇಪಣೆಯ ವರದಿಗಳನ್ನು ನಿರ್ದೇಶಕ ಮಂಡಳಿಯ ಸಭೆಯಲ್ಲಾಗಲೀ ಅಥವಾ ಪ್ರಧಾನ ಕಛೇರಿಯಲ್ಲಾಗಲೀ ಕಾಲಕಾಲಕ್ಕೆ ಪರಿಶೀಲಿಸಲಾಗಿರುವುದಿಲ್ಲ. ಮುಂದುವರೆದು ಆರ್ಥಿಕ ಪಟ್ಟಿಗಳನ್ನು ಪರಿಶೀಲಿಸಲು ವೃತ್ತಿಪರ ಅರ್ಹತೆ ಇರುವ ಯಾವುದೇ ಆರ್ಥಿಕ ನಿರ್ವಹಣಾ ಅಧಿಕಾರಿಗಳು ಇರುವುದಿಲ್ಲ.

q) 28.02.2018 ರಂದು ಮಂಡಳಿಯ ಸಭೆ ನಡೆಯಿತು ಮತ್ತು ಮುಂದಿನ ಸಭೆಯು 11.09.2018 ರಂದು ಮಾತ್ರ ನಡೆಯಿತು. ಹೀಗೆ ಮುಂದಿನ ನಿರ್ದೇಶಕ ಮಂಡಳಿಯ ಸಭೆಗೆ 195 ದಿವಸಗಳ ಅಂತರವಾಗಿರುತ್ತದೆ. ಕಾಲಕಾಲಕ್ಕೆ ಕಾರ್ಪೊರೇಟ್ ಗವರ್ನನ್ಸ್ ವಿರುದ್ಧವಾಗಿ ಸಂಸ್ಥೆಯ ಆಡಳಿತ ಮಂಡಳಿಯಿಂದ ಕಂಪನಿಯ ಚಟುವಟಿಕೆಗಳನ್ನು ಪರಿಶೀಲಿಸಲಾಗಿರುವುದಿಲ್ಲವೆಂದು ತಿಳಿದುಬರುತ್ತದೆ.

r) ಅಧಿಕಾರ ಚಲಾಯಿಸುವ ನೀತಿಯನ್ನು ಎರಡು ದಶಕಗಳ ಹಿಂದೆಯೇ ರೂಪಿಸಲಾಗಿತ್ತಾದರೂ ಕೂಡ ಇದನ್ನು ಪರಿಷ್ಕರಿಸಲಾಗಿರುವುದಿಲ್ಲ ಮತ್ತು ನವೀಕರಿಸಿರುವುದಿಲ್ಲ.

ನಮ್ಮ ಅಭಿಪ್ರಾಯದಲ್ಲಿ, ನಿಯಂತ್ರಣ ಮಾನದಂಡದ ಉದ್ದೇಶ ಸಾಧನೆಯ ಭೌತಿಕ ದೌರ್ಬಲ್ಯಗಳ ಪರಿಣಾಮಗಳು/ ಸಂಭಾವ್ಯ ಪರಿಣಾಮಗಳ ಬಗ್ಗೆ ನಾವು ಮೇಲೆ ವಿವರಿಸಿರುವುದನ್ನು ಹೊರತುಪಡಿಸಿ, ನಮ್ಮ ಗರಿಷ್ಠ ಮಾಹಿತಿಯಂತೆ ಹಾಗೂ ನಮಗೆ ನೀಡಲಾಗಿರುವ ವಿವರಣೆಗಳಂತೆ, ಕಂಪನಿಯಲ್ಲಿ ಸಮರ್ಪಕವಾದಂತಹ, ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ವ್ಯವಸ್ಥೆಯು ಇದ್ದು, ಅಂತಹ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ವ್ಯವಸ್ಥೆಯು 31ನೇ ಮಾರ್ಚ್ 2018 ರಿಂದ ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬರಲಿದೆ. ಇನ್‌ಸ್ಟಿಟ್ಯೂಟ್ ಆಫ್ ಚಾಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಇವರು ಹೊರಡಿಸಿರುವ ಮಾರ್ಗದರ್ಶಿ ಟಿಪ್ಪಣಿ ಆಡಿಟ್ ಆಫ್ ಇಂಟರ್ನಲ್ ಫೈನಾನ್ಷಿಯಲ್ ಕಂಟ್ರೋಲ್ ಓವರ್ ಫೈನಾನ್ಷಿಯಲ್ ರಿಪೋರ್ಟಿಂಗ್‌ನಲ್ಲಿ ವಿವರಿಸಿರುವ ಆಂತರಿಕ ನಿಯಂತ್ರಣ ವಿಷಯಕ್ಕೆ ಸಂಬಂಧಿಸಿದ ಅತ್ಯಾವಶ್ಯಕ ಅಂಶಗಳನ್ನು ಒಳಗೊಂಡ ಭಾರತದ ಸನ್ನದ್ದು ಲೆಕ್ಕಪರಿಶೋಧಕರ ಸಂಸ್ಥೆಯು ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ವ್ಯವಸ್ಥೆಯನ್ನು ಕಂಪನಿಯು ಸ್ಥಾಪಿಸಿದೆ.

ಇತರೆ ವಿಷಯಗಳು

ಸೆಕ್ಷನ್ 143 (3)(i) ನ ವರದಿಯು ಅವಶ್ಯಕತೆ ಮತ್ತು ಕಾರ್ಯರೂಪ ಆಧರಿತ ಆರ್ಥಿಕ ನಿಯಂತ್ರಣಗಳು ಉಪಸಂಸ್ಥೆಯ, ಭಾರತದಲ್ಲಿ ಸ್ಥಾಪಿಸಿರುವ, ಉಪಸಂಸ್ಥೆಯ ಆಡಿಟ್ ವರದಿ ಮೇಲೆ ಅವಲಂಬಿತವಾಗಿದೆ. ಈ ವರದಿಗಳ ಬಗ್ಗೆ ನಮ್ಮ ವರದಿಯು ಮೇಲಿನ ವಿಷಯದಲ್ಲಿ ಬದಲಾವಣೆಯಾಗಿರುವುದಿಲ್ಲ.

ಪಿಎನ್‌ಆರ್ & ಕಂ.,
ಸನ್ನದು ಲೆಕ್ಕಿಗರ ಪರವಾಗಿ
ಸಂಸ್ಥೆ ನೋಂದಣಿ ಸಂಖ್ಯೆ : 002495S
ಸಹಿ/-
(ಗುರುಪ್ರಸಾದ್ ಭಾದ್ಯ)
ಪಾಲುದಾರರು
ಸದಸ್ಯತ್ವದ ಸಂಖ್ಯೆ: 234052

ದಿನಾಂಕ: 07.12.2018
ಸ್ಥಳ : ಬೆಂಗಳೂರು

ಅನುಬಂಧ–B

(ನಮ್ಮ ಇದೇ ದಿನಾಂಕದ ವರದಿಯ ಕಂಡಿಕೆ 8(h)ರಲ್ಲಿ ಉಲ್ಲೇಖಿಸಿರುವಂತೆ)
ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ
ಕಂಪನಿಗಳ ಕಾಯ್ದೆ 2013ರ ("ದಿ ಆಕ್ಟ್") ಕಂಡಿಕೆ 143, ಉಪ ಕಂಡಿಕೆ (5)ರಂತೆ ನಿರ್ದೇಶನಗಳು

ಕ್ರ. ಸಂ.	ನಿರ್ದೇಶನಗಳು	ವಿವರಣೆಗಳು
1.	ಕಂಪನಿಯು ಸ್ವತಂತ್ರವಾಗಿ ಮತ್ತು ಲೀಸ್ಹೋಲ್ಡ್ ಭೂಮಿಗೆ ಕ್ರಮವಾಗಿ ಸ್ಪಷ್ಟ ಶೀರ್ಷಿಕೆ/ಗುತ್ತಿಗೆ ಕಾರ್ಯಗಳನ್ನು ಹೊಂದಿದೆಯೇ? ಇಲ್ಲದಿದ್ದಲ್ಲಿ ದಯವಿಟ್ಟು ಶೀರ್ಷಿಕೆ ಮತ್ತು ಗುತ್ತಿಗೆ ಲಭ್ಯವಿಲ್ಲದ ಫ್ರೀಹೋಲ್ಡ್ ಮತ್ತು ಲೀಸ್ಹೋಲ್ಡ್ ಭೂ ಪ್ರದೇಶವನ್ನು ತಿಳಿಸಿ.	ಕಂಪನಿಯು ಅನುಕ್ರಮವಾಗಿ ಸ್ವತಂತ್ರವಾಗಿ ಮತ್ತು ಲೀಸ್ಹೋಲ್ಡ್ ಭೂಮಿಗೆ ಕ್ರಮವಾಗಿ ಸ್ಪಷ್ಟ ಶೀರ್ಷಿಕೆ/ ಗುತ್ತಿಗೆ ದಾಖಲೆಗಳನ್ನು ಹೊಂದಿರುವುದಿಲ್ಲ. ಇವುಗಳನ್ನು 31.10 ರಿಂದ 31.15ರ ವರೆಗಿನ ಟಿಪ್ಪಣಿ ಗಳಲ್ಲಿ ಆರ್ಥಿಕ ಪಟ್ಟಿಗಳಲ್ಲಿ ಬಹಿರಂಗಪಡಿಸಲಾಗಿದೆ. ಅನುಬಂಧ–ಎ, ಪ್ಯಾರಾಗ್ರಾಫ್ i(c) ದಿನಾಂಕ: 17.10.2018ರ ನಮ್ಮ ವರದಿ. ಈ ಟಿಪ್ಪಣಿಗಳನ್ನು ದೀರ್ಘಕಾಲದವರೆಗಿನ ವರ್ಷದ ನಂತರ ಪ್ರತಿ ವರ್ಷ ಬಹಿರಂಗ ಪಡಿಸಲಾಗಿದೆ. ವಿವರಗಳು ಈ ಕೆಳಗಿನಂತಿವೆ:– 1. ಶಿವಮೊಗ್ಗದಲ್ಲಿರುವ (ಡಬ್ಲ್ಯೂಪಿಪಿ) 18 ಎಕರೆ 35 ಗುಂಟೆ ಮತ್ತು ದಾಂಡೇಲಿಯಲ್ಲಿ 15 ಎಕರೆ 25 ಗುಂಟೆ ರೂ. 1,89,879 ಮೌಲ್ಯದ ಜಮೀನಿನ ಹಕ್ಕು ಪತ್ರಗಳನ್ನು 1975 ರಿಂದಲೂ ಕಂಪನಿಯ ಹೆಸರಿಗೆ ವರ್ಗಾಯಿಸಲಾಗಿರುವುದಿಲ್ಲ. 2. ದಿನಾಂಕ: 14.11.2014ರ ಆದೇಶ ಸಂಖ್ಯೆ. ಎಫ್ಇಇ 104 ಎಫ್‌ಪಿಸಿ 2014ರಂತೆ ಸರ್ವೆ ನಂ. 23/6ಎ1ಬಿ2, 23–4ಬಿ, 23–12ಬಿ, 23–6ಎ2ಬಿ, 23–6ಬಿ ಮತ್ತು 23/3(ಭಾಗ)ರಲ್ಲಿರುವ 5–89 ಎಕರೆ ವಿಸ್ತೀರ್ಣವಾದ ಕೆಎಸ್ಎಫ್ಐಸಿ ಯ ಜಮೀನನ್ನು ಜಿಲ್ಲಾ ಕಛೇರಿಗಳ ಸಂಕೀರ್ಣ ಕಟ್ಟಡದ ನಿರ್ಮಾಣದ ಉದ್ದೇಶದಿಂದ ದಕ್ಷಿಣ ಕನ್ನಡದ ಜಿಲ್ಲಾಧಿಕಾರಿಗಳ ಪರವಾಗಿ ಬದಲಾಯಿಸಿಕೊಳ್ಳಲು ಅನುಮತಿ ನೀಡಿರುತ್ತದೆ. ಇದಕ್ಕೆ ಬದಲಾಗಿ, ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರು ಮಂಗಳೂರು ತಾಲ್ಲೂಕಿನ ಬಂಗ್ರೆ ಕೂಳೂರು ಗ್ರಾಮದ ಸರ್ವೆ ನಂ. 38–1ಎ ಯಲ್ಲಿರುವ 4.50 ಎಕರೆ ಜಮೀನನ್ನು ಕೆಎಸ್ಎಫ್ಐಸಿ, ಮಂಗಳೂರು ಇವರಿಗೆ, ಮೇಲ್ಕಂಡ ಸರ್ಕಾರಿ ಆದೇಶದಲ್ಲಿ ವಿಧಿಸಲಾಗಿರುವ ಕೆಲವೊಂದು ನಿಬಂಧನೆಗಳೊಂದಿಗೆ ಬದಲಾಯಿಸಿಕೊಳ್ಳಲು ಅನುಮತಿ ನೀಡಿರುತ್ತದೆ. ಅದರಂತೆ ಮೇಲ್ಕಂಡ ಜಮೀನಿನ ಆರ್‌ಟಿಸಿಯಲ್ಲಿ ಸೂಕ್ತ ದಾಖಲಾತಿಗಳನ್ನು ಸೇರಿಸಲಾಗಿರುತ್ತದೆ. ವಿಧಿಸಲಾಗಿರುವ ಷರತ್ತುಗಳು ಅಂದರೆ, ಕಾಂಪೌಂಡ್ ಗೋಡೆಯ ನಿರ್ಮಾಣ, ಸ್ವಾಧೀನಪಡಿಸಿಕೊಳ್ಳಲಾಗಿರುವ 1.39 ಎಕರೆ ಹೆಚ್ಚುವರಿ ಜಮೀನಿಗೆ ಪರಿಹಾರವಾಗಿ ಹೆಚ್ಚುವರಿ 3.50 ಎಕರೆ ಜಮೀನನ್ನು ಮಂಜೂರು ಮಾಡುವುದು, ಹೊಸ ಕಟ್ಟಡದಲ್ಲಿ 5000 ಚದರ ಅಡಿಯ

